



ಕಾಂ. ಶ್ರೀಧರ ಶರ್ಮ | ಕಾಂ. ರಾಮೇಂದ್ರ ನಾಥ್

ಲಾಲ್ ಸಲಾಂ

ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16, ಸಂಚಿಕೆ 7, ಫೆಬ್ರವರಿ 7-13, 2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಸಂಘ ಪರಿವಾರದ ಹಿಡಿತ ಬಿಗಿಗೊಂಡ ಆರು ತಿಂಗಳು



ಉತ್ತರ ಪ್ರದೇಶದಲ್ಲಿ ಏನಾಗುತ್ತಿದೆ?

- ಮತ್ತದೇ ಕೋಮುವಾದಿ ಅಜೆಂಡಾ



ಬಜೆಟ್ 2022-23

- ಜನರ ಹಿತಾಸಕ್ತಿಗಳಿಗೆ ವಿಶ್ವಾಸ ದ್ರೋಹ
- ಶುದ್ಧ ಅಜ್ಞಾನದ ಪ್ರದರ್ಶನ
- ಯಾರಿಗೆ ಅಮೃತ ಕಾಲವಮ್ಮಾ?



ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ಫೆ 23-24 ರ ಬದಲು ಮಾರ್ಚ್ 28-29 ರಂದು

ಜನವರಿ 31–ವಿಶ್ವಾಸದ್ರೋಹ ದಿನ: ದೇಶಾದ್ಯಂತ ರೈತರಿಂದ ಪ್ರತಿಭಟನೆ

ಮಾ. 28–29ರಂದು ಕಾರ್ಮಿಕರಿಗೆ ಬೆಂಬಲವಾಗಿ ಗ್ರಾಮೀಣ ಮುಷ್ಕರ

2020–21ರ ಐತಿಹಾಸಿಕ ಕಿಸಾನ್ ಆಂದೋಲನದ ರೈತರಿಗೆ ನೀಡಿದ ಭರವಸೆಗಳನ್ನು ಈಡೇರಿಸದೆ ಭಾರತ ಸರ್ಕಾರವು ವಚನಭ್ರಷ್ಟವಾಗಿರುವುದನ್ನು ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಕರ್ನಾಟಕ, ಮಧ್ಯಪ್ರದೇಶ, ಆಂಧ್ರಪ್ರದೇಶ, ಹಿಮಾಚಲ ಪ್ರದೇಶ, ತೆಲಂಗಾಣ, ಒಡಿಶಾ, ತಮಿಳುನಾಡು, ರಾಜಸ್ಥಾನ, ಗುಜರಾತ್, ತ್ರಿಪುರ ಮತ್ತಿತರ ರಾಜ್ಯಗಳಲ್ಲಿ.ಪ್ರದರ್ಶನಗಳು, ಮೆರವಣಿಗೆಗಳು ಮತ್ತು ಪ್ರತಿಕೃತಿ ದಹನದೊಂದಿಗೆ "ವಿಶ್ವಾಸದ್ರೋಹದ ದಿನ" ಎಂದು ಆಚರಿಸಲಾಗಿದೆ.

ಸಂಯುಕ್ತ ಕಿಸಾನ್ ಮೋರ್ಚಾದ ಕರೆಯನ್ನು ಅನುಸರಿಸಿ, ರಾಷ್ಟ್ರದಾದ್ಯಂತ ಹತ್ತಾರು ಸಾವಿರ ರೈತರು "ವಿಶ್ವಾಸದ್ರೋಹದ ದಿನ" ವನ್ನು ಆಚರಿಸಿದರು. ಭಾರತದಾದ್ಯಂತ ನೂರಾರು ಜಿಲ್ಲೆಗಳು ಮತ್ತು ಬ್ಲಾಕ್‌ಗಳಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದವು, ಜಿಲ್ಲಾಧಿಕಾರಿಗಳು, ಎಸ್‌ಡಿಎಂಗಳು ಮತ್ತು ಎಡಿಎಂಗಳ ಮೂಲಕ ಭಾರತದ ರಾಷ್ಟ್ರಪತಿಗಳಿಗೆ ಜ್ಞಾಪಕ ಪತ್ರಗಳನ್ನು ಸಲ್ಲಿಸಲಾಯಿತು.

ಡಿಸೆಂಬರ್ 2021 ರಲ್ಲಿ ಪ್ರತಿಭ್‌ಟನಾ ನಿರತ ರೈತರಿಗೆ ನೀಡಿದ ಲಿಖಿತ ಭರವಸೆಗಳನ್ನು ಈಡೇರಿಸದೆ ಭಾರತ ಸರ್ಕಾರವು ವಚನಭ್ರಷ್ಟತೆಯನ್ನು ಮುಂದುವರೆಸಿದರೆ ರೈತರು ತಮ್ಮ ಆಂದೋಲನವನ್ನು ಪುನರಾರಂಭಿಸುವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಈ ಪ್ರತಿಭಟನಾ ಕಾರ್ಯಕ್ರಮದ ಮೂಲಕ ಸಾರಿ ಹೇಳಿದೆ.

ರಾಷ್ಟ್ರದ ಮುಖ್ಯಸ್ಥರಾಗಿ ದೇಶದ ಅತಿ ದೊಡ್ಡ ವರ್ಗವಾದ ಅನ್ನದಾತ ರೈತರ ಹಿತಾಸಕ್ತಿ ಕಾಪಾಡುವುದು ರಾಷ್ಟ್ರಪತಿಗಳ ಸಾಂವಿಧಾನಿಕ ಬಾಧ್ಯತೆಯಾಗಿದೆ ಎಂದಿರುವ ಜ್ಞಾಪಕ ಪತ್ರ, ರೈತರಿಗೆ ಈ ರೀತಿಯ ವಂಚನೆ ಮಾಡಬಾರದು ಎಂದು ಸರ್ಕಾರವನ್ನು ಎಚ್ಚರಿಸಿದೆ. ರೈತರ ಶ್ರಮದಿಂದಾಗಿ ದೇಶವು ಆಹಾರ ಧಾನ್ಯಗಳಲ್ಲಿ ಸ್ವಾವಲಂಬಿಯಾಗಿದೆ. ಲಾಕ್‌ಡೌನ್ ಮತ್ತು ಆರ್ಥಿಕ ಮಂದಗತಿಯು ಹೊರತಾಗಿಯೂ ರೈತರ ಅವಿರತ ಪ್ರಯತ್ನದಿಂದಾಗಿ, ದೇಶದ ಕೃಷಿ ಉತ್ಪಾದನೆಯು ನಿರಂತರವಾಗಿ ಹೆಚ್ಚುತ್ತಿದೆ. ಹೀಗಿರುವಾಗ ರೈತರೊಂದಿಗೆ ಕುಟಿಲತನ ಇಡೀ ದೇಶಕ್ಕೆ ವಿಪತ್ತು ತಂದೊಡ್ಡಬಹುದು ಎಂದು ರೈತರ ಜ್ಞಾಪಕ ಪತ್ರ ರಾಷ್ಟ್ರಪತಿಗಳಿಗೆ ನೆನಪಿಸಿದೆ.

ಡಿಸೆಂಬರ್ 9, 2021 ರಂದು ಸಂಯುಕ್ತ ಕಿಸಾನ್ ಮೋರ್ಚಾಗೆ ಪತ್ರದಲ್ಲಿ ಭಾರತ ಸರ್ಕಾರವು ನೀಡಿದ ಲಿಖಿತ ಭರವಸೆಗಳಲ್ಲಿ ಒಂದನ್ನೂ ಸಹ ಈಡೇರಿಸಲಾಗಿಲ್ಲ ಎಂಬುದನ್ನು ಗಮನಿಸಬೇಕು. ರೈತರ ತಾಳ್ಮೆಗೆ ಸವಾಲು ಹಾಕುವುದರ ವಿರುದ್ಧ ಬಿಜೆಪಿ ಸರಕಾರಕ್ಕೆ ಎಚ್ಚರಿಕೆ ನೀಡಿದ ಮೋರ್ಚಾ, ಆದಷ್ಟು ಬೇಗ ಭರವಸೆಗಳನ್ನು ಈಡೇರಿಸದಿದ್ದಲ್ಲಿ ರೈತರು ಆಂದೋಲನವನ್ನು ಪುನರಾರಂಭಿಸುವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಎಂದು ಘೋಷಿಸಿದ್ದಾರೆ.

ಮೊದಲೇ ಹೇಳಿದಂತೆ, ಮೋರ್ಚಾ "ಮಿಷನ್ ಉತ್ತರ ಪ್ರದೇಶ"ವನ್ನು ಮುಂದುವರೆಸುತ್ತದೆ ಮತ್ತು ಬಿಜೆಪಿಯನ್ನು ಶಿಕ್ಷಿಸಲು ಮತ್ತು ಸೋಲಿಸಲು ರಾಜ್ಯಾದ್ಯಂತ ಪ್ರಚಾರ ಮಾಡುತ್ತದೆ. ಫೆಬ್ರವರಿ 3 ರಂದು ಪತ್ರಿಕಾಗೋಷ್ಠಿಯೊಂದಿಗೆ ಮಿಷನ್‌ನ ಹೊಸ ಹಂತವನ್ನು ಘೋಷಿಸಲಾಗುತ್ತದೆ ಹೇಳಿದೆ.

ಚುನಾವಣೆಗಳು ನಡೆಯಲಿರುವುದರಿಂದ, ಕೇಂದ್ರೀಯ ಕಾರ್ಮಿಕ ಸಂಘಟನೆಗಳು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರದ ದಿನಾಂಕಗಳನ್ನು ಫೆಬ್ರವರಿ 23–24 ರಿಂದ ಮಾರ್ಚ್ 28–29ಕ್ಕೆ ಬದಲಾಯಿಸುವ ಸೂಚನೆ ನೀಡಿದ್ದಾರೆ. ಇದನ್ನು ಅನುಮೋದಿಸುವುದಾಗಿ ಹೇಳಿರುವ ಎಸ್.ಕೆ.ಎಂ. ಅದಕ್ಕೆ ಸಂಪೂರ್ಣ ಬೆಂಬಲವನ್ನು ಪುನರುಚ್ಚರಿಸುತ್ತ, ಅದಕ್ಕನುಗುಣವಾಗಿ ಭಾರತದಾದ್ಯಂತ ಗ್ರಾಮೀಣ ಮುಷ್ಕರವನ್ನು ಮಾರ್ಚ್ 28 ಮತ್ತು 29 ರಂದು ನಡೆಸುವುದಾಗಿ ಹೇಳಿದೆ.

ಭಾರತ ಸರ್ಕಾರವು ಪ್ರಸ್ತುತ ಕನಿಷ್ಟ ಬೆಂಬಲ ಬೆಲೆ(ಎಂ.ಎಸ್.ಪಿ.)ಗೆ ಸಂಬಂಧಿಸಿದ



ತನ್ನ ಸುಳ್ಳುಗಳನ್ನು ಮುಂದುವರೆಸಿದೆ, ಆರ್ಥಿಕ ಸಮೀಕ್ಷೆಯ ವರದಿ 2021–22 ರೊಂದಿಗೆ ಅಂತಹ ಎಂ.ಎಸ್.ಪಿ.ಗಳನ್ನು ಪ್ರಕಟಿಸಲು ವೆಚ್ಚದ ಪರಿಕಲ್ಪನೆಯನ್ನು ಬಳಸಲಾಗುತ್ತಿದೆ ಎಂದು ಹೇಳಿದೆ. ಸಿ2 ಉತ್ಪಾದನಾ ವೆಚ್ಚವನ್ನು ನಿರ್ಲಕ್ಷಿಸಿ, ರೈತರಿಗೆ ಅವರ ನಿಜವಾದ ಅರ್ಹತೆಯನ್ನು ನಿರಾಕರಿಸುವ ಎ2+ ಕುಟುಂಬ ಶ್ರಮದ ವೆಚ್ಚದ ಪರಿಕಲ್ಪನೆಯು ಮುಂದುವರಿದಿದೆ. ಅಲ್ಪ ಪ್ರಮಾಣದ ಎಂ.ಎಸ್.ಪಿ. ಪ್ರಕಟನೆಗಳೊಂದಿಗೆ, ಬೆಳೆ ವೈವಿಧ್ಯೀಕರಣ ಸಂಭವಿಸಿದೆ ಎನ್ನುವುದು ಸುಳ್ಳು ದಾವೆಯಾಗಿದೆ ಎಂದಿರುವ ಎಸ್‌ಕೆಎಂನ ಜ್ಞಾಪಕ ಪತ್ರ,, ಅಂತಹ ವೈವಿಧ್ಯೀಕರಣವು ನಿಜವಾಗಿಯೂ ಸಾಧ್ಯವಾಗಬೇಕಾದರೆ, ಎಂಎಸ್‌ಪಿ, ಎಣ್ಣೆಕಾಳುಗಳು, ರಾಗಿ ಮತ್ತು ದ್ವಿದಳ ಧಾನ್ಯಗಳು ಸೇರಿದಂತೆ ಎಲ್ಲಾ ಬೆಳೆಗಳಿಗೆ ಕಾನೂನುಬದ್ಧವಾಗಿ ಖಾತರಿಪಡಿಸಿದ ಹಕ್ಕಾಗಬೇಕು ಎಂಬುದು ರೈತರಿಗೆ ತಿಳಿದಿದೆ ಎಂದು ಹೇಳಿದೆ.

ಕಾರ್ಮಿಕರ ಸಾರ್ವತ್ರಿಕ ಮುಷ್ಕರ ಫೆಬ್ರುವರಿ 23–24ರ ಬದಲು ಮಾರ್ಚ್ 28–29 ರಂದು–ಜಂಟಿ ವೇದಿಕೆ ನಿರ್ಧಾರ

28.01.2022 ರಂದು ನಡೆದ ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ವಲಯವಾರು ಒಕ್ಕೂಟಗಳು/ಸಂಘಗಳ ಜಂಟಿ ವೇದಿಕೆಯ ಆನ್‌ಲೈನ್ ಸಭೆಯು ಸರ್ಕಾರದ ಕಾರ್ಮಿಕ ವಿರೋಧಿ, ಜನವಿರೋಧಿ, ರಾಷ್ಟ್ರವಿರೋಧಿ ನೀತಿಗಳ ವಿರುದ್ಧ ಎರಡು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ದಿನಾಂಕಗಳನ್ನು 23–24 ಫೆಬ್ರವರಿ, 2022 ರಿಂದ ಬದಲಾಯಿಸಿದೆ. 28–29 ಮಾರ್ಚ್, 2022 ಗೆ ಬದಲಾಯಿಸಲು ನಿರ್ಧರಿಸಿದೆ

ಸಂಸತ್ತಿನ 2022 ರ ಬಜೆಟ್ ಅಧಿವೇಶನದ ವೇಳೆಯಲ್ಲಿ ಎರಡು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ನಡೆಸಲು ನವೆಂಬರ್ 11, 2021 ರಂದು ನಡೆದ ಕಾರ್ಮಿಕರ ರಾಷ್ಟ್ರೀಯ ಸಮಾವೇಶದ ನಿರ್ಧಾರದ ಪ್ರಕಾರ 23–24 ಫೆಬ್ರವರಿ 2022 ರಂದು ಮುಷ್ಕರದ ದಿನಾಂಕಗಳನ್ನು ಡಿಸೆಂಬರ್ 3, 2021 ರಂದು ನಡೆದ ವೇದಿಕೆಯ ಜಂಟಿ ಸಭೆಯಲ್ಲಿ ನಿರ್ಧರಿಸಲಾಯಿತು.

ಹಲವಾರು ರಾಜ್ಯಗಳು ಮತ್ತು ವಲಯಗಳಲ್ಲಿ ಮುಷ್ಕರದ ಸಿದ್ಧತೆಗಳು ಪ್ರಾರಂಭವಾಗಿದ್ದು, ಜಂಟಿ ರಾಜ್ಯ ಮಟ್ಟದ ಸಮಾವೇಶಗಳು ಮತ್ತು ಕೆಲವು ರಾಜ್ಯಗಳಲ್ಲಿ ಜಿಲ್ಲಾ ಮಟ್ಟದ ಸಮಾವೇಶಗಳು ಸಹ ನಡೆದಿವೆ.

ಆದಾಗ್ಯೂ, ಓಮಿಕ್ರಾನ್ ಸಾಂಕ್ರಾಮಿಕದ ಮೂರನೇ ಅಲೆಯಿಂದಾಗಿ ಮುಷ್ಕರದ ಸಿದ್ಧತೆಗಳ ಮೇಲೆ ತೀವ್ರವಾದ ನಿರ್ಬಂಧಗಳನ್ನು ಹಾಕಲಾಗಿದೆ ಎಂದು ಹಲವು ರಾಜ್ಯಗಳು ವರದಿ ಮಾಡಿವೆ. ಇದಲ್ಲದೆ, ಫೆಬ್ರವರಿ 23 ರಂದು ಉತ್ತರಪ್ರದೇಶದಲ್ಲಿ ಒಂದು ಹಂತದ ವಿಧಾನಸಭಾ ಚುನಾವಣೆಗಳು, ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಫೆಬ್ರವರಿ 23–24 ರ ಸಮೀಪದಲ್ಲಿ ನಡೆಯಲಿವೆ ಎಂಬ ಇತರ ಹಲವಾರು ಅಂಶಗಳನ್ನು ಗಮನಿಸಿದ ಮತ್ತು ವಲಯವಾರು ಒಕ್ಕೂಟಗಳು/ಸಂಘಗಳ ಜಂಟಿ ವೇದಿಕೆಯು ಸಾರ್ವತ್ರಿಕ ಮುಷ್ಕರದ ದಿನಾಂಕಗಳನ್ನು 28–29 ಮಾರ್ಚ್, 2022 ಕ್ಕೆ ಮುಂದೂಡಲು ನಿರ್ಧರಿಸಿದೆ. ಆಗ ಸಂಸತ್ತು ಬಜೆಟ್ ಅಧಿವೇಶನದ ಎರಡನೇ ಹಂತವು ನಡೆಯುತ್ತಿರುತ್ತದೆ.

ಎರಡು ದಿನಗಳ ದೇಶಾದ್ಯಂತ ಸಾರ್ವತ್ರಿಕ ಮುಷ್ಕರಕ್ಕೆ ನಡೆಯುತ್ತಿರುವ ಪೂರ್ವಸಿದ್ಧತಾ ಪ್ರಚಾರ–ಪ್ರಕ್ಷೋಭೆ ಮತ್ತು ಇ ತರಚಟುವಟಿಕೆಗಳನ್ನು ತೀವ್ರಗೊಳಿಸಲು ದುಡಿಯುವ ಜನರು ಮತ್ತು ಅವರ ಸಂಘಟನೆಗಳಿಗೆ ಜಂಟಿ ಕರೆ ನೀಡಿರುವ ವೇದಿಕೆ, ವಿನಾಶಕಾರಿ, ರಾಷ್ಟ್ರವಿರೋಧಿ ನೀತಿಯಿಂದ ರಾಷ್ಟ್ರವನ್ನು ಉಳಿಸಿ. ಬಿಜೆಪಿ ಸರ್ಕಾರವನ್ನು ಸೋಲಿಸಲು ಹುರುಪಿನಿಂದ ಪ್ರಚಾರ ಮಾಡುವಂತೆ ಚುನಾವಣೆಗೆ ಒಳಪಟ್ಟಿರುವ ರಾಜ್ಯಗಳಲ್ಲಿನ ಕಾರ್ಮಿಕರು ಮತ್ತು ಅವರ ಕಾರ್ಮಿಕ ಸಂಘಟನೆಗಳಿಗೆ ಕರೆ ನೀಡಿದೆ.



ಎಪ್ರಿಲ್ 6 ರಿಂದ ಕೇರಳದ ಕಣ್ಣೂರಿನಲ್ಲಿ ನಡೆಯಲಿರುವ ಸಿಪಿಐ(ಎಂ)ನ 23ನೇ ಮಹಾಧಿವೇಶನದಲ್ಲಿ ಮಂಡಿಸಲಾಗುವ ರಾಜಕೀಯ ನಿರ್ಣಯದ ಕರಡನ್ನು ಫೆಬ್ರುವರಿ 4 ರಂದು ಪಕ್ಷದ ಕೇಂದ್ರ ಸಮಿತಿಯ ಕಚೇರಿಯಲ್ಲಿ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಇತರ ಪೊಲಿಟ್‌ಬ್ಯುರೊ ಸದಸ್ಯರು ಬಿಡುಗಡೆ ಮಾಡಿದರು. ಇವನ್ನು ಎಲ್ಲ ರಾಜ್ಯ ಭಾಷೆಗಳಲ್ಲಿ ಅನುವಾದಿಸಿ ಮುಂದಿನ ಎರಡು ತಿಂಗಳುಗಳ ಕಾಲ ದೇಶಾದ್ಯಂತ ಪಕ್ಷದ ಸದಸ್ಯರು ಚರ್ಚಿಸಿ ತಿದ್ದುಪಡಿಗಳನ್ನು ಕಳಿಸುತ್ತಾರೆ. ಈ ತಿದ್ದುಪಡಿಗಳನ್ನು ಕುರಿತಂತೆ ಒಂದು ವರದಿಯನ್ನು ಈ ಕರಡಿನ ಜತೆಗೆ ಮಹಾಧಿವೇಶನದಲ್ಲಿ ಮಂಡಿಸಲಾಗುವುದು, ಇದು ಪಕ್ಷದಲ್ಲಿರುವ ಚೈತನ್ಯಶೀಲ ಆಂತರಿಕ ಪ್ರಜಾಪ್ರಭುತ್ವದ ದ್ಯೋತಕ ಎಂದು ಯೆಚುರಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಉತ್ತರ ಪ್ರದೇಶದ ಹಿರಿಯ ಸಿಪಿಐ(ಎಂ) ಮುಖಂಡ ಕಾಂ. ಶ್ರೀಧರ ಶರ್ಮ



ಉತ್ತರಪ್ರದೇಶದ ಹಿರಿಯ ಸಿಪಿಐ(ಎಂ) ಮುಖಂಡ ಕಾಂ. ಶ್ರೀಧರ ಶರ್ಮ ಜನವರಿ 31 ರಂದು ಕಾನ್ಪುರದಲ್ಲಿ ನಿಧನರಾದರು. ಅವರಿಗೆ 77 ವರ್ಷವಾಗಿತ್ತು.

ಡಿವೈಎಫ್‌ಐನ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದ ಶ್ರೀಧರ ಶರ್ಮ ಅದರ ಮೊದಲ ಉತ್ತರಪ್ರದೇಶ ಸಮ್ಮೇಲನದಲ್ಲಿ ರಾಜ್ಯ ಕಾರ್ಯದರ್ಶಿಗಳಾಗಿ ಚುನಾಯಿತರಾದರು, ನಂತರ ಅಧ್ಯಕ್ಷರಾಗಿಯೂ ಯುವಜನ ಸಂಘಟನೆಯಲ್ಲಿ ತೊಡಗಿದ್ದರು. ಮುಂದೆ ಅವರು ಪಕ್ಷದ ಕಾನ್ಪುರ ಜಿಲ್ಲಾ ಕಾರ್ಯದರ್ಶಿ ಮತ್ತು ಉತ್ತರಪ್ರದೇಶ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿಯೂ ಪಕ್ಷದ ಸಂಘಟನೆಯಲ್ಲಿ ತೊಡಗಿದರು..

ತ್ರಿಪುರಾದ ಮಾಜಿ ವಿಧಾನಸಭಾಧ್ಯಕ್ಷ ಕಾಂ.ರಾಮೇಂದ್ರ ನಾಥ್



ತ್ರಿಪುರಾದ ಸಿಪಿಐ(ಎಂ) ಶಾಸಕ ಮತ್ತು ಮಾಜಿ ವಿಧಾನ ಸಭಾಧ್ಯಕ್ಷ ಕಾಂ. ರಾಮೇಂದ್ರ ನಾಥ್ ಫೆಬ್ರುವರಿ 1 ರಂದು ನಿಧನರಾಗಿದ್ದಾರೆ. ಅವರಿಗೆ 69 ವರ್ಷವಾಗಿತ್ತು. ಅವರು ಉತ್ತರ ತ್ರಿಪುರ ಜಿಲ್ಲೆಯ ಯುವರಾಜನಗರ ಕ್ಷೇತ್ರವನ್ನು ಐದು ಬಾರಿ ಪ್ರತಿನಿಧಿಸಿದ್ದರು.

ಸಂಪಾದಕೀಯ

ಕುಂದಾಪುರದಲ್ಲೊಂದು ಅಮಾನವೀಯ ಘಟನೆ

ಉಡುಪಿ ಜಿಲ್ಲೆಯ ಕುಂದಾಪುರ ಸರಕಾರಿ ಜ್ಯೂನಿಯರ್ ಕಾಲೇಜ್‌ನಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರನ್ನು ಕಾಲೇಜ್ ಪ್ರಾಂಶುಪಾಲರು ಕಾಲೇಜಿನ ಗೇಟ್‌ನಲ್ಲೇ ತಡೆದು ಪ್ರವೇಶ ನಿರಾಕರಿಸಿದ ಅಮಾನವೀಯ ಘಟನೆ ನಡೆದಿದೆ. ಇದರಿಂದ ಕಳೆದ ಕೆಲವು ದಿನಗಳಿಂದ ವಿದ್ಯಾರ್ಥಿನಿಯರು ಇಡಿ ದಿನ ತರಗತಿಯಿಂದ ವಂಚಿತರಾಗಿ ಕಾಲೇಜ್ ಆವರಣದ ಹೊರಗೆ ಕುಳಿತು ಸಂಜೆ ವೇಳೆ ಮನೆಗೆ ಹಿಂತಿರುಗುತ್ತಿದ್ದಾರೆ. ವಿದ್ಯಾರ್ಥಿನಿಯರು ಸ್ಕಾರ್ಫ್ ಧರಿಸಿ ಕಾಲೇಜಿಗೆ ಬಂದಿರುವುದನ್ನು ನೆಪ ಮಾಡಿಕೊಂಡು ಪ್ರಾಂಶುಪಾಲ ರಾಮಕೃಷ್ಣ ಬಿ.ಜಿ. ಈ ಆಮಾನವೀಯ ಕೃತ್ಯವನ್ನು ಎಸಗಿದ್ದಾರೆ.

ಸ್ಕಾರ್ಪ್ ಧರಿಸಿ ವಿದ್ಯಾರ್ಥಿನಿಯರು ಕಾಲೇಜಿಗೆ ಬರುವುದು ಅಪರಾಧವಲ್ಲ. ಸ್ಕಾರ್ಪ್ ಧರಿಸಿದ ವಿದ್ಯಾರ್ಥಿನಿಯರು ಶಾಲಾ ಕಾಲೇಜು ತರಗತಿಗಳಿಗೆ ಪ್ರವೇಶಸಬಾರದು ಎಂದು ನಿಷೇದ ಹೇರುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ. ಸ್ಕಾರ್ಫ್ ಧರಿಸುವುದು ಧಾರ್ಮಿಕ ಆಚರಣೆಯಲ್ಲ. ಅದು ದಾರ್ಮಿಕ ಸಂಕೇತವೇನಲ್ಲ. ಬಿಸಿಲು, ಚಳಿಯನ್ನು ಎದುರಿಸಲು ಅದು ಸಹಕಾರಿಯಾಗುತ್ತದೆ. ಇಂದು ಹೆಚ್ಚುತ್ತಿರುವ ಯುವತಿಯರ ಮೇಲಿನ ದೌರ್ಜನ್ಯವನ್ನು ಸ್ವಲ್ಪ ಮಟ್ಟಿಗಾದರು ತಡೆಗಟ್ಟಲು ವಿದ್ಯಾರ್ಥಿನಿಯರಿಗೆ ಅದು ನೆರವಾಗುತ್ತದೆ. ಉತ್ತರ ಕರ್ನಾಟಕದ ಬೀದರ್, ಕಲಬುರಗಿ ಮೊದಲಾದ ಜಿಲ್ಲೆಗಳ ಹಿಂದು ಯುವತಿಯರು ಸಹ ಸ್ಕಾರ್ಫ್‌ಧರಿಸಿ ತಮ್ಮ ರಕ್ಷಣೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಹೆಣ್ಣು ಮಕ್ಕಳ ಈ ಅಸಹಾಯಕತೆಯನ್ನು ಅರ್ಥಮಾಡಿಕೊಳ್ಳದ ರಾಕ್ಷಸ ಪ್ರವೃತ್ತಿಯುಳ್ಳವರು ನಮ್ಮ ನಡುವೆ ಇದ್ದಾರೆ ಎನ್ನುವುದೇ ಕಳವಳಕಾರಿ ಸಂಗತಿಯಾಗಿದೆ. ವಿದ್ಯಾರ್ಥಿನಿಯರು ತಮ್ಮನ್ನು ಚುಡಾಯಿಸುತ್ತಿರುವ ಪುಂಡರಿಂದ ಸುರಕ್ಷಿತರಾಗಿರಲು ಸ್ಕಾರ್ಫ್ ಧರಿಸಿದರೆ ಏನು ತಪ್ಪು? ಕುಂದಾಪುರದ ಕಾಲೇಜ್ ಪ್ರಾಂಶುಪಾಲರಿಗೆ ಹೆಣ್ಣು ಮಕ್ಕಳಿದ್ದರೆ ಅವರು ಸ್ಕಾರ್ಫ್ ಧರಿಸುವುದನ್ನು ಬೆಂಬಲಿಸುತ್ತಿದ್ದರೆ ಅಥವ ವಿರೋಧಿಸುತ್ತಿದರೆ?

ಸ್ಕಾರ್ಫ್ ಧರಿಸುವುದು ಯಾವುದೋ ಒಂದು ಧರ್ಮದ ಸಂಕೇತವಾಗಿದ್ದರೆ ಶಾಲೆ ಕಾಲೇಜುಗಳಲ್ಲಿ ಅದನ್ನು ನಿಷೇಧಿಸಬಹುದು. ಆದರೆ ಹಿಂದುಗಳಿಗೆ ಮಾತ್ರ ಅನ್ವಯಿಸುವ ಸರಸ್ವತಿ ಪೂಜೆ, ಗಣೇಶ ಉತ್ಸವ, ಸೂರ್ಯ ನಮಸ್ಕಾರ ದಂತಹ ಧಾರ್ಮಿಕ ಆಚರಣೆಗಳನ್ನು ಸರ್ಕಾರಿ ಶಾಲೆ ಕಾಲೇಜುಗಳಲ್ಲಿ ನಡೆಸುವುದು ತಪ್ಪು. ಆದರೆ ಅಂತಹ ಧಾರ್ಮಿಕ ಕ್ರಿಯೆಗಳು ಶಾಲೆ ಕಾಲೇಜುಗಳಲ್ಲಿ ಈಗ ಮೊದಲಿಗಿಂತ ಹೆಚ್ಚು ಪ್ರಮಾಣದಲ್ಲಿ ನಡೆಯುತ್ತವೆ. ಬಿಜೆಪಿ ಸರ್ಕಾರದ ಕುಮ್ಮಕ್ಕು ಇದಕ್ಕೆ ಕಾರಣವಾಗಿದೆ. ನಮ್ಮ ಜಾತ್ಯಾತೀತ, ಧರ್ಮನಿರಪೇಕ್ಷ ಮನಸ್ಸಿನವರು ಸಹ ಪ್ರಶ್ನಿಸುವುದಿಲ್ಲ. ಸ್ಕಾರ್ಫ್ ಧರಿಸಿಕೊಂಡು ಶಾಲೆ ಕಾಲೇಜಿಗೆ ಬರುವ ನಮ್ಮ ಹೆಣ್ಣು ಮಕ್ಕಳ ಆತಂತಕದ ಪರವಾಗಿ ಧ್ವನಿ ಎತ್ತುತ್ತಿಲ್ಲ.

ಅತ್ತ ವಿದ್ಯಾರ್ಥಿನಿಯರು ಸ್ಕಾರ್ಫ್ ಧರಿಸಿ ಕಾಲೇಜ್ ಆವರಣ ಪ್ರವೇಶಿಸುತ್ತಿದ್ದಂತೆ ಒಂದಷ್ಟು ವಿದ್ಯಾರ್ಥಿಗಳು ಬ್ಯಾಗಿನಲ್ಲಿ ತಂದಿದ್ದ ಕೇಸರಿ ಶಾಲುಗಳನ್ನು ಧರಿಸಿ ತರಗತಿಗಳಲ್ಲಿ ಓಡಾಡಲು ಆರಂಭಿಸಿದರು. ಜೈಶ್ರೀರಾಮ್ ಎಂದು ಘೋಷಣೆ ಕೂಗುತ್ತಾ ಈ ಕೆಲವು ವಿದ್ಯಾರ್ಥಿಗಳು ಬಿಗುವಿನ ವಾತಾವರಣ ನಿರ್ಮಿಸಿದರು. ಇದನ್ನೆಲ್ಲ ಗಮನಿಸಿದರೆ ಇದ್ಯಾವುದೂ ಆಕಸ್ಮಿಕವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಡೀ ಘಟನೆ ಪೂರ್ವಯೋಜಿತವಾಗಿದ್ದು ಸಂಘ ಪರಿವಾರ ಮತ್ತು ಬಿಜೆಪಿಯ ಪಿತೂರಿಯ ಭಾಗವಾಗಿತ್ತೆಂದು ಯಾರಿಗೂ ತಿಳಿಯದೆ ಇರುವಂತಿರಲಿಲ್ಲ. ಸಂಘ ಪರಿವಾರ ಮತ್ತು ಬಿಜೆಪಿಯ ಹತಾಶೆಯ ಪರಿಣಾಮವಾಗಿ ಇಂತಹದೊಂದು ಪ್ರಕರಣ ಕುಂದಾಪುರದಲ್ಲಿ ಸೃಷ್ಟಿಯಾಗಿ ಅದರ ಪರಿಣಾಮ ಇಡೀ ರಾಜ್ಯ ತುಂಬ ಹರಡುವಂತೆ ಮಾಡಲಾದ ಹುನ್ನಾರ ಇದಾಗಿತ್ತು. ಇಂದು ರಾಜ್ಯದ ಆರ್ಥಿಕತೆ ಕುಸಿದಿದೆ. ನಿರುದ್ಯೋಗ ಉಲ್ಬಣಗೊಂಡಿದೆ. ರಾಜ್ಯದಲ್ಲಿ ಅನಗತ್ಯವಾದ ಲಾಕ್‌ಡೌನ್ ಹೇರಲಾಯಿತು. ಕರಾವಳಿಯಲ್ಲಿ ಹಿಂದು ಮತ್ತು ಮುಸಲ್ಮಾನರ ನಡುವೆ ದ್ವೇಷವನ್ನು ಕೆರಳಿಸುವಂತೆ ಮಾಡುವುದು ಅವರ ಉದ್ವೇಶವಾಗಿತ್ತು. ಗಣರಾಜ್ಯೋತ್ಸವದಲ್ಲಿ ನಾರಾಯಣ ಗುರುಗಳ ಸ್ತಬ್ಧ ಚಿತ್ರಕ್ಕೆ ಮೋದಿ ಸರಕಾರ ಅವಕಾಶ ಕೊಡದೆ ಅವಮಾನ ಮಾಡಿದ್ದು ಜನರ ಆಕ್ರೋಶಕ್ಕೆ ಕಾರಣವಾಗಿತ್ತು. ಜನ ಅನ್ಯಾಯದ ವಿರುದ್ಧ ಬೀದಿಗಿಳಿದಾಗಲೇ ಸಂಘ ಪರಿವಾರಕ್ಕೆ ತನ್ನ ತಪ್ಪಿನ ಅರಿವಾಗಿತ್ತು. ಅದಕ್ಕೆ ಪ್ರತಿಯಾಗಿ ಜನರ ಗಮನ ಬೇರೆಡೆಗೆ ಸೆಳೆಯುವ ಉದ್ದೇಶದಿಂದ ಹಿಂದು ಮತ್ತು ಮುಸಲ್ಮಾನರ ನಡುವೆ ಗಲಾಟೆ ಎಬ್ಬಿಸುವ ಉದ್ದೇಶದಿಂದ ಕಾಲೇಜ ವಿದ್ಯಾರ್ಥಿಗಳ ನಡುವೆ ಸ್ಕಾರ್ಫ್ ಧರಿಸುವ ಹೆಸರಿನಲ್ಲಿ ವಿವಾದವೊಂದನ್ನು ಹುಟ್ಟು ಹಾಕಲಾಗಿದೆ.

ಈಗ ಹೈಕೋರ್ಟಿನ ಆದೇಶಕ್ಕೆ ಕಾಯಲು ನಿರ್ಧರಿಸಲಾಗಿದೆ ಎಂದು ಸರ್ಕಾರದ ವತ್ತಾರರು ಹೇಳಿಕೆ ನೀಡಿದಿದ್ದಾರೆ. ಸರ್ಕಾರ ಎಲ್ಲ ಸಾರ್ವಜನಿಕ ಸಂಸ್ಥೆಗಳನ್ನು ಜಾತಿ ಧರ್ಮಗಳಿಂದ ಮುಕ್ತಗೊಳಿಸಿ ಭಾರತವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿ ಮಾರ್ಪಡಿಸಬೇಕು. ಶಾಲೆ ಕಾಲೇಜುಗಳಲ್ಲಿ ಸ್ಕಾರ್ಫ್ ಧರಿಸುವ ಹಕ್ಕು ವಿದ್ಯಾರ್ಥಿನಿಯರಿಗೆ ನೀಡದೆ ಅನ್ಯಾಯ ಮಾಡಬಾರದು. ಸರಕಾರ ವಿದ್ಯಾರ್ಥಿನಿಯರ ವ್ಯಕ್ತಿಗತ ಹಕ್ಕುಗಳಿಗೆ ಧಕ್ಕೆ ಉಂಟುಮಾಡದೆ ಅವರ ಸ್ವಾತಂತ್ರ್ಯಕ್ಕೆ ರಕ್ಷಣೆ ನೀಡಬೇಕು. ಮುಸಲ್ಮಾನ ವಿದ್ಯಾರ್ಥಿನಿಯರು ಸ್ಕಾರ್ಫ್ ಧರಿಸುವುದನ್ನು ನೆಪಮಾಡಿಕೊಂಡು ಇವರು ಕೇಸರಿ ಶಾಲು ಧರಿಸುವ ಹೊಸ ಪದ್ಧತಿಗಳಿಗೆ ಆಸ್ಪದ ನೀಡಬಾರದು. ಕೇಸರಿ ಶಾಲು, ಕೇಸರಿ ಬಾವುಟ ಹಿಂದುತ್ವದ ಸಂಕೇತಗಳಾಗಿವೆ. ವಿದ್ಯಾರ್ಥಿಗಳಲ್ಲಿ ಕೋಮು ದ್ವೇಷ ಬೆಳೆಸಲು ಪ್ರಯತ್ನ ಪಡುವರಿಗೆ ಅವಕಾಶ ನೀಡಬಾರದು. ಆದರೆ ಬಿಜೆಪಿ ಸರ್ಕಾರದಿಂದ ಇಂತಹ ಆರೋಗ್ಯಕರ ನಡೆ ಸಾಧ್ಯವೆ? ಸಾಧ್ಯವಿಲ್ಲ ಎಂಬುದು ಈಗಾಗಲೇ ಸ್ಪಷ್ಟವಾಗುತ್ತದೆ. ಸರ್ಕಾರ ಸ್ಕಾರ್ಫ್ ನಿಷೇಧಿಸಿ ಆದೇಶ ನೀಡಿದೆ. ಇದು ಸರ್ಕಾರದ ಅವಸರದ ತೀರ್ಮಾನ ಮಾಡಿದೆ. ಸ್ಕಾರ್ಫ್‌ಧರಿಸುವುದು ಧಾರ್ಮಿಕ ಕ್ರಿಯೆ ಅಲ್ಲ. ವಿದ್ಯಾರ್ಥಿನಿಯರಿಗೆ ತಮ್ಮ ರಕ್ಷಣೆಗಾಗಿ ಸ್ಕಾರ್ಫ್ ಧರಿಸುವುದನ್ನು ತಡೆಯುವುದು ಸರಿಯಲ್ಲ. ಧಾರ್ಮಿಕ ಆಚರಣೆಗೆ ಆಸ್ಪದ ಇರಬಾರದು. ಕೇಸರಿ ಶಾಲು ಧಾರ್ಮಿಕ ಸಂಕೇತ. ಅದನ್ನು ಹಿಂದುತ್ವದ ಪುಂಡರು ಶಾಲಾ ಸಮವಸ್ತ್ರದ ಭಾಗವಾಗಿಸಲು ಹಿಂಜರಿಯಲಾರರು. ಭಾರತ ಹಿಂದುಗಳ ದೇಶ ಎಂದೂ ಇಲ್ಲಿ ವಾಸಿಸುವವರು ಹಿಂದು ಆಚರಣೆಗಳನ್ನು ಒಪ್ಪಿಕೊಳ್ಳಬೇಕು ಎಂಬ ದೌರ್ಜನ್ಯದ ಹಿಂದುತ್ವವನ್ನು ಬಿಜೆಪಿ ಸರ್ಕಾರದ ಕುಮ್ಮಕ್ಕಿನಿಂದ ಬೆಳಸಲಾಗುತ್ತಿದೆ. ಮುಗ್ಧ ವಿದ್ಯಾರ್ಥಿಗಳ ಶುದ್ಧ ಮನಸ್ಸುಗಳನ್ನು ಹಾಳುಮಾಡಲಾಗುತ್ತದೆ. ದೇಶ ಪ್ರೇಮಿಗಳು ಈ ಅಪಾಯವನ್ನು ಮನವರಿಕೆ ಮಾಡಿಕೊಳ್ಳಬೇಕು.

ಬೊಮ್ಮಾಯಿಯವರ ಆರು ತಿಂಗಳ ಆಡಳಿತ: ಬಿಗಿಗೊಂಡ ಸಂಘಪರಿವಾರದ ಹಿಡಿತ

ಎಸ್.ವೈ. ಗುರುಶಾಂತ್

ಆರು ತಿಂಗಳ ಅಧಿಕಾರ ಮುಗಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ತಮ್ಮ ಆಡಳಿತ ಉಜ್ವಲ ಭವಿಷ್ಯಕ್ಕೆ ಅಡಿಗಲ್ಲು' ಎಂದು ಹೇಳಿದ್ದಾರೆ. ಕಳೆದ 2021 ರ ಜುಲೈ 27 ರಂದು ಅಧಿಕಾರ ಸ್ವೀಕರಿಸಿದಾಗ 'ನವಕರ್ನಾಟಕದ ನಿರ್ಮಾಣವೇ ಗುರಿ, ಇಂದಿನಿಂದಲೇ ಅದು ಆರಂಭ' ಎಂದಿದ್ದರು. ನಂತರ 'ನವಭಾರತದ ನಿರ್ಮಾಣಕ್ಕೆ ಪೂರಕವಾಗಿ ನವಕರ್ನಾಟಕ' ಎಂದರು. ಅಂದರೆ ತಮ್ಮ ಕರ್ನಾಟಕದ ಅಭಿವೃದ್ಧಿ ಪಥ ಒಂದು ಸ್ವತಂತ್ರವಾಗಿರುತ್ತದೆ ಎನ್ನುವ ನಿರೀಕ್ಷೆಯನ್ನು ಹುಟ್ಟಿಸಿದವರು ಬಳಿಕ ಕೇಂದ್ರದ ಪರಾವಲಂಬಿ ಎನ್ನುವುದನ್ನು ಪ್ರಾಯೋಗಿಕವಾಗಿ ಒಪ್ಪಿಕೊಂಡರು. ನಿಜ, ಅಭಿವೃದ್ಧಿ ಪಥವನ್ನು ರಾಜ್ಯಗಳು ರೂಪಿಸಿಕೊಳ್ಳಬಹುದು. ಆದರೆ ಅಖಿಲ ಭಾರತದಿಂದ ಪ್ರತ್ಯೇಕವಾಗಿ ಇರುವುದು ಇಂದಿನ ಮಟ್ಟಿನಲ್ಲಿ ಸಾಧ್ಯವಿಲ್ಲ. ಅದಕ್ಕೊಂದು ಮಿತಿಯೂ ಇದೆ, ಪರಸ್ಪರ ಪೂರಕವಾಗಿರುತ್ತದೆ. ಆದರೆ ಪ್ರಶ್ನೆಯೆಂದರೆ ಭಾರತ ಸರಕಾರದ ಚುಕ್ಕಾಣಿ ಹಿಡಿದಿರುವ ಬಿಜೆಪಿಗೆ ಸರ್ವರ ಹಿತ ಕಾಯುವ ಸಮಗ್ರ ಅಭಿವೃದ್ಧಿ ಸಾಧಿಸುವ ಅಂತಹದೊಂದು ದೃಷ್ಟಿ, ದಾರಿ ಇದೆಯೇ ಎನ್ನುವುದು!

ಮುಖ್ಯಮಂತ್ರಿಯವರು ನವ ನಿರ್ಮಾಣದ ಕೈಪಿಡಿ ಬಿಡುಗಡೆ ಮಾಡಿ 'ತಮ್ಮದು ಹೊಸ ದಿಕ್ಕು, ಹೊಸ ಹಾದಿ, ಹೊಸ ದಿಕ್ಸೂಚಿ' ಎಂದು ಹೇಳಿದ್ದಾರೆ. ಆದರೆ ಸಾಧಿಸುವ ಯಾವ ಸ್ಪಷ್ಟ ಮಾರ್ಗಸೂಚಿಯು ಇದರಲ್ಲಿ ತಡಕಾಡಿದರೂ ಸಿಗುವುದಿಲ್ಲ. 'ಅಭಿವೃದ್ಧಿ ಮತ್ತು ಹೊಸಹಾದಿ' ಯ ಮಾತುಗಳು ಸವಕಲಾದ ಒಂದು ರಾಜಕೀಯ ಘೋಷಣೆಯಾಗಿದೆ. ಆರಂಭದಲ್ಲಿ ರಂಜನೀಯವಾಗಿ ಚಿತ್ರಿಸಲ್ಪಟ್ಟು ಅಂತ್ಯದಲ್ಲಿ ಅದು ವಂಚನೆಯ ವರಸೆ ಎಂಬುದು ಬಯಲಾಗುತ್ತದೆ. ಮುಖ್ಯವಾಗಿ, ಮುಖ್ಯಮಂತ್ರಿ ಬದಲಾದರೆ ಅದು ಹೊಸ ಪರ್ವ ಎನ್ನುವ ವ್ಯಾಖ್ಯಾನವೇ ಅತಾರ್ಕಿಕ, ಅಸಂಬದ್ಧ. ಇಂತಹ ಬದಲಾವಣೆಗಳು ನಿಜವಾದ ಜನಪರ ಪರಿವರ್ತನೆಯ ಆಶಯಗಳನ್ನು ಒಳಗೊಂಡಿರುವುದಿಲ್ಲ. ಅಂತರಂಗದಲ್ಲಿ ಬಲಾಢ್ಯ ಆರ್ಥಿಕ ಸ್ಥಾಪಿತ ಹಿತಾಸಕ್ತಿಗಳೇ ಪ್ರಧಾನವಾಗಿರುತ್ತವೆ. ಅದಕ್ಕಾಗಿ ಇಲ್ಲಿ ಅಧಿಕಾರದ ಮೇಲಾಟವೇ ಪ್ರಾಮುಖ್ಯವಾಗಿರುತ್ತದೆ. ಮೇಲಾಗಿ, ಬೊಮ್ಮಾಯಿ ಅವರ ಸರ್ಕಾರಕ್ಕೆ ಆರು ತಿಂಗಳಾಯಿತು ಎಂದಷ್ಟೇ ನೋಡುವುದು ಸರಿಯಲ್ಲ. ಇದು ಬಿಜೆಪಿ ಪಕ್ಷದ ಸರಕಾರ. ಮುಖ್ಯಮಂತ್ರಿ ಯಾರಿದ್ದರೂ ಅದೇ ಪಕ್ಷದ ಸರಕಾರ. 2018 ರ ಚುನಾವಣಾ ಪ್ರಣಾಳಿಕೆಯೇ ಆಧಾರ. ಅದಕ್ಕೀಗ ಎರಡೂವರೆ ವರ್ಷಗಳ ಆಯುಷ್ಯ.

ಅನೈತಿಕ ರಾಜಕಾರಣ

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದದ್ದೇ ಅನೈತಿಕ ರಾಜಕಾರಣದ ಮೂಲಕ ಎನ್ನುವುದನ್ನು ನೆನಪಿಸಿಕೊಳ್ಳಬೇಕು. 2018ರ ಚುನಾವಣೆಯಲ್ಲಿ ಜನಾದೇಶ ಇದ್ದದ್ದು ಕೋಮುವಾದಿ ಬಿಜೆಪಿ ವಿರುದ್ಧವಾಗಿ. ಅದು ಅಧಿಕಾರಕ್ಕೆ ಸ್ಪಷ್ಟವಾಗಿ ಬರುವುದನ್ನು ಜನತೆ ನಿರಾಕರಿಸಿದ್ದರು. ಜನಾದೇಶ, ಸರಕಾರ ರಚಿಸುವ ಬಹುಮತದ ಬಲ, ಬೆಂಬಲ ಇಲ್ಲದಿದ್ದರೂ ಕೇಂದ್ರದ ಹಾಗೂ ರಾಜ್ಯಪಾಲರ ಅಧಿಕಾರದ ದುರ್ಬಳಕೆಯಿಂದ ಅಧಿಕಾರ ಹಿಡಿಯಲು ಶತಾಯಗತಾಯ ಪ್ರಯತ್ನಿಸಿ ಮುಖಭಂಗ ಅನುಭವಿಸಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತದ್ದನ್ನು ಯಾರೂ ಮರೆತಿಲ್ಲ. ಆದರೆ ಜನಾದೇಶಕ್ಕೆ ಮನ್ನಣೆ ಕೊಡುವ ಜಾಯಮಾನ ಈ ಅಧಿಕಾರದಾಹಿಗಳಿಗೆ ಎಂದೂ ಇಲ್ಲ. ಹೀಗಾಗಿಯೇ ಜೆ.ಡಿ.ಎಸ್–ಕಾಂಗ್ರೆಸ್ ಪಕ್ಷಗಳ ಸಮ್ಮಿಶ್ರ ಸರಕಾರವನ್ನು ಉರುಳಿಸಲು ನಡೆಸಿದ ಪಿತೂರಿಗಳಿಗೆ ಲೆಕ್ಕವಿಲ್ಲ. ಪ್ರತಿ ಬಾರಿ ಸೋತರೂ ಅಧಿಕಾರ ಗದ್ದುಗೆಗೇರಲು ನಡೆಸುವ ಪ್ರಯತ್ನಗಳು ನಿಲ್ಲಲಿಲ್ಲ. ಕೊನೆಗೆ ಅಧಿಕಾರದಾಹಿ ಶಾಸಕರಿಗೆ ಗಾಳಹಾಕಿ, ಬ್ಲಾಕ್ಮೇಲ್ ಆಮಿಷಗಳ ಮೂಲಕ ಸಮ್ಮಿಶ್ರ ಸರಕಾರವನ್ನು ಉರುಳಿಸಿ ಹಿಂಬಾಗಿಲ ಮೂಲಕ ಅಧಿಕಾರವನ್ನು ಬಿಜೆಪಿ ಹಿಡಿಯಿತು. ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾದರು. ಕೇಂದ್ರದ ಬಿಜೆಪಿ ಹೈಕಮಾಂಡ್ ಆಗಿರುವ ಮೋದಿ ಅಮಿತ್ ಶಾ ಮತ್ತು ಆರೆಸ್ಸೆಸ್ಸಿಗೆ ಯಡಿಯೂರಪ್ಪ ಮುಖ್ಯಮಂತ್ರಿಯಾಗುವುದು ಅಪಥ್ಯವಾಗಿತ್ತು. ಎಲ್ಲಾ ರಾಜ್ಯಗಳಲ್ಲಿಯೂ ಬೆನ್ನೆಲುಬಿಲ್ಲದ ಕೈ ಗೊಂಬೆಗಳನ್ನೇ ಮುಖ್ಯಮಂತ್ರಿಯಾಗಿಸಿ ರಾಜ್ಯಗಳ ಸ್ವಾಯತ್ತತೆ ನಾಶಮಾಡಿ ಕೇಂದ್ರವೇ ಪ್ರಬಲವಾಗಿ ಅಧಿಕಾರವನ್ನು ಕೇಂದ್ರೀಕರಿಸಿಕೊಳುತ್ತದೆ. ಅತ್ಯಂತ ಸಂಪನ್ಮೂಲ ಗಳಿರುವ ರಾಜ್ಯಗಳನ್ನು ತನ್ನ ಕೈವಶ ಮಾಡಿಕೊಳ್ಳಲು ಹವಣಿಸುತ್ತಲೇ ಇರುತ್ತದೆ. ಅಂತಹ ಫ್ಯಾಸಿಸ್ಟ್ ಸ್ವರೂಪದ ಆಡಳಿತದ ಬಹುದೊಡ್ಡ ಯೋಜನೆ ಜಾರಿಯ ಪರಿಣಾಮವೇ ಬೊಮ್ಮಾಯಿ ಅವರನ್ನು ತಂದದ್ದು. ಎರಡು ವರ್ಷದ ಬಳಿಕ ಬಿಜೆಪಿಯ ನೀತಿಗಳನ್ನೇ ಅನುಸರಿಸುತ್ತಿದ್ದಾಗಲೂ ಯಡಿಯೂರಪ್ಪನವರನ್ನು ಕಾಡಿಸಿ, ಪೀಡಿಸಿ, ಬೆದರಿಸಿ, ಬದಲಾಯಿಸಿದ್ದು. ತಾನೊಬ್ಬ ಶಿಸ್ತಿನ ಸಿಪಾಯಿ ಹೈಕಮಾಂಡಿನ ಗರಿಷ್ಠ ಪ್ರೀತಿ, ಕೃಪೆ ಅನುಭವಿಸಿದವನು ತಾನೆಂದು ಹೇಳಿಕೊಳ್ಳುತ್ತಿದ್ದ ಯಡಿಯೂರಪ್ಪನವರು ಒಳಗೊಳಗೆ ಬಂಡಾಯವೇಳುವ ಸಿದ್ಧತೆಯನ್ನು ಮಾಡಿಕೊಂಡಿದ್ದರು. ಇಂಥ ಬಂಡಾಯ ನಡೆದರೆ ಸರಕಾರವನ್ನೇ ಕಳೆದುಕೊಳ್ಳ ಬೇಕಾಗಬಹುದು ಎನ್ನುವ ಬೆದರಿಕೆಯಲ್ಲಿ ಯಡಿಯೂರಪ್ಪ ಸೂಚಿಸಿದ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿಯಾಗಿ ನೇಮಿಸಿದ್ದು. ಅಂದರೆ ಬಿಜೆಪಿ–ಆರ್.ಎಸ್.ಎಸ್.ಗಳ ಆಟದಲ್ಲಿ ಬಸವರಾಜ ಬೊಮ್ಮಾಯಿ ಒಂದು ಆಟದ ದಾಳವಲ್ಲದೇ, ಒಂದು ಸ್ವತಂತ್ರ ಅಸ್ತಿತ್ವ, ಹಾದಿಗಳ ಸರಕಾರ ಅಲ್ಲ ಎಂಬುದು ಅಂದೇ ಸ್ಪಷ್ಟವಾಗಿತ್ತು. ಆ ಹಿಂದಿನ ಎಲ್ಲಾ ಅಪರಾಧಗಳ ಮೂಟೆ ಹೊತ್ತೇ ಬೊಮ್ಮಾಯಿಯವರು ಸಾಗಬೇಕಿದೆ.

ಕಾರ್ಪೋರೇಟ್ ಲೂಟಿಯ ದಾಹದ ಧಾವಂತಕ್ಕೆ ಅನುಗುಣವಾಗಿ ಕೇಂದ್ರದ ಸರ್ವಾಧಿಕಾರತ್ವ, ಇವೆಲ್ಲವನ್ನೂ ಮರೆಸುವ, ಕಿಮಕ್ ಎನ್ನದ ಸಾಮಂತರನ್ನು ನೇಮಿಸುವ ಬಿಜೆಪಿಯಗುರಿ ಕರ್ನಾಟಕದಲ್ಲಿ ಫಲ ನೀಡುತ್ತಿದೆ. ಸ್ವತಃ ಆರೆಸ್ಸೆಸ್ಸಿನ ಕಾರ್ಯಕರ್ತನಾಗಿದ್ದ ಯಡಿಯೂರಪ್ಪನವರು ಜಾರಿ ಮಾಡಲು ಹಿಂದೇಟು ಹಾಕಿದ ಹಲವಾರು ವಿಷಯಗಳನ್ನು ಈಗ ಜಾರಿಗೊಳಿಸಿರುವುದು ಬೊಮ್ಮಾಯಿ ಅವರ ಬಹುದೊಡ್ಡ ಸಾಧನೆ! ಸಾರ್ವಭೌಮ ಜನತೆಗೆ ಉತ್ತರದಾಯಿ ಆಗಿರಬೇಕು ಎನ್ನುವುದಕ್ಕಿಂತ ಆರ್. ಎಸ್.ಎಸ್. ಗೆ ನಿಷ್ಠವಾಗಿರಬೇಕು, ಅವರನ್ನು ಸದಾ ಮೆಚ್ಚಿಸಬೇಕು ಎನ್ನುವುದರಲ್ಲಿ ಆರು ತಿಂಗಳ ಕಾಲ ಕಳೆದದ್ದು ಬೊಮ್ಮಾಯಿ ಅವರ ಪ್ರೋಗ್ರೆಸ್ ಕಾರ್ಡ್‌ನ ದಾಖಲೆ.

ಭ್ರಮೆ ಸೃಷ್ಟಿಯ ಯತ್ನಗಳು

ತಾನು 'ಸಾಮಾನ್ಯರ ಮುಖ್ಯಮಂತ್ರಿ' ಎಂದು ಘೋಷಿಸಿ ಬಿಂಬಿಸಿಕೊಂಡಿದ್ದರು ಬೊಮ್ಮಾಯಿ ಅವರು. 'ಹಾರ–ತುರಾಯಿಗಳು ಬೇಡ, ಪುಸ್ತಕಗಳನ್ನು ಕೊಡಿ' ಎಂದೂ ಹೇಳಿದ ಅವರು ಕೇಂದ್ರದ ನಾಯಕರಿಗೆ ಹಾರ–ತುರಾಯಿಗಳನ್ನು

ಪುಟ 4 ನೋಡಿ

ಬೊಮ್ಮಾಯಿಯವರ ಆರು ತಿಂಗಳ ಆಡಳಿತ: ಬಿಗಿಗೊಂಡ ಸಂಘಪರಿವಾರದ ಹಿಡಿತ.....


ಪುಟ 3 ರಿಂದ

ನೀಡಿ ಧನ್ಯರಾದರು. ನಂತರ ಅವರೇ ಅವುಗಳಿಗೆ ಕೊರಳೊಡ್ಡಿದರು. ಜನರಲ್ಲಿ ಬದಲಾವಣೆಯ ನಿರೀಕ್ಷೆ ಹುಟ್ಟಿಸಿದ್ದ ಅವರು ಹಿಂದಿನಂತವರಂತಾಗದೇ ಹಿಂಧುತ್ವ ಮತ್ತು ಸಮಾಜವಾದಿ ಒಲವುಗಳ ನಡುವೆ ಒಂದು ಸುಧಾರಿತ ಮಾದರಿಯ ಆಡಳಿತ ಸಿಗಬಹುದು ಎಂದು ಹಲವರು ಬಗೆದಿದ್ದರು. ಭ್ರಷ್ಟಾಚಾರ, ಸ್ವಜನಪಕ್ಷಪಾತ ಕೊನೆಯಾಗಬಹುದು ಎಂದು ಎಣಿಸಿದ್ದರು. ಆದರೆ ಈ ಆರು ತಿಂಗಳು ವ್ಯಕ್ತಿಕೇಂದ್ರಿತ ನಿರೀಕ್ಷೆಗಳು ಹೇಗೆ ಭ್ರಮೆ ಎಂಬುದು ಬಯಲಾಗಿದೆ.

ಹಾಗೆ ನೋಡಿದರೆ, ಬಿಜೆಪಿ ಹೈಕಮಾಂಡ್ ಯಡಿಯೂರಪ್ಪನವರನ್ನು ಬದಲಿಸುವಲ್ಲಿ ಸ್ಪಷ್ಟ ಕಾರ್ಯಸೂಚಿ ಇದೆ. ಜನಮಾನಸದೊಳಗೆ ಬೇರೂರಿರುವ, ಸ್ವಂತ ನೆಲೆ (ಜಾತಿ) ಇರುವವರು ತಮ್ಮ ಅಧಿಕಾರದ ಅಶ್ವಮೇಧ ಯಾಗಕ್ಕೆ ಅಡ್ಡಿ ಎನ್ನುವುದು ಬಿಜೆಪಿಯ ಆತಂಕ. ಈ ಲೆಕ್ಕಾಚಾರದ ಜೊತೆಗೆ ಬಿ.ಎಸ್.ವೈ.ಯನ್ನು ಬದಲಾಯಿಸಲು ಹತಕ್ಕೆ ಬೀಳುವಲ್ಲಿ ಮುಖ್ಯವಾದ ಅಂಶವೆಂದರೆ ದೇಶದಾದ್ಯಂತ ಬಿಜೆಪಿ ಕೇಂದ್ರ ಸರ್ಕಾರದ ವಿರುದ್ಧ ಜನತೆಯ ಆಕ್ರೋಶ ಪ್ರತಿರೋಧಗಳು, ಬೃಹತ್ ಆಂದೋಲನಗಳು ಬೆಳೆಯುತ್ತಿರುವುದು. ಕೊರೋನಾ ಸಾಂಕ್ರಾಮಿಕತೆ ಹಾವಳಿಯ ನಡುವೆಯೂ ಜನರ ಕಣ್ಣಿಗೆ ಮಣ್ಣೆರಚಿ ಕಾರ್ಪೊರೇಟ್ ಕಂಪನಿಗಳ ಅಪಾರ ಲೂಟಿಗೆ ಅವಕಾಶ ಕಲ್ಪಿಸಿದ ಪ್ರಕ್ರಿಯೆ ತೀವ್ರಗೊಳಿಸುವ ಆತುರ. ಅದಕ್ಕಾಗಿ ಎಲ್ಲೆಡೆ ಸಾಮಾಜಿಕ–ರಾಜಕೀಯ ಅರಾಜಕತೆ, ಕೋಮುದ್ವೇಷದ ದಳ್ಳುರಿಯ ವಿಸ್ತರಣೆ, ಜನ ವಿಭಜಕ ಕ್ರಮಗಳನ್ನು ತೀವ್ರಗೊಳಿಸುವ ಅಜೆಂಡಾ. ಇದಕ್ಕಾಗಿ ಬೊಮ್ಮಾಯಿ ಅವರನ್ನು ತಮ್ಮ ಅಣತಿಗೆ ಬಗ್ಗಿಸಿಕೊಂಡರು. ಬೊಮ್ಮಾಯಿ ಯವರು ಹೊಸತರ ಬಗ್ಗೆ ಏನೇ ಮಾತನಾಡಿದರೂ ಕಾರ್ಪೊರೇಟ್ ಕಂಪನಿಗಳ ಲೂಟಿಗೆ ಅವಕಾಶ ನೀಡುವ, ತೀಕ್ಷ್ಣ ಕೋಮುದ್ವೇಷ, ಕೋಮುವಾದದ ವಿಭಜನೆ ಹೆಚ್ಚಿಸುವ ಕೃತ್ಯಗಳು ಅತಿವೇಗದಲ್ಲಿ ನಡೆಯುತ್ತಿವೆ. ಜನಸಾಮಾನ್ಯರ ಕಷ್ಟಕೋಟಲೆಗಳಿಗೆ ಕಿವಿಗೊಡುವ, ಪರಿಹಾರ ನೀಡುವ ಸಂವಿಧಾನಾತ್ಮಕ ಕರ್ತವ್ಯ ಮೂಲೆಗೆ ತಳ್ಳಿರುವುದು ವಾಸ್ತವವಾಗಿದೆ.

ಕಹಿ ವಾಸ್ತವ

'ಭವ್ಯ ಭವಿಷ್ಯಕ್ಕಾಗಿ ಭರವಸೆಯ ಹೆಜ್ಜೆಗಳು' ಎನ್ನುವ ಕಿರುಹೊತ್ತಿಗೆ ಬಿಡುಗಡೆ ಮಾಡಿ 'ಈ ಸರ್ಕಾರಕ್ಕೆ ಸಾರ್ವಜನಿಕ ಹಿತಾಸಕ್ತಿಯೇ ಕೇಂದ್ರಬಿಂದು' ಎಂದು ಹೇಳಿದ್ದಾಯಿತು. ಕೋವಿಡ್ ಕಾಲದಲ್ಲಿ ಈ ಸರ್ಕಾರ ಮಾಡಿದ 24,000 ಕೋಟಿ ರೂಪಾಯಿಗಳ ಅಭಿವೃದ್ಧಿ ಕೆಲಸಗಳನ್ನು ನಾವು ಎಲ್ಲಿ ಹುಡುಕಬೇಕು? ಖಾಸಗಿ ಆಸ್ಪತ್ರೆಗಳ ಬೆಡ್ ಬ್ಲಾಕಿಂಗ್‌ನಲ್ಲೇ? ಅಥವಾ ಕಿಟ್‌ಗಳ ವ್ಯವಹಾರದಲ್ಲೇ? 14 ಲಕ್ಷ ರೈತರಿಗೆ ಪರಿಹಾರ ಒದಗಿಸಿ ಪ್ರವಾಹ ಪರಿಹಾರ ದುಪ್ಪಟ್ಟು ಆಗಿದ್ದರೆ ಇನ್ನು ಯಾಕೆ ಆ ಪ್ರವಾಹಪೀಡಿತರು, ಜನಸಾಮಾನ್ಯರು ಪರಿಹಾರಕ್ಕೆ ಆಗ್ರಹಿಸಿ ನಿಂತಿದ್ದಾರೆ, ನಿರಾಶರಾಗಿದ್ದಾರೆ? ದೇಶಕ್ಕೆ ಹರಿದು ಬಂದ ವಿದೇಶಿ ಬಂಡವಾಳದ ಶೇ 45 ರಷ್ಟು ಕರ್ನಾಟಕಕ್ಕೆ ಬಂದಿದ್ದಲ್ಲಿ ಇಷ್ಟು ನಿರುದ್ಯೋಗ, ಕೈಗಾರಿಕಾ ಉತ್ಪನ್ನಗಳ ಕುಸಿತ, ಬೆಳವಣಿಗೆ ಸ್ಥಗಿತವಾಗಿದೆ? ಸ್ವಚ್ಛ, ವಿಭಿನ್ನ ಆಡಳಿತ ನೀಡಿದ್ದರೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿದ ಕಂಟ್ರಾಕ್ಟ್ ದಾರರು ಈ ಸರ್ಕಾರ ಶೇ 40 ರಷ್ಟು ಹಣವನ್ನು ಕೀಳುತ್ತಿದೆ ಎಂದು ಭ್ರಷ್ಟಾಚಾರಕ್ಕೆ ಬೇಸತ್ತು ಬಹಿರಂಗವಾಗಿ ಪತ್ರ ಬರೆಯಬೇಕಾಯಿತು ಯಾಕೆ? ಈಗಲೂ ಪ್ರತಿ ಕಚೇರಿಗಳಲ್ಲಿ ಸಣ್ಣದೊಂದು ಕೆಲಸವಾಗಲು ಹಣ ಪೀಕುವ ಪ್ರವೃತ್ತಿ ಮನಸೋ ಇಚ್ಛೆ ನಡೆಯುತ್ತಿದೆ ಯಾಕೆ? ಬಿಟ್ ಕಾಯಿನ್ ನ ಭಾರೀ ಹಗರಣ ಬಯಲಾದಾಗ ಮುಖ್ಯಮಂತ್ರಿಯವರ ಮಾತುಗಳು ಹಗರಣವನ್ನು ಮುಚ್ಚಿಡಲು ತೋರಿಸಿದ ಮುತುವರ್ಜಿಗೆ ಉದಾಹರಣೆ. ಇದಕ್ಕೆ



ಕೇಂದ್ರದ ನಾಯಕರ ಅಭಯ ಪಡೆದದ್ದು ಅವರು ದೋಷರಹಿತಲ್ಲ ಎನ್ನುವುದನ್ನು ತೋರಿಸಿತು. ಇನ್ನೂ ಇಂತಹವು ಹಲವು ಹನ್ನೊಂದು!

ಒಂದಂತೂ ಸ್ಪಷ್ಟ. ಮಧ್ಯಂತರದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರಕೃತಿ ವಿಕೋಪವಾದಾಗ, ಸಾಂಕ್ರಾಮಿಕತೆಗೆಯ ಹಾವಳಿ ಇರುವಾಗಲೂ ಪರಿಹಾರ ಒದಗಿಸಲು ಕೇಂದ್ರದ ಅನುದಾನ ಪರಿಹಾರ ಪಡೆಯಲು ಪ್ರಯತ್ನವನ್ನೇ ಮಾಡಲಿಲ್ಲ. ತಾವು ಮಾಡಿದ ಅಲ್ಪ ಪ್ರಯತ್ನವನ್ನು ಕೇಂದ್ರ ನಿರ್ಲಕ್ಷಿಸಿದಾಗ ಆಗ್ರಹಿಸಲೂ ಆಗಲಿಲ್ಲ. ಹೀಗೆ ನ್ಯಾಯದ ಪಾಲನ್ನು ಕೇಳುವ ಧ್ವನಿಯೇ ಸತ್ತು ಹೋಗಿದೆ ಎಂದರೆ ಈ ಸರ್ಕಾರ ಬದುಕಿದೆಯೇ?

ದೇಶದಲ್ಲಿ ನಡೆದ ಭಾರಿ ಜನಾಂದೋಲನದ ಬೆನ್ನಲ್ಲೇ ಕೇಂದ್ರ ಸರಕಾರ ಕೃಷಿ ವಿರೋಧಿ ಕಾರ್ಪೊರೇಟ್ ಪರವಾದ ಮೂರು ಕಾಯ್ದೆಗಳನ್ನು ಹಿಂಪಡೆಯಬೇಕಾಯಿತು. ಆದರೆ ಕರ್ನಾಟಕ ಅವುಗಳನ್ನು ಹಾಗೆಯೇ ಉಳಿಸಿಕೊಂಡು ಜಾರಿಗೊಳಿಸುತ್ತಿದೆ. ಉಳ್ಳವರಿಗೆ, ಕಾರ್ಪೊರೇಟ್ ಕಂಪನಿಗಳಿಗೆ ರಾಜ್ಯದ ಭೂಮಿ, ಬಂಜರು ಭೂಮಿ ಪರಭಾರೆ ಮಾಡುವ ಭೂ ಸಂಪನ್ಮೂಲ ವರ್ಗಾವಣೆ ಮಾಡುವ, ಕಂದಾಯ ಕಾಯ್ದೆಗೆ ತಿದ್ದುಪಡಿ ತಂದು ಲೀಸಿಗೆ ಬದಲಾಗಿ ಮಾರಾಟ ಮಾಡಲು ಸರಕಾರ ಹೊರಟಿದೆ. ರಾಜ್ಯದಲ್ಲಿ ಸುಮಾರು 40–45 ಲಕ್ಷ ಎಕರೆ ಬಗರ್ ಹುಕುಂ ಸಾಗುವಳಿ ಮಾಡಿ ಭೂಮಿಯ ಹಕ್ಕಿಗೆ ಆಗ್ರಹಿಸಿ ಬಸವಳಿದಿರುವ 15 ಲಕ್ಷ ಕುಟುಂಬಗಳಿಗೆ ನ್ಯಾಯವೇ ಸಿಗಲಿಲ್ಲ. ಆದಿವಾಸಿಗಳಿಗೆ ಅರಣ್ಯದ ಹಕ್ಕುಗಳು ಮತ್ತು ಭೂಮಿ ಒದಗಿಸುವ ಅರಣ್ಯ ಹಕ್ಕುಗಳ ಕಾಯ್ದೆ ಜಾರಿ ಮೂಲೆಗುಂಪಾಗಿದೆ. ಅವರನ್ನು ಅವರದೇ ನೆಲೆಗಳಲ್ಲಿ ಸಂರಕ್ಷಿಸುವ ಬದಲಾಗಿ ಅಲ್ಲಿಂದ ಎತ್ತಂಗಡಿ ಮಾಡುವ, ಕನಿಷ್ಠ ಆಹಾರಕ್ಕೂ ತತ್ವಾರ ಹುಟ್ಟಿಸುವ ಕೆಲಸವನ್ನು ಸರ್ಕಾರದ ಅರಣ್ಯ, ಕಂದಾಯ ಇಲಾಖೆಗಳು ಮಾಡುತ್ತಿವೆ. ಸಾರ್ವಜನಿಕ ವಲಯದ ಕೈಗಾರಿಕೆಗಳ ಮಾರಾಟ ತೀವ್ರಗೊಂಡಿದೆ. ಹೀಗೆಯೇ ಕಾರ್ಪೊರೇಟ್ ಕಂಪನಿಗಳಿಗೆ ಕರ್ನಾಟಕವನ್ನು ತೆರೆದಿಡಲಾಗಿದೆ. ಆರ್ಥಿಕ, ಕೈಗಾರಿಕಾ–ಕಾರ್ಮಿಕರ ಕಾಯ್ದೆಗಳಿಗೆ ತಂದಿರುವ ತಿದ್ದಪಡಿಗಳನ್ನು ಚಾಚೂ ತಪ್ಪದೆ ರಾಜ್ಯ ಸರ್ಕಾರ ಜಾರಿಗೊಳಿಸುತ್ತಿದೆ.

ಕೋಮುವಾದದತ್ತ ತೀವ್ರ ಹೊರಳುವಿಕೆ

ಈ ಅವಧಿಯಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾದುದೆಂದರೆ: ಈ ಸರ್ಕಾರ ಕೋಮುವಾದದತ್ತ ತೀವ್ರವಾಗಿ ಹೊರಳಿರುವುದು. ಬೊಮ್ಮಾಯಿಯವರು ಗೃಹ ಮಂತ್ರಿಯಾಗಿದ್ದಾಗ ಕರಾವಳಿಯಲ್ಲಿನ ಪುಂಡಾಟಿಕೆ ನಡೆಸಿದ ಭಜರಂಗದಳದವರ ಮೇಲಿನ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯುವ ಅಭಯ ನೀಡಿದ್ದ ವಿಡಿಯೋ ಈ ಹಿಂದೆ ವೈರಲ್ ಆಗಿತ್ತು. ಮುಖ್ಯಮಂತ್ರಿಯಾದ ಬಳಿಕ ಕರಾವಳಿಯಲ್ಲಿ ಅಲ್ಪಸಂಖ್ಯಾತರ ಮೇಲೆ ಮುಂದುವರಿದ ಗೂಂಡಾಗಿರಿಯ ಕೃತ್ಯಗಳ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸುತ್ತಾ 'ಭಾವನೆಗಳಿಗೆ ಘಾಸಿ ಮಾಡಿದರೆ ಕ್ರಿಯೆಗೆ ಪ್ರತಿಕ್ರಿಯೆ ಇರುತ್ತದೆ' ಎಂದು ಸಂಘಪರಿವಾರದ ಕಾರ್ಯಕರ್ತರಂತೆ ಹೇಳಿದರು. ಈ ಮೂಲಕ ಸಂಘಪರಿವಾರದ ಪುಂಡರು ಕಾನೂನನ್ನು ಕೈಗೆತ್ತಿಕೊಳ್ಳಲು ಮತ್ತಷ್ಟು ಪ್ರಚೋದಿಸಿತು. ಮತ್ತಷ್ಟು ಪುಂಡಾಟಿಕೆಗಳಿಗೆ ಇಂಬು ನೀಡಿತು. ಪರಿಣಾಮ, ಕ್ರಿಶ್ಚಿಯನ್, ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ, ಅವರ ಪ್ರಾರ್ಥನಾ ಮಂದಿರಗಳು, ಶಿಕ್ಷಣ ಕೇಂದ್ರಗಳ ಮೇಲೆ ದಾಳಿಗಳನ್ನು ಹೆಚ್ಚಿಸಿದವು. ದ್ವೇಷಪೂರಿತ ಭಾಷಣ, ಹಲ್ಲೆಗಳು ನಡೆದವು. ಸಂಘಪರಿವಾರದ ಕಾರ್ಯಕರ್ತರು ಕಾನೂನು ಕೈಗೆತ್ತಿಕೊಂಡರೆ ಪೊಲೀಸರು ನಿಷ್ಕ್ರಿಯರಾದರು. ದೌರ್ಜನ್ಯಕ್ಕೀಡಾದವರ ರಕ್ಷಣೆ ಮಾಡುವಲ್ಲಿಯೂ ವಿಳಂಬ ಕಂಡಿತು. ಶ್ರೀರಂಗಪಟ್ಟಣದಲ್ಲಿ ಮಸೀದಿ ಮೇಲಿನ ದಾಳಿಗೆ ಯತ್ನ ಮತ್ತು ಖಾವಿ ವೇಷಧಾರಿ ಬಜರಂಗದಳಿಯ ಧ್ವಂಸಗೊಳಿಸುವ ಪ್ರಚೋದನಾತ್ಮಕ ಹೇಳಿಕೆ, ಪಾಂಡವಪುರದಲ್ಲಿ ಕ್ರಿಶ್ಚಿಯನ್ ಶಾಲೆಗೆ ಬೆದರಿಕೆ, ಗಜೇಂದ್ರಗಡದಲ್ಲಿ ಟಿಪ್ಪು ಜಯಂತಿ ವಿರೋಧ, ಗಂಗಾವತಿಯಲ್ಲಿನ ಇಸ್ಲಾಂಪುರ ಸರ್ಕಲ್ ಹೆಸರನ್ನು ಬದಲಾಯಿಸಲು ಒತ್ತಾಯ, ನರಗುಂದದಲ್ಲಿ ಮುಸ್ಲಿಂ ಯುವಕನ ಮೇಲೆ ಗುಂಪು ಹಲ್ಲೆ ಬಳಿಕ ಕೊಲೆ, ಹೀಗೆ ದಕ್ಷಿಣ ಕರ್ನಾಟಕ, ಕರಾವಳಿ, ಹೈದರಾಬಾದ್ ಕರ್ನಾಟಕ ಮುಂತಾದೆಡೆ ಸಂಘಪರಿವಾರದ ಬಹಿರಂಗ ದಾಳಿಗಳು, ಬೆದರಿಕೆಗಳು ಹೆಚ್ಚಿದವು. ಹಂಪಿಯ ಹನುಮಂತರಾಯನ ಗುಡಿ ಕೇಂದ್ರವಾಗಿರಿಸಿ 'ಅಂಜನಾದ್ರಿ ಬೆಟ್ಟ'ದ ಅಭಿವೃದ್ಧಿಗೆ ಹನುಮ ಜನ್ಮಸ್ಥಳದ ಅಭಿವೃದ್ದಿಗೆ ಕೋಟ್ಯಾಂತರ ಹಣ ನೀಡಿಕೆ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಹಿಂದೆಂದೂ ಇಲ್ಲದ ಹನುಮ ಮಾಲೆ ಹಾಕಿ ಸುವುದಕ್ಕೆ ಪ್ರೋತ್ಸಾಹ, ವಿಶೇಷವಾಗಿ ಗಂಗಾವತಿಯಲ್ಲಿ ಹತ್ತಾರು ಸಾವಿರ ಹನುಮ ಮಾಲಾದಾರಿಗಳನ್ನು ಸಂಘಟಿಸಲು ಶಾಸಕರ ಪ್ರಾಯೋಜಕತ್ವ, ಉಡುಪಿಯ ಕಾಪು ಮತ್ತು ವಿಜಯಪುರದ ಗ್ರಾಮೀಣ ಪೊಲೀಸ್ ಠಾಣೆಗಳಲ್ಲಿ ಪೊಲೀಸರಿಂದ ಕೇಸರಿ ಶಾಲು ಪ್ರದರ್ಶನದ ಘಟನೆಗಳು ಹೀಗೆ ಸಾಲು ಸಾಲು ಘಟನೆಗಳು ಏನನ್ನು ಹೇಳುತ್ತವೆ? ರಾಜ್ಯದಲ್ಲಿ ಮತಾಂತರ ವ್ಯಾಪಕವಾಗುತ್ತದೆ ಎನ್ನುವ ಗುಲ್ಲೆಬ್ಬಿಸಿ ಚರ್ಚುಗಳ ಮೇಲೆ ನಡೆಸಲಾದ ದಾಳಿಗಳ ಬೆನ್ನಲ್ಲೇ ಧಾರ್ಮಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಗೆ (ಮತಾಂತರ ನಿಷೇಧ ಕಾಯ್ದೆ) ತಿದ್ದುಪಡಿ ತರಲಾಯಿತು. ಸರಕಾರಕ್ಕೆ ಸೇರಿದ ಸಾರ್ವಜನಿಕ ಸ್ಥಳಗಳಲ್ಲಿ ದೇವಸ್ಥಾನಗಳ ಅತಿಕ್ರಮಣ ತೆರವುಗೊಳಿಸಬೇಕು ಎನ್ನುವ ನ್ಯಾಯಾಲಯದ ಆದೇಶ ಜಾರಿಯಾಗದಂತೆ ಕಾಯ್ದೆಯೊಂದನ್ನು ತರಲಾಯಿತು. ಮಾತ್ರವಲ್ಲ, ಸರಕಾರದ ಉಸ್ತುವಾರಿಯಿಂದ ದೇವಸ್ಥಾನಗಳನ್ನು ಹೊರಗಿಡುವ ಪ್ರಯತ್ನಗಳು ಆರಂಭಗೊಂಡಿವೆ. ಬೊಮ್ಮಾಯಿ ಅವರ ಆಡಳಿತದ ಕಾನೂನು ಬದ್ಧ ಆಡಳಿತ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿ ಸಂಘಪರಿವಾರ ಕೃತ್ಯಗಳನ್ನು ನಡೆಸಿದಾಗ ನಿಯಂತ್ರಿಸದೆ ಮುಕ್ತವಾಗಿ ಬಿಟ್ಟಿರುವುದು, ಗಲಭೆ, ಹಿಂಸಾಚಾರಗಳ ಹೆಚ್ಚಳಕ್ಕೆ ಕಾರಣವಾಗಿದೆ. ಮಾತ್ರವಲ್ಲ, ವಿಸ್ತರಣೆಯಾಗುತ್ತಿದೆ. ಬಿಜೆಪಿ ಅಧಿಕಾರ ನಡೆಸುತ್ತಿರುವ ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಗುಜರಾತ್ ರಾಜ್ಯಗಳಲ್ಲಿ ಇರುವ ಕಾನೂನಿನ ಅಂಶಗಳಿಗಿಂತ ಅತಿ ಹೆಚ್ಚು ಕ್ರೂರವಾದ ದಂಡನೀಯ ಕ್ರಮಗಳಿರುವ ಗೋಹತ್ಯೆ ನಿಷೇಧ ಮತ್ತು ಧಾರ್ಮಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆಯಂತಹ ಕಾಯ್ದೆಗಳನ್ನು ತಂದಿರುವುದು ಮುಂಬರುವ ದಿನಗಳ ಕಾರ್ಯಸೂಚಿ ಏನು ಎಂಬುದನ್ನು ತೋರಿಸುತ್ತದೆ. ಅಧಿಕಾರದಲ್ಲಿ ಉಳಿಯಲು ಆರೆಸ್ಸೆಸ್ಸಿನ ಮುಲಾಜಿಗೆ ಮತ್ತು ಬಿಜೆಪಿ ಹೈಕಮಾಂಡ್ ನಾಯಕರನ್ನು ಮೆಚ್ಚಿಸಲು ಬೊಮ್ಮಾಯಿಯವರು ನಡೆಸಿದ ಪ್ರಯತ್ನ ಇದಾಗಿದೆ. ಈ ಆರು ತಿಂಗಳ ಅವಧಿಯಲ್ಲಿ ಸರ್ಕಾರದ ಮೇಲೆ ಆರ್.ಎಸ್.ಎಸ್. ಹಿಡಿತ ಹೆಚ್ಚಿ ಆಡಳಿತ ಮತ್ತು ನೀತಿ ನಿರೂಪಣೆಯಲ್ಲಿ ಮೇಲುಗೈ ಸಾಧಿಸಿದೆ. ಕೇಂದ್ರದ ಅಣತಿಯನ್ನು ಶಿರಸಾವಹಿಸಿ ಪಾಲನೆ ಮಾಡುತ್ತಿರುವ ಅವರ ಮೇಲೆ ಹೈಕಮಾಂಡ್ ಹಿಡಿತವೂ ಹೆಚ್ಚಿದೆ. ಹೊಸ ಶಿಕ್ಷಣ ನೀತಿ ಜಾರಿಗೆ ಈ ಸರಕಾರ ತೋರಿಸುತ್ತಿರುವ ಉತ್ಸಾಹ ಉದಾರೀಕರಣ ಮತ್ತು ಫ್ಯಾಸಿಸ್ಟ್ ಹಿಂದುತ್ವದ ಜಾರಿಯ ಉತ್ಸುಕತೆಯೇ ಆಗಿದೆ. ಕ್ರಿಯೆಗೆ ಪ್ರತಿಕ್ರಿಯೆ ಎನ್ನುವ ಮುಖ್ಯಮಂತ್ರಿಗಳ ಮಾತನ್ನೇ ತೆಗೆದುಕೊಳ್ಳುವುದಾದರೆ ಸಂಘಪರಿವಾರದ ಆಕ್ರಮಣಕಾರಿ ಹಿಂದುತ್ವದ ಅಜೆಂಡಾಗಳ ಜಾರಿಗೆ ಸರಕಾರದ ಪಾಲ್ಗೊಳ್ಳುವಿಕೆ ಹಾಗೂ ಮುತುವರ್ಜಿಗಳು ಅಲ್ಪಸಂಖ್ಯಾತರಲ್ಲಿ ತೀವ್ರತರ ಆಕ್ರೋಶವನ್ನು ಉಂಟು ಮಾಡುತ್ತಿವೆ. ಇದನ್ನು ಬಳಸಿಕೊಂಡು ಎಸ್.ಡಿ.ಪಿ.ಐ ಮತ್ತು ಪಿ.ಎಫ್.ಐ.ನಂತಹ ಮೂಲಭೂತವಾದಿ ಸಂಘಟನೆಗಳು ಅಲ್ಪಸಂಖ್ಯಾತರ ನಡುವೆ ತಮ್ಮ ನೆಲೆಗಳನ್ನು ವಿಸ್ತರಿಸಿಕೊಳ್ಳಲು ಮುಂದಾಗಿವೆ. ಇಂತಹದೇ ಮತಿಯ ಧೃಢೀಕರಣವನ್ನು ಬಯಸುತ್ತಿರುವ ಸಂಘಪರಿವಾರದ ತಂತ್ರ ಫಲಿಸುತ್ತಿದೆ.

ಬಾಬಾಬುಡನ್ ಗಿರಿಯ ದರ್ಗಾ–ಪೀಠದ ವಿವಾದ ಕುರಿತ ನ್ಯಾಯಾಲಯದ ತೀರ್ಪನ್ನು ತಿರುಚಿ ಅದು ದತ್ತಪೀಠ ವೆಂದು ಘೋಷಿಸುವ ಪ್ರಯತ್ನಗಳು, ಶಾಲಾ ಪಟ್ಟದ ತಿರುಚುವಿಕೆ ಇತರೆ ಮುಖ್ಯ ಉದಾಹರಣೆಗಳು. ಹಾಗೆ ಕನ್ನಡ ವಿಶ್ವವಿದ್ಯಾಲಯದ ಹಣಕಾಸಿನ ಮುಗ್ಗಟ್ಟಿನಿಂದ ನರಳುವಂತೆ ಮಾಡಲಾಗುತ್ತಿರುವುದು ಮತ್ತು ಅಲ್ಲಿನ ಆಡಳಿತದ ಭ್ರಷ್ಟಾಚಾರಹಗರಣಗಳು, ದುರಾಡಳಿತವನ್ನು ಸರಿಪಡಿಸಲು ಕ್ರಮವಹಿಸದೇ ಇರುವುದು ಮತ್ತೊಂದೆಡೆ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೂರಾರು ಕೋಟಿ ಹಣ, ನೂರಾರು ಎಕರೆ ಭೂಮಿ ಪುರಸ್ಕರಿಸುವುದು, ನಾಡಿನ ಭಾಷೆ, ಸಂಸ್ಕೃತಿ ಉಳಿಸಿ ಬೆಳೆಸುವುದಕ್ಕೆ ವಿರುದ್ಧವಾದ ನಡೆಗಳಾಗಿವೆ. ಸಮಾಜಸೇವೆ, ಗೋ ಶಾಲೆಗಳ ಆರಂಭ ದಂತಹ ಹೆಸರಿನ ಸೋಗಿನಲ್ಲಿ ಸಾವಿರಾರು ಎಕರೆ ಸರ್ಕಾರಿ ಜಮೀನು, ಗೋಮಾಳ ಜಮೀನನ್ನು ಕಬಳಿಸುವ ಯತ್ನ ಅತ್ಯಂತ ವ್ಯವಸ್ಥಿತವಾಗಿ ನಡೆದಿವೆ. ಇದಕ್ಕಾಗಿ ಸಚಿವ ಅಶೋಕ್ ಅವರ ನೇತೃತ್ವದ ಸಂಪುಟದ ಉಪ ಸಮಿತಿಯೊಂದನ್ನು ರಚಿಸಲಾಗಿದೆ. ಸರ್ಕಾರದ ಸಚಿವರ ಭೂಹಗರಣಗಳು ತಡೆ ಇಲ್ಲದೆ ನಡೆಯುತ್ತಿವೆ.

ಇವೆಲ್ಲವುಗಳ ನಡುವೆ ಕರಾವಳಿಯಲ್ಲಿ ವಿದ್ಯಾರ್ಥಿಗಳ ನಡುವೆ ಬೇಕೆಂದೇ ಹಿಜಾಬ್ ಮತ್ತು ಕೇಸರಿ ಶಾಲುಗಳ ವಿವಾದ ಹುಟ್ಟುಹಾಕಿ ಅದನ್ನು ಗೃಹಸಚಿವರು, ಶಿಕ್ಷಣ ಸಚಿವರೂ ಸಮರ್ಥಿಸುತ್ತಿರುವುದು ಸಂಘಪರಿವಾರ ಎಲ್ಲ ಹಂತಗಳಲ್ಲಿ ಮತಿಯ ವಿಭಜನೆಯನ್ನು ಮತ್ತು ದ್ವೇಷವನ್ನು ಹುಟ್ಟುಹಾಕಲು ಪ್ರಯತ್ನಿಸುತ್ತಿರುವುದಕ್ಕೆ ಸ್ಪಷ್ಟ ನಿದರ್ಶನವಾಗಿದೆ. ಇವೆಲ್ಲವೂ ಹಿಂದೂ ಧರ್ಮದ ರಕ್ಷಣೆ, ಹಿಂದುತ್ವ, ದೇಶಸೇವೆ ಹೆಸರಿನಲ್ಲಿಯೇ ನಡೆಯುತ್ತಿವೆ.

ಸಾಲದ ಕೂಪದಲ್ಲಿ

ಬಿಜೆಪಿ ಆಡಳಿತದಲ್ಲಿ ರಾಜ್ಯ ಸಾಲದ ಕೂಪಕ್ಕೆ ಸಿಕ್ಕಿದೆ. ಕೋವಿಡ್ ಸಂಕಷ್ಟ ಒಂದೆಡೆಯಾದರೆ ಅದರ ಪರಿಣಾಮ ಜಿ.ಎಸ್.ಟಿ. ತೆರಿಗೆ ಸಂಗ್ರಹದಲ್ಲಿ ಕುಸಿತ ಕಂಡಿದೆ. ಇಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ

ದ.ಕ. ಜಿಲ್ಲೆಯಲ್ಲಿ ಅಲ್ಲಲ್ಲಿ ಸೌಹಾರ್ದತಾ ದಿನಾಚರಣೆ

ವರದಿ: ವಾ.ಉ.

2022 ಜನವರಿ 26 ರಿಂದ ಆರಂಭಿಸಿ ಮಹಾತ್ಮಾ ಗಾಂಧಿ ಹುತಾತ್ಮರಾದ ಜನವರಿ 30ರ ವರೆಗೆ ಕೋಮು ಸಾಮರಸ್ಯವನ್ನು ಬಲಪಡಿಸಲು ಸೌಹಾರ್ದತಾ ದಿನಾಚರಣೆ ನಡೆಸಬೇಕೆಂದು ಪಕ್ಷದ ರಾಜ್ಯ ಸಮಿತಿ ಕರೆ ಕೊಟ್ಟ ಮೇರೆಗೆ ದ.ಕ. ಜಿಲ್ಲೆಯಲ್ಲಿ ಅಲ್ಲಲ್ಲಿ ಪಕ್ಷದ ಸ್ಥಳೀಯ ಸಮಿತಿಗಳ ನೇತೃತ್ವದಲ್ಲಿ ಕಾರ್ಯಕ್ರಮ, ಸಂವಾದಗಳನ್ನು ಏರ್ಪಡಿಸಲಾಯಿತು.

ಗುರುಪುರ ಪಕ್ಷದ ವಲಯ ಸಮಿತಿ ನೇತೃತ್ವದಲ್ಲಿ ಜನವರಿ 29 ರಂದು ಬೊಂಡಂತಿಲದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಸಮಿತಿ ನಾಯಕರಾದ ಸುನಿಲ್ ಕುಮಾರ್ ಬಜಾಲ್, ಮನೋಜ್ ವಾಮಂಜೂರು ಮಾತನಾಡಿದರು. ಪಕ್ಷದ ವಲಯ ಕಾರ್ಯದರ್ಶಿ ಸದಾಶಿವ ದಾಸ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ವಲಯ ಸಮಿತಿ ಸದಸ್ಯರಾದ ಗಂಗಯ್ಯ ಅಮೀನ್, ನೋಣಯ್ಯ ಗೌಡ ಉಪಸ್ಥಿತರಿದ್ದರು.

ಮಂಗಳೂರು ನಗರದ ಬಜಾಲ್ ಪಕ್ಕಲಡ್ಕ ಪಕ್ಷ ಘಟಕದ ಆಶ್ರಯದಲ್ಲಿ ಜನವರಿ 30 ರಂದು ನಡೆದ ಸಂವಾದದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ನಾಯಕರಾದ ಡಾ.ಕೃಷ್ಣಪ್ಪ ಕೊಂಚಾಡಿ ಮಾತನಾಡಿದರು. ಪಕ್ಷದ ಸ್ಥಳೀಯ ನಾಯಕರಾದ ದೀಪಕ್ ಬಜಾಲ್, ಅಶೋಕ್ ಸಾಲ್ಯಾನ್ ಉಪಸ್ಥಿತರಿದ್ದರು.

ಮಂಗಳೂರು ನಗರ ಉತ್ತರ ಮತ್ತು ದಕ್ಷಿಣ ಸಮಿತಿಗಳ ಆಶ್ರಯದಲ್ಲಿ ಜನವರಿ 31 ರಂದು ವಿಕಾಸ ಕಚೇರಿಯಲ್ಲಿ ನಡೆದ ಸಂವಾದದಲ್ಲಿ ಸೌಹಾರ್ದತೆಗಿರುವ ಸವಾಲುಗಳು ವಿಷಯದಲ್ಲಿ ಬ್ಯಾಂಕ್ ಅಧಿಕಾರಿಗಳ ಸಂಘದ ರಾಜ್ಯ ಮುಖಂಡರಾದ ಕೆ. ರಾಘು, ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಡಾ.ಕೃಷ್ಣಪ್ಪ ಕೊಂಚಾಡಿ ಮಾತನಾಡಿದರು. ಪಕ್ಷದ ರಾಜ್ಯ ಸಮಿತಿ ಸದಸ್ಯ ಮುನೀರ್ ಕಾಟಿಪಳ್ಳ ಸಭೆಯ ಅಧ್ಯಕ್ಷತೆ ವಹಿಸಿದ್ದರು.

➘ ರಾಜ್ಯಗಳಿಗೆ ಪರಿಹಾರ ನೀಡಬೇಕಿತ್ತು. ಆದರೆ ಕರ್ನಾಟಕದ ಕೋರಿಕೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿ ಸಾಲವನ್ನು ಪಡೆಯುವಂತೆ ಸೂಚಿಸಿತು. ಪರಿಣಾಮವಾಗಿ, 2020 –21 ರಲ್ಲಿ ಮೊದಲ ಬಾರಿ ರೂ.15,489.32 ಕೋಟಿ, ಎರಡನೆಯ ಬಾರಿ 6203.5 ಕೋಟಿ, ಮೂರನೆಯ ಬಾರಿ ರೂ.2619.59 ಕೋಟಿ ಹೀಗೆ ಒಟ್ಟು ರಾಜ್ಯ ಸರಕಾರ ರೂ.30,151.91 ಕೋಟಿ ಗಳನ್ನು ಕೇಂದ್ರದಿಂದ ಸಾಲವಾಗಿ ಪಡೆದಿದೆ. ಇದು ಜಿಎಸ್.ಟಿ.ಪರಿಹಾರದ ಶೇಕಡ 11ರಷ್ಟು ಮೊತ್ತವಾಗಿದ್ದು ಮಹಾರಾಷ್ಟದ ನಂತರ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಇತರೆ ರಾಜ್ಯಗಳಿಗಿಂತ ಅತಿಹೆಚ್ಚು ಸಾಲದ ಹೊರೆಯನ್ನು ಕರ್ನಾಟಕ ಹೊತ್ತಿದೆ.ಈ2020 ರ ಸೆಪ್ಟಂಬರ್‌ನಲ್ಲಿ ದೊರೆತ ಮಾಹಿತಿಯಂತೆ ಹಿಂದಿನ ನಾಲ್ಕು ತಿಂಗಳ ಲೆಕ್ಕದಲ್ಲಿ ಕರ್ನಾಟಕಕ್ಕೆ ರೂ. 13,764 ಕೋಟಿ ನಷ್ಟ ಪರಿಹಾರ ಹಾಗೂ ಸೆಸ್ ರೂಪದಲ್ಲಿ ಸುಮಾರು ರೂ. 6,965 ಕೋಟಿ ಬರಬೇಕಿತ್ತು. ಜಿಎಸ್‌ಟಿ ಕಾಯ್ದೆ ಅನುಸಾರ ಈ ಪರಿಹಾರವನ್ನು ಕೊಡುವುದು ಕೇಂದ್ರದ ಸಂವಿಧಾನಾತ್ಮಕ ಹೊಣೆಗಾರಿಕೆಯಾಗಿತ್ತು. ಇವೆಲ್ಲವನ್ನೂ ಲೆಕ್ಕ ಹಾಕಿದ ಬಳಿಕ ಕರ್ನಾಟಕದ ಮೇಲೆ ಸುಮಾರು ನಾಲ್ಕು ಲಕ್ಷ ಕೋಟಿಗೂ ಮೀರಿದ ಸಾಲದ ಹೊರೆ ಹೊರಬೇಕಾದ ಬಗ್ಗೆ ಹೇಳಲಾಗಿತ್ತು.

ರಾಜಕೀಯ ಸೋಲು

ಬೊಮ್ಮಾಯಿಯವರು ಮುಖ್ಯಮಂತ್ರಿಯಾದ ಆರು ತಿಂಗಳ ಅವಧಿಯಲ್ಲಿ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲುವ ಖಚಿತ ನಿರೀಕ್ಷೆಯಿದ್ದ ಕ್ಷೇತ್ರಗಳನ್ನು ಕಳೆದುಕೊಂಡಿತು. ವಿಶೇಷವಾಗಿ, ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿಯೇ ಸ್ಥಾನ ಗೆಲ್ಲಲಾಗಲಿಲ್ಲ. ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಗಳಲ್ಲಿ ವಿರೋಧಪಕ್ಷವಾದ ಕಾಂಗ್ರೆಸ್ ಬಿಜೆಪಿಗೆ ಸಮನಾಗಿ ಸ್ಥಾನಗಳನ್ನು ಗೆದ್ದಿತು. ಇದು ಕಾಂಗ್ರೆಸ್ಸಿಗೆ ರಾಜಕೀಯ ಚೈತನ್ಯವನ್ನು ತಂದು ಕೊಟ್ಟಿದ್ದಲ್ಲದೇ ಬಿಜೆಪಿಯ ರಾಜಕೀಯ ಭವಿಷ್ಯವನ್ನು ಕೊಂಚ ಮಂಕಾಗಿಸಿದೆ. ದೇಶದಲ್ಲಿ ಮೋದಿ ನೇತೃತ್ವದ ಸರಕಾರ ಮತ್ತು ಅದರ ನೆರಳಿನಂತೆ ವರ್ತಿಸುವ ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಹೆಚ್ಚುತ್ತಿರುವ ಜನತೆಯ ಅತೃಪ್ತಿಯನ್ನು ಇದು ತೋರಿಸುತ್ತದೆ. ಆದರೆ ಈ ಫಲಿತಾಂಶಗಳು ಬಿಜೆಪಿಯೊಳಗಿನ ಆಂತರಿಕ ಭಿನ್ನಮತವನ್ನು ಸ್ಫೋಟಿಸುವಂತೆ ಮಾಡಿದೆ. ಪರಿಣಾಮ ಎರಡು ಬಾರಿ ಮುಖ್ಯಮಂತ್ರಿ ಯವರನ್ನು ಬದಲಾಯಿಸುವಂತೆ ಆಗ್ರಹ ಪಕ್ಷದೊಳಗಿನಿಂದಲೇ ಕೇಳಿಬಂದವು. ಬೊಮ್ಮಾಯಿ ಅವರ ಸಂಪುಟದ ಸಹೋದ್ಯೋಗಿಗಳು ಮತ್ತು ಶಾಸಕ ರೇಣುಕಾಚಾರ್ಯ, ಹೆಚ್.ವಿಶ್ವನಾಥ ಹಾಗೂ ಪಕ್ಷದ ಕೆಲ ಹಿರಿಯ ನಾಯಕರು ಕೆಲವು ಸಚಿವರುಗಳ ಕಾರ್ಯವೈಖರಿ ವಿರುದ್ಧ ಮತ್ತು ಅವರನ್ನು ಬದಲಾಯಿಸಲು ಸತತವಾಗಿ ಒತ್ತಡವನ್ನು ಹಾಕುತ್ತಿದ್ದಾರೆ. ಬಿಜೆಪಿಯೊಳಗೆ ಸಚಿವಾಕಾಂಕ್ಷಿಗಳ ಸಂಖ್ಯೆಯು ಬೆಳೆಯುತ್ತಿದ್ದು ಬಹಿರಂಗ ವಾಗ್ಯುದ್ಧದ ದಾಳಿಗಳಿಗೂ ಕಾರಣವಾಗುತ್ತಿದೆ. ತಮಗೆ ಬೇಕೆನಿಸಿದ ಖಾತೆಗಳು ಸಿಗಲಿಲ್ಲವೆಂದು ಹಲವು ಸಚಿವರು ಬಂಡಾಯದ ದನಿಯನ್ನು ಎತ್ತಿದ್ದಾರೆ. ಜಿಲ್ಲೆಗಳ ಉಸ್ತುವಾರಿಯನ್ನು ಬೇರೆ ಜಿಲ್ಲೆಯ ಸಚಿವರಿಗೆ ವಹಿಸಿದ್ದು ಬಿಜೆಪಿಯ ಸಂಪುಟ ದೊಳಗೆ ಅಸಮಾಧಾನ ಹೆಚ್ಚಿದೆ. ಸಚಿವರು ಅವರ ಜಿಲ್ಲೆಗಳಲ್ಲಿ ಬಲಗೊಳ್ಳದಂತೆ ಮಾಡುವ (ಬಲಹೊಂದಿ ಬಂಡಾಯ ಏಳದಂತೆ ಕುಂದಿಸುವ) ಹೈಕಮಾಂಡಿನ ಆಟದ ಭಾಗ ಇದಿರಬಹುದು. ಇಂಥ ಉಸ್ತುವಾರಿ ಎನ್ನುವುದು ಆಯಾ ಜಿಲ್ಲೆಗಳ ನಾಯಕರಿಗೆ ಪಾಳೆಗಾರಿಕೆ ನಡೆಸಲು ಅವಕಾಶ ಕೊಡುವ ವ್ಯವಸ್ಥೆಯಾಗಿದೆ. ಸಚಿವಾಕಾಂಕ್ಷಿಗಳ ಒತ್ತಡ ವಿಪರೀತ ಹೆಚ್ಚಿರುವುದರಿಂದ ಮತ್ತೊಮ್ಮೆ ಸಂಪುಟದ ಪುನಾರಚನೆಯ ಕಸರತ್ತುಗಳು ಆರಂಭಗೊಂಡಿದ್ದು ಮು.ಮಂ.ಗಳು ದೆಹಲಿ ದಂಡಯಾತ್ರೆ ಕೈಗೊಂಡಿದ್ದಾರೆ. ಒಟ್ಟಾರೆ ಸಚಿವ ಸಂಪುಟದಲ್ಲಿ ಬೊಮ್ಮಾಯಿ ಅವರ ವಿರುದ್ಧ ಏಳುವ ಧ್ವನಿ ಮತ್ತು ಚಟುವಟಿಕೆಗಳಲ್ಲಿ ಸಂಘಪರಿವಾರದ ಕೈವಾಡ ಇದ್ದೇ ಇದೆ. ಈ ಮೂಲಕ ಬಸವರಾಜ ಬೊಮ್ಮಾಯಿ ಅವರನ್ನು ಅತಂತ್ರವಾಗಿಸಿ ತಮ್ಮ ಹಿಡಿತವನ್ನು ಸಾಧಿಸುವ ಹುನ್ನಾರ ಅಡಗಿದೆ. ಇದರೊಟ್ಟಿಗೆ ಬಿಜೆಪಿಯ ಒಳಗಿಂದ ಕೆಲವು ಶಾಸಕರು ಬೇರೊಂದು ಪಕ್ಷಕ್ಕೆ ವಲಸೆ ಹೋಗುವ ಮಾತುಗಳು ಕೇಳಿಬರುತ್ತಿವೆ. ಅಧಿಕಾರದ ದಾಹವೇ ಪ್ರಧಾನವಾಗಿರುವ ಈ ಸರ್ಕಾರದಲ್ಲಿ ಮತ್ತೊಮ್ಮೆ ಪಕ್ಷಾಂತರ ಪರ್ವ ಆರಂಭಗೊಂಡರೆ ಆಶ್ಚರ್ಯವೇನಿಲ್ಲ.

ಬಿಜೆಪಿ ಸರಕಾರ ರಾಜ್ಯವನ್ನು ದಿವಾಳಿ ಎಬ್ಬಿಸುವ ನೀತಿಗಳು, ಜನಸಾಮಾನ್ಯರ ಜೀವ, ಜೀವನಕ್ಕೆ ಸಂಕಷ್ಟ ಹುಟ್ಟಿಸಿರುವ ಆಡಳಿತ ಕ್ರಮಗಳ ವಿರುದ್ಧ ಸಮರ್ಥವಾದ ಪ್ರತಿರೋಧವನ್ನು ಸಂಘಟಿಸುವಲ್ಲಿ ಅಧಿಕೃತ ವಿರೋಧ ಪಕ್ಷಗಳು ವಿಫಲವಾಗಿವೆ. ಕಾಂಗ್ರೆಸ್ ಇತ್ತೀಚಿನ ಬೆಳವಣಿಗೆಗಳಿಂದ ಚುರುಕಾದಂತೆ ಕಂಡು ಬಂದರೂ ಅದು ಸತತವಾಗಿ ಬಿಜೆಪಿ ಸರ್ಕಾರದ ವಿರುದ್ಧ ಧ್ವನಿಯೆತ್ತಿದೆ ಎಂದು ಕಂಡರೂ, ಮೂಲದಲ್ಲಿ ಬಿಜೆಪಿ ಸರ್ಕಾರದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳ ವಿರುದ್ಧ ದೃಢವಾದ ಹೋರಾಟವನ್ನು ನಡೆಸಲು ಬಯಸುತ್ತಿಲ್ಲ. ಜೆ.ಡಿ–ಎಸ್ ಬಲವಾಗಿರುವ ದಕ್ಷಿಣ ಕರ್ನಾಟಕದಲ್ಲಿ ಬಿಜೆಪಿ ತನ್ನ ನೆಲೆಯನ್ನು ಬಲಗೊಳಿಸಲು ಶಕ್ತಿಯನ್ನು ಕೇಂದ್ರೀಕರಿಸಿರುವಾಗ ಅದು ಇಕ್ಕಟ್ಟಿಗೆ, ರಾಜಕೀಯ ಬಿಕ್ಕಟ್ಟಿಗೆ(ಸರಣಿ ಸೋಲುಗಳ) ಸಿಲುಕಿದಂತೆ ಕಾಣುತ್ತಿದೆ. ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುವ ಸನ್ನಿವೇಶವೂ ಸೃಷ್ಟಿಯಾಗಿದೆ. ರಾಜ್ಯದ ಜನತೆ ಎದುರಿಸುತ್ತಿರುವ ಮೂಲಭೂತ ಪ್ರಶ್ನೆಗಳ ಆಧಾರದಲ್ಲಿ ಎಡ ಮತ್ತು ಇತರೆ ಪ್ರಗತಿಪರ ಪಕ್ಷಗಳು ಹಾಗೂ ಶಕ್ತಿಗಳ ಮುತುವರ್ಜಿ ಬೆಳೆಯುತ್ತಿದ್ದು ಅದು ರಾಜಕೀಯ ಹೋರಾಟವಾಗಿ ಪರಿವರ್ತನೆಗೊಳ್ಳುವ ಅವಶ್ಯಕತೆ ಇದೆ. ವಿಧಾನಸಭಾ ಚುನಾವಣೆಗೆ ಇನ್ನೊಂದು ವರ್ಷ ಬಾಕಿ ಇರುವಾಗ ಅತಿ ಶೀಘ್ರದಲ್ಲಿ ಅದರತ್ತ ವಿವಿಧ ಪಕ್ಷಗಳ ಎಲ್ಲ ಚಟುವಟಿಕೆಗಳು ಕೇಂದ್ರೀಕರಣ ಗೊಳ್ಳುವ ಸಂಭವವಿದೆ.

ಬಿಜೆಪಿಯ ಈ ಎರಡೂವರೆ ವರ್ಷಗಳ ದುರಾಡಳಿತ ಜನತೆಗೆ ಅಪಾರವಾದ ಸಂಕಷ್ಟವನ್ನು ಮತ್ತು ರಾಜ್ಯದ ಭಾಷೆ, ಸಂಸ್ಕೃತಿ, ಬಹುತ್ವ, ಶಾಂತಿ ಮತ್ತು ಸೌಹಾರ್ದತೆಗೆ ಭಾರಿ ಬೆದರಿಕೆಯೊಡ್ಡಿದೆ. ಕಾರ್ಪೊರೇಟ್ ಲೂಟಿಯನ್ನು ಮುಚ್ಚಿಕೊಳ್ಳಲು ಮತ್ತು ತೀವ್ರಗೊಳಿಸಲು ಅದು ಕೋಮುವಾದಿ ರಾಜಕಾರಣವನ್ನು ಗುರಾಣಿಯಾಗಿ ಬಳಸುತ್ತಿದ್ದು ಇದರ ವಿರುದ್ಧ ವಿಶಾಲವಾದ ತೀವ್ರ ಬಹುಮುಖಿ ಹೋರಾಟ ಬೆಳೆದು ಬರಬೇಕಾಗಿದೆ.



ಮಂಗಳೂರಿನಲ್ಲಿ ಕೇಂದ್ರ ಸರಕಾರದ ಬಜೆಟ್ ವಿರುದ್ಧ ಎಡಪಕ್ಷಗಳ ಪ್ರತಿಭಟನೆ

ಕಾರ್ಪೊರೇಟ್ ಪರವಾಗಿರುವ ಹಾಗೂ ಲಾಕ್‌ಡೌನ್ ಹಿನ್ನಲೆಯಲ್ಲಿ ಜನಸಾಮಾನ್ಯರಿಗೆ ಯಾವ ಪರಿಹಾರವನ್ನೂ ಕಾದಿರಿಸದ ಕೇಂದ್ರ ಸರಕಾರದ 2022–23ನೇ ಸಾಲಿನ ಪ್ರಸ್ತಾಪಿತ ಬಜೆಟನ್ನು ವಿರೋಧಿಸಿ ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳು ಫೆಬ್ರವರಿ 3 ರಂದು ಮಂಗಳೂರು ಮಿನಿ ವಿಧಾನಸೌಧದ ಎದುರು ಪ್ರತಿಭಟನೆ ನಡೆಸಿದವು.

ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ.. ಜಿಲ್ಲಾ ಕಾರ್ಯದರ್ಶಿ ಕೆ. ಯಾದವ ಶೆಟ್ಟಿ, ಸಿಪಿಐನ ಜಿಲ್ಲಾ ಕಾರ್ಯದರ್ಶಿ ವಿ.ಕುಕ್ಯಾನ್ ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಮುನೀರ್ ಕಾಟಿಪಳ್ಳ, ಸುನಿಲ್ ಕುಮಾರ್ ಬಜಾಲ್, ಸಿಪಿಐ ಪಕ್ಷದ ಜಿಲ್ಲಾ ಮುಖಂಡರಾದ ಎಚ್.ವಿ.ರಾವ್, ಸೀತಾರಾಮ್ ಬೇರಿಂಜೆ, ಕರುಣಾಕರ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಮಾನ ಮನಸ್ಕರು ಮಂಗಳೂರು ಇವರ ಸರಣಿ ಕಾರ್ಯಕ್ರಮಗಳು

ಜನವರಿ 23 ನೇತಾಜಿ ಸುಭಾಶ್‌ಚಂದ್ರ ಬೋಸ್ ಅವರ ಜನ್ಮದಿನ. ಆ ದಿನ ಮಂಗಳೂರು ನಗರದ 3 ಕಡೆ ಜನ್ಮ ದಿನದ ಆಚರಣೆ ನಡೆಸಿ, ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಆಧುನಿಕ ಭಾರತದ ನಿರ್ಮಾಣದಲ್ಲಿ ನೇತಾಜಿಯವರ ಪಾತ್ರವನ್ನು ಗುರುತಿಸಲಾಯಿತು.

ಬಜಾಲು ಪಕ್ಕಲಡ್ಕ ಯುವಕ ಮಂಡಲದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿವೈಎಫ್ಐ ದ.ಕ.ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಕೊಂಚಾಡಿ ಯುವಕ ಮಂಡಲದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ಕೃಷ್ಣಪ್ಪ ಕೊಂಚಾಡಿ ಮತ್ತು ಪಂಜಿಮೊಗರು ಯುವಕ ಮಂಡಲದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಕಾರ್ಪರೇಟರ್ ದಯಾನಂದ ಶೆಟ್ಟಿ ಮಾತನಾಡಿದರು.


ಜನವರಿ 24 ರಂದು ಮಂಗಳೂರು ವಿಕಾಸ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಬಗ್ಗೆ ಕಾಲೇಜು ಸಹಪ್ರಾಧ್ಯಾಪಕ ಡಾ. ಜೀವನ್‌ರಾಜ್ ಕುತ್ತಾರ್ ಮಾತನಾಡಿದರು. ಎಸ್ಎಫ್ಐ ಮುಖಂಡರಾದ ಮಾಧುರಿ ಬೋಳಾರ್ ಉಪಸ್ಥಿತರಿದ್ದರು.

ಫೆಬ್ರವರಿ 2 ರಂದು ವಿಕಾಸ ಕಚೇರಿಯಲ್ಲಿ ಕಳೆದ ಶತಮಾನದ ದಲಿತ ಸೇವಾಸಕ್ತ ಕುದ್ಮಾಲ್ ರಂಗರಾಯರ 94ನೇ ಸಂಸ್ಮರಣ ದಿನವನ್ನು ಆಚರಿಸಲಾಯಿತು. ದ.ಕ.ಜಿಲ್ಲೆಯಲ್ಲಿ ಅಸ್ಪೃಶ್ಯತೆಯ ನಿವಾರಣೆ, ದಲಿತೋದ್ಧಾರಕ್ಕಾಗಿ ಮಹಾತ್ಮಗಾಂಧೀಜಿಯವರಿಗಿಂತಲೂ ಮೊದಲೇ ತೊಡಗಿದ್ದ ಕುದ್ಮಾಲ್ ರಂಗರಾಯರ ಕೊಡುಗೆಯನ್ನು ವಿದ್ವಾಂಸ ಹಾಗೂ ಮುಲ್ಕಿ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಿನ್ಸಿಪಾಲರಾದ ಡಾ.ವಾಸುದೇವ ಬೆಳ್ಳೆ ವಿವರಿಸಿದರು. ಕಾರ್ಯಕ್ರಮದಲ್ಲಿ ಸಾಮಾಜಿಕ ಕಾರ್ಯಕರ್ತ ವಾಸುದೇವ ಜೆ.ಪಿ, ಡಾ.ಕೃಷ್ಣಪ್ಪ ಕೊಂಚಾಡಿ, ದಲಿತ ಹಕ್ಕುಗಳ ಸಮಿತಿಯ ಕೃಷ್ಣ ತಣ್ಣೀರುಬಾವಿ, ಯೋಗೀಶ್ ಜಪ್ಪಿನಮೊಗರು ಉಪಸ್ಥಿತರಿದ್ದರು.


ಬಂಟ್ವಾಳದಲ್ಲಿ ರಾಯಚೂರು ನ್ಯಾಯಾಧೀಶರ ವಿರುದ್ಧ ಪ್ರತಿಭಟನೆ

ಗಣರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರವನ್ನು ನಿರಾಕರಿಸಿ ಅವಮಾನ ಮಾಡಿದ ರಾಯಚೂರು ಜಿಲ್ಲಾ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಗೌಡರನ್ನು ಹುದ್ದೆಯಿಂದ ವಜಾಗೊಳಿಸಿ ಕಠಿಣ ಕ್ರಮವನ್ನು ಕೈಗೊಳ್ಳಬೇಕೆಂದು ಆಗ್ರಹಿಸಿ, ಫೆಬ್ರವರಿ 1 ರಂದು ಅಲ್ಲಿನ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಬಿ.ಸಿ. ರೋಡ್‌ನಲ್ಲಿ ಪ್ರತಿಭಟನೆ ನಡೆಯಿತು.

ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ರವಿಕಿರಣ ಪುಣಚ, ಸಿಐಟಿಯು ಬಂಟ್ವಾಳ ತಾಲೂಕು ಮುಖಂಡರಾದ ರಾಮಣ್ಣ ವಿಟ್ಲ, ಮಾನವ ಬಂಧುತ್ವ ವೇದಿಕೆಯ ರಾಜಚಂಡ್ತಿಮಾರು ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಡಿವೈಎಫ್ಐ ತಾಲೂಕು ಕಾರ್ಯದರ್ಶಿ ತುಳಸೀದಾಸ್ ವಿಟ್ಲ, ದ.ಕ.ಜಿಲ್ಲಾ ದಲಿತ ಸೇವಾ ಸಮಿತಿ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಪೂರಣ್ ಭಗತ್ ಮತ್ತು ಭಗತ್ ಲೋಗ್



ಪ್ರೊ. ವಿ.ಎಸ್. ಲಕ್ಷ್ಮೀನಾರಾಯಣ

ಎಲ್ಲ ಸಾಧು–ಸಂತರನ್ನು ಜನ ಉತ್ತರ ಭಾರತದಲ್ಲಿ 'ಭಗತ್ ಲೋಗ್' ಎಂದು ಕರೆಯುವುದುಂಟು. ಈಚೆಗೆ ದೆಹಲಿ ಮತ್ತು ಹರಿದ್ವಾರಗಳಲ್ಲಿ ಆಯೋಜಿಸಲಾಗಿದ್ದ ಧರ್ಮ ಸಂಸತ್ತಿನಲ್ಲಿ ಪಾಲ್ಗೊಂಡು ದ್ವೇಷ ಭಾಷಣ ಮಾಡಿ ಸುದ್ದಿಮಾಡಿದವರೂ ಸಹ ತಮ್ಮನ್ನು ಸಾಧು–ಸಂತರೆಂದೇ ಕರೆದುಕೊಳ್ಳುತ್ತಾರೆ. ಈ ಸಾಧು–ಸಂತರೂ ತಮ್ಮನ್ನು ತಾವೇ 'ಭಗತ್ ಲೋಗ್' ಎಂದು ಕರೆಸಿಕೊಳ್ಳಲು ಪ್ರಯತ್ನಿಸುತ್ತಾರೆ. ಕಿಪ್ಲಿಂಗ್ ಬರೆದ 'ದಿ ಮಿರಾಕಲ್ ಆಫ್ ಪೂರಣ್ ಭಗತ್' ಎಂಬ ಸಂತನ ತ್ಯಾಗದ ನಿರೂಪಣೆ ಈಶಾವಾಸ್ಯೋಪನಿಷತ್ತಿನ ಸಾಮಾಜಿಕ ದರ್ಶನವನ್ನು 'ವಿಶ್ವಗುರು'ವಾದ ಭಾರತೀಯರಿಗೇ ಪರಿಚಯಿಸುವ ಕತೆ. ದೆಹಲಿ–ಹರಿದ್ವಾರದ ದರ್ಮ ಸಂಸತ್ತಿನ 'ಸಾಧು–ಸಂತ'ರು ಧರ್ಮದ ರಕ್ಷಣೆಗಾಗಿ ಪ್ರಾಣ ಕೊಡಲು ಕರೆಕೊಡುತ್ತಾರೆ. ಯಾರ ಪ್ರಾಣ? ಎಂಬ ಪ್ರಶ್ನೆಗೆ ಸಿಗುವ ಉತ್ತರದಲ್ಲಿ ಪೂರಣ್ ಭಗತ್ ಆಚರಿಸಿದ ಧರ್ಮಕ್ಕೂ 'ಭಗತ್ ಲೋಗ್' ಆಚರಿಸಲು ಬಯಸುವ ಧರ್ಮಕ್ಕೂ ಇರುವ ವ್ಯತ್ಯಾಸ ಢಾಳಾಗಿ ಗೋಚರಿಸುತ್ತದೆ.

ಕಾಡಿನಲ್ಲಿ ನಡೆಯುವವರು ಮುಳ್ಳು ಚುಚ್ಚಬಾರದೆಂದರೆ ಕಾಡಿನಲ್ಲಿರುವ ಮುಳ್ಳುಗಳನ್ನೆಲ್ಲಾ ಆರಿಸಿ ಸುಟ್ಟುಹಾಕಬೇಕೆನ್ನುವುದು ಒಂದು ಪರಿಹಾರ ಕ್ರಮ. ಕಾಡಿನ ನೆಲಕ್ಕೆಲ್ಲಾ ಚರ್ಮವನ್ನು ಹಾಸಬೇಕೆನ್ನುವುದು ಇನ್ನೊಂದು ಕ್ರಮ. ಆದರೆ ಇವೆರಡೂ ವ್ಯಾವಹಾರಿಕವಾಗಿ ಅಸಾಧ್ಯವಾದ ಪರಿಹಾರಗಳು. ಎಲ್ಲರಿಗೂ ಸಾಧ್ಯವಿರುವ, ಮೂರನೆಯ ಪರಿಹಾರ ಕ್ರಮವೆಂದರೆ, ಕಾಲಿಗೆ ಚರ್ಮವನ್ನು ಸುತ್ತಿಕೊಂಡು ನಡೆಯುವುದು. ಅಂದರೆ, ಪಾದರಕ್ಷೆಗಳನ್ನು ಬಳಸುವುದು.

ಈ ದೃಷ್ಟಿಕೋನವನ್ನು ಬದುಕಿನ ಸಂದರ್ಭಕ್ಕೆ ಅನ್ವಯಿಸಿ ಶೈವ, ವೇದಾಂತ, ಜೈನ ಮತ್ತು ಬೌದ್ಧ ದರ್ಶನಗಳ ಪ್ರಾಚೀನ ಮತ್ತು ಆಧುನಿಕ ಸಾಧು–ಸಂತರು ಭಾರತದಲ್ಲಿ ತಮ್ಮ ತಮ್ಮ ಜೀವನ ದೃಷ್ಟಿ ಮತ್ತು ಆಧ್ಯಾತ್ಮಿಕತೆಯ ಮಾದರಿಗಳನ್ನು ಪ್ರತಿಪಾದಿಸುತ್ತಾ ಬಂದಿದ್ದಾರೆ.

ತಾತ್ಪರ್ಯದಲ್ಲಿ, ಕೆಲವು ನಿರ್ದಿಷ್ಟ ಭೇದಗಳೊಂದಿಗೆ ಇವರೆಲ್ಲರೂ ಹೇಳುವುದು ಇಷ್ಟೆ. ಜೀವಕೋಟಿಯಲ್ಲಿ ಮನುಷ್ಯರು, ಅದರಲ್ಲೂ ಪುರುಷರು, ಇನ್ನೂ ನಿರ್ದಿಷ್ಟವಾಗಿ ಬ್ರಾಹ್ಮಣರು ಶ್ರೇಷ್ಠರಾದವರು. ತಾತ್ವಿಕವಾಗಿ ಯಾರು ಬೇಕಾದರೂ ಆಧ್ಯಾತ್ಮದ ಮೆಟ್ಟಿಲುಗಳಲ್ಲಿ ಮೇಲೇರಿ ಪರಮ ಜ್ಞಾನವನ್ನು ಸಂಪಾದಿಸಿ ಸಂತರಾಗಬಹುದು. ಆದರ್ಶ ಸ್ಥಿತಿಯಲ್ಲಿ ಮನುಷ್ಯೇತರ ಜೀವಿಗಳನ್ನೂ ಒಳಗೊಂಡಂತೆ ತಮ್ಮ ಸಹಜೀವಿಗಳೊಂದಿಗಿನ ನಡವಳಿಕೆಯಲ್ಲಿ ದಯೆ, ಅನುಕಂಪ, ಕರುಣೆಗಳನ್ನು ತೋರಿಸುವುದರಿಂದ ಇವರನ್ನು ಒಟ್ಟಾರೆಯಾಗಿ ಸಾಧು–ಸಂತರೆಂದು, ಮಹಾತ್ಮರೆಂದು ಕರೆಯುವುದು ವಾಡಿಕೆ. ಇವರ ಉಪದೇಶಗಳ ಸಾರವೇನೆಂದರೆ, ಲೌಕಿಕ ಜೀವನವು ಅಧಿ ಭೌತಿಕ, ಅಧಿ ದೈವಿಕ ಮತ್ತು ಆಧ್ಯಾತ್ಮಿಕ ಎಂಬ ತಾಪತ್ರಯಗಳಿಂದ, ಅಂದರೆ ಭೌತಿಕ, ಪ್ರಾಕೃತಿಕ ಮತ್ತು ವ್ಯಕ್ತಿಗತವಾದ ಕಷ್ಟಗಳಿಂದ ತುಂಬಿದೆ. ಹಸಿವು, ನೀರಡಿಕೆ, ರೋಗ, ರುಜಿನ, ಹುಟ್ಟು, ಸಾವು ಮುಂತಾದ ಕಷ್ಟಗಳು ಈ ಪ್ರಪಂಚದಲ್ಲಿ ಹುಟ್ಟುವ ಎಲ್ಲರನ್ನೂ ಒಂದಲ್ಲಾ ಒಂದು ರೀತಿಯಲ್ಲಿ ಬಾಧಿಸುತ್ತವೆ. ಇವನ್ನು ಭೌತಿಕವಾಗಿ ದೂರಮಾಡಲು ಹೆಣಗುವುದಕ್ಕಿಂತಾ ಸೃಷ್ಟಿಯ ಬಗೆಗಿನ ತಮ್ಮ ದೃಷ್ಟಿಕೋನವನ್ನೇ ಬದಲಾಯಿಸಿಕೊಂಡು ತಮ್ಮನ್ನು ತಾವು ಸಂತೈಸಿಕೊಳ್ಳುವುದು ಜ್ಞಾನಿಗಳ ಲಕ್ಷಣವೆನಿಸಿಕೊಳ್ಳುತ್ತದೆ. ವ್ಯಕ್ತಿಯಾಗಿ ತಾನಿರುವ ಪ್ರಪಂಚವನ್ನೇ ಬದಲಾಯಿಸುವುದಕ್ಕಿಂತಾ ತನ್ನನ್ನು ತಾನು ಬದಲಾಯಿಸಿಕೊಳ್ಳುವುದು 'ವಿವೇಕಯುತ'ವಾದದ್ದು. ಈ ಸಂಸಾರದಲ್ಲಿ ಸಿಕ್ಕಿಕೊಂಡಿರುವ ತನಕ ಹುಟ್ಟಿದ ಮೇಲೆ ಸಾಯುವುದು, ಸತ್ತಮೇಲೆ ಮತ್ತೆ ಹುಟ್ಟುವುದು ಅನಿವಾರ್ಯ. ದೇಹ–ಆತ್ಮಗಳು ಬೇರೆ ಬೇರೆಯಾಗಿದ್ದು, ದೇಹ ನಶ್ವರವಾಗಿದೆ. ಆತ್ಮಕ್ಕೆ ಸಾವಿಲ್ಲ ಎಂದು ನಂಬುವುದು ಆತ್ಮಜ್ಞಾನ. ತಾನು ವಿಶ್ವಾತ್ಮನಾದ ಬ್ರಹ್ಮನ ಅವಿಭಾಜ್ಯ ಅಂಗ ಅಥವಾ ಸತ್ವವೆಂದು ನಂಬುವುದು 'ಪರಮಜ್ಞಾನ.' ಈ ಜ್ಞಾನವನ್ನು ಹೊಂದಿ ಹುಟ್ಟು–ಸಾವುಗಳ ಚಕ್ರದಿಂದ ಪಾರಾಗುವುದೇ, 'ಮುಕ್ತಿ'.

ಹೀಗೆ, ಇಡೀ ಸೃಷ್ಟಿಯ ಸಾರಸತ್ವ ಮತ್ತು ತನ್ನ ವ್ಯಕ್ತಿಗತ ಸಾರಸತ್ವ ಎರಡೂ ಒಂದೇ ಆಗಿರುವುದರಿಂದ ವ್ಯಕ್ತಿಯು ವ್ಯಕ್ತಿಗತವಾಗಿ ತನ್ನ ಮುಕ್ತಿಯನ್ನು ಸಾಧಿಸಿದರೆ, ವಿಶ್ವವೇ ಮುಕ್ತಿಯನ್ನು ಸಾಧಿಸಿದಂತೆ. ಆದ್ದರಿಂದ ಅವರವರ ಮುಕ್ತಿಗೆ ಅವರವರೇ ಹೊಣೆಗಾರರು. ಇತರರಿಗೆ ಮುಕ್ತಿಹೊಂದಲು ಸಹಾಯ ಮಾಡುತ್ತೇನೆನ್ನುವುದೂ ಈ ಸಾಧು–ಸಂತರ ಪ್ರಕಾರ ಅಹಂಕಾರವೇ. ಅಂದರೆ, ಎಲ್ಲರೂ ಅವರವರ ಮಟ್ಟಿಗೆ 'ಆತ್ಮನಿರ್ಭರ'ರಾದರೆ ಸಾಕು. ಹಾಗಿದ್ದರೂ ಊಟ, ಬಟ್ಟೆ, ವಸತಿ, ಔಷಧ ಮುಂತಾದ ಕನಿಷ್ಠ ಜೀವನಾಧಾರಗಳಿಗಾಗಿ ಇತರರನ್ನು ಅವಲಂಬಿಸಲೇಬೇಕಾದ ಅನಿವಾರ್ಯತೆಯಿಂದಾಗಿ ಆಶ್ರಮ, ಗುರುಕುಲ, ಶಿಷ್ಯತ್ವ ಮುಂತಾದ ಸಡಿಲವಾದ ಕುಟುಂಬ ವ್ಯವಸ್ಥೆಯ ಮೂಲಕ ಇಂಥವರು ಒಂಟಿಯಾಗಿದ್ದರೂ ಸಾಮಾಜಿಕ ವ್ಯಕ್ತಿಗಳೇ ಆಗಿರುತ್ತಾರೆ.

ಮೇಲೆ ಹೇಳಿದ ಆಧ್ಯಾತ್ಮಿಕತೆ ಮತ್ತು ಪ್ರಜ್ಞಾಪೂರ್ವಕವಾದ ಸಾಮಾಜಿಕತೆಯನ್ನು ಒಂದುಗೂಡಿಸಿ ಬದುಕುವ ಸಾಧು–ಸಂತರು ಎರಡನೆಯ ಬಗೆಯ ಜನರು. ನಮ್ಮ ಸುತ್ತಲಿನ ಜೀವಿಗಳೆಲ್ಲರೂ ನಮ್ಮ ಸಹ ನರಳಿಕೆಯ ಬಂಧುಗಳೇ ಆದ್ದರಿಂದ, 'ಸಮಾಜಸೇವೆ'ಯು ಆಧ್ಯಾತ್ಮಿಕ ಸಾಧನೆಯ ಇನ್ನೊಂದು ರೂಪ ಎಂದು ಇವರು ನಂಬುತ್ತಾರೆ. ಆದ್ದರಿಂದ ಬಡಜನರು ಅವರ ಭೌತಿಕ ಅಗತ್ಯಗಳನ್ನು ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ, ಸಾಂಕೇತಿಕವಾಗಿ, ಪೂರೈಸಿಕೊಳ್ಳಲು ನೆರವಾಗುವುದು ಭಗವತ್ಸೇವೆಯೇ ಆಗುತ್ತದೆ ಎಂಬುದು ಇವರ ನಿಲುವು. ಕಡೆಯ ಪಕ್ಷ ಬಡಜನರನ್ನು ಅವರ ಕಷ್ಟಕಾಲದಲ್ಲಿ ಸಂತೈಸುವುದು, ಆಪ್ತ ಸಮಾಲೋಚನೆಯ ಮೂಲಕ ಅವರ ದುಃಖ–ದುಮ್ಮಾನಗಳನ್ನು ಕಡಿಮೆ ಮಾಡುವುದು ಅವರು ಮಾಡುವ ಸಾಮಾಜಿಕ ಕೆಲಸ. ಜನಸಾಮಾನ್ಯರ ಮುಕ್ತಿಯಲ್ಲಿ ತಮ್ಮ ಮುಕ್ತಿಯೂ ಸೇರಿದೆಯಾದ್ದರಿಂದ 'ಜನಸೇವೆಯೇ ಜನಾರ್ದನ ಸೇವೆ' ಎಂದು ತಿಳಿದು ಸಾಮಾಜಿಕ ಒಡನಾಟದಲ್ಲಿ ತೊಡಗುವುದು ಇವರ ಆಧ್ಯಾತ್ಮಿಕತೆಯ ಪ್ರಧಾನ ಶೈಲಿ. ಮುಗ್ಧ ಬಡಜನರು ಮತ್ತು ಪಾಪಭೀತಿಯ ಶ್ರೀಮಂತರು ಇವರ ಜೀವನ ಶೈಲಿಗೆ ಅಗತ್ಯವಾದ ಹಣವನ್ನು ದೇಣಿಗೆ, ದಾನ ಮುಂತಾದ ವಿಧಾನಗಳ ಮೂಲಕ ಒದಗಿಸುವವರು. ಈ ಎಲ್ಲ ಸಾಧು–ಸಂತರನ್ನು ಜನ ಉತ್ತರ ಭಾರತದಲ್ಲಿ 'ಭಗತ್ ಲೋಗ್' ಎಂದು ಕರೆಯುವುದುಂಟು.

ಈಚೆಗೆ ದೆಹಲಿ ಮತ್ತು ಹರಿದ್ವಾರಗಳಲ್ಲಿ ಆಯೋಜಿಸಲಾಗಿದ್ದ ಧರ್ಮ ಸಂಸತ್ತಿನಲ್ಲಿ ಪಾಲ್ಗೊಂಡು ದ್ವೇಷ ಭಾಷಣ ಮಾಡಿ ಸುದ್ದಿಮಾಡಿದವರೂ ಸಹ ತಮ್ಮನ್ನು ಸಾಧು–ಸಂತರೆಂದೇ ಕರೆದುಕೊಳ್ಳುತ್ತಾರೆ. ಕಾಷಾಯ ದಿರಿಸು, ಮಾರುಗಟ್ಟಲೆ ರುದ್ರಾಕ್ಷಿ ಮಾಲೆ, ಎದ್ದು ಕಾಣುವ ಧಾರ್ಮಿಕ ಲಾಂಛನಗಳೇ ಇವರ ಆಧ್ಯಾತ್ಮಿಕತೆ. ಇವನ್ನು ಮಾಧ್ಯಮಗಳ ಮುಂದೆ ಪ್ರದರ್ಶಿಸುತ್ತಾ, ತಮ್ಮನ್ನು ರಕ್ಷಿಸುವ 'ಧರ್ಮ'ವನ್ನು ಪ್ರಾಣ ಕೊಟ್ಟಾದರೂ ರಕ್ಷಿಸಲು ಸಿದ್ಧರಾಗಿರುವ ವೀರ ಯತಿಗಳು ಇವರು. ಶ್ರೀಮಂತಿಕೆ ತುಂಬಿ ತುಳುಕುವ ಮಠ, ಅಗಾಧ ಭೂಮಿ–ಕಟ್ಟಡಗಳ ಆಸ್ತಿ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳು, ಹೈಟೆಕ್ ಆಸ್ಪತ್ರೆಗಳು, ನಾನಾ ಬಗೆಯ ಕೈಗಾರಿಕೋದ್ಯಮಗಳು, ಪ್ರತ್ಯಕ್ಷ ಮತ್ತು ಪರೋಕ್ಷ ರಾಜ್ಯಾಧಿಕಾರವನ್ನು ಹೊಂದಿದ ಇವರಿಗೆ ರಾಜಕಾರಣಿಗಳು, ಪೋಲೀಸ್ ಅಧಿಕಾರಿಗಳು, ನ್ಯಾಯಾಧೀಶರು, ಸಿನಿಮಾ ತಾರೆಯರು ಮತ್ತು ಉನ್ನತ ಅಧಿಕಾರಿಗಳು 'ಆಪ್ತವಲಯ'ಕ್ಕೆ ಸೇರಿದವರು. ದುಷ್ಟ ಶಿಕ್ಷಣೆ ಮತ್ತು ಶಿಷ್ಟ ರಕ್ಷಣೆ, ಧರ್ಮ ಸಂಸ್ಥಾಪನೆ ಇವರ ಧ್ಯೇಯವಾಕ್ಯ. ಕ್ಷಾತ್ರಬಲವನ್ನು ಮತ್ತು ಬ್ರಹ್ಮತೇಜಸ್ಸನ್ನು ಮೇಳವಿಸಿದ ಪರಶುರಾಮ, ಧರ್ಮವನ್ನು ಉದ್ಧರಿಸಲು ಅವತಾರವೆತ್ತಿ ರಾಕ್ಷಸರನ್ನು ಕೊಂದ ಶ್ರೀರಾಮ, ಧರ್ಮಸಂಸ್ಥಾಪನೆಗಾಗಿ ದುಷ್ಟರ ಸಂಹಾರ ಮಾಡುವುದು ಅನಿವಾರ್ಯವಾದಾಗ ತನ್ನ ಸೋದರ ಮಾವನನ್ನೇ ಕೊಂದ ಶ್ರೀಕೃಷ್ಣ ಈ ಸಾಧು–ಸಂತರ ನೆಚ್ಚಿನ ದೇವರುಗಳು. ಈ ಸಾಧು–ಸಂತರ ಮಾರ್ಗದರ್ಶನ ಪಡೆಯಲು ಇವರ ಚೇಲಾಗಳು, ಶಿಷ್ಯವೃಂದ ಮತ್ತು ಭಕ್ತವೃಂದಗಳು ಅದೆಷ್ಟು ಜನ್ಮಗಳ ಪುಣ್ಯ ಮಾಡಿದ್ದಾರೋ ಊಹಿಸುವುದೂ ಕಷ್ಟ. ಈ ಸಾಧು–ಸಂತರೂ ತಮ್ಮನ್ನು ತಾವೇ 'ಭಗತ್ ಲೋಗ್' ಎಂದು ಕರೆಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಈ ಹಿನ್ನೆಲೆಯಲ್ಲಿ, ಕಿಪ್ಲಿಂಗ್ ನ ಸಾಹಿತ್ಯದಲ್ಲಿ ಸಿಗುವ ಸಂತನೊಬ್ಬನ ಕತೆ ವಿಶೇಷವಾಗಿ ಗಮನ ಸೆಳೆಯುತ್ತದೆ. ಭಾರತದಲ್ಲಿ ಹುಟ್ಟಿ, ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸವನ್ನು ಪಡೆದು ಈಸ್ಟ್ ಇಂಡಿಯಾ ಕಂಪೆನಿಯ ಗೂಢಚಾರನಾಗಿ ಕೆಲಸಮಾಡಿದ ರುಡ್ಯಾರ್ಡ್ ಕಿಪ್ಲಿಂಗ್ ಭಾರತದ ಬೌದ್ಧ ಮತ್ತು ಹಿಂದೂ ವೇದಾಂತ ಮೂಲದ ಅಧ್ಯಾತ್ಮಿಕತೆಯನ್ನು ಸಾಮಾಜಿಕ ನೆಲೆಯಲ್ಲೂ ಅರ್ಥೈಸಿಕೊಂಡಿದ್ದ ಬ್ರಿಟಿಷ್ ಲೇಖಕ. ರಾಜಕೀಯ–ಆಧ್ಯಾತ್ಮಿಕ ಅನ್ವೇಷಣೆಯನ್ನು ಕೇಂದ್ರವಾಗಿರಿಸಿಕೊಂಡ ಅವನ 'ಕಿಮ್' ಕಾದಂಬರಿ, ಯುದ್ಧಭೂಮಿಯಲ್ಲಿ ಸೈನಿಕರಿಗೆ ತನ್ನ ಪ್ರಾಣವನ್ನೇ ಪಣವಿಟ್ಟು ನೀರು ಒದಗಿಸುವ ಹರಕು ಬಟ್ಟೆಯ ಹುಡುಗನನ್ನು ಕೊಂಡಾಡುವ 'ಗಂಗಾದೀನ್' ಎಂಬ ಕವನ, ಭಾರತದ ನೆಲ–ಜನ–ಚಿಂತನೆಗಳ ಬಗ್ಗೆ ಕಿಪ್ಲಿಂಗ್ ಗೆ ಇದ್ದ ಪ್ರೀತಿ–ಆಸಕ್ತಿಗಳನ್ನು ದಾಖಲಿಸುತ್ತವೆ. ಅವನು ಬರೆದ 'ದಿ ಮಿರಾಕಲ್ ಆಫ್ ಪೂರಣ್ ಭಗತ್' ಎಂಬ ಸಂತನ ತ್ಯಾಗದ ನಿರೂಪಣೆ ಈಶಾವಾಸ್ಯೋಪನಿಷತ್ತಿನ ಸಾಮಾಜಿಕ ದರ್ಶನವನ್ನು 'ವಿಶ್ವಗುರು'ವಾದ ಭಾರತೀಯರಿಗೇ ಪರಿಚಯಿಸುವ ಕತೆ.

ಈ ಕತೆಯ ಕೇಂದ್ರ ಪಾತ್ರ ಪೂರಣ್ ದಾಸ್ ಎಂಬ ಬ್ರಾಹ್ಮಣ ದಿವಾನ. ಈತ ಬ್ರಿಟಿಷ್ ಆಡಳಿತದ ಅಡಿಯಲ್ಲೇ ತನ್ನ ಹಿಮಾಲಯದ ಗುಡ್ಡಗಾಡು ಪ್ರಾಂತ್ಯದ ಹಿಂದೂ ರಾಜನ ಬಳಿ ಸೇವೆ ಸಲ್ಲಿಸುವ ಐ.ಸಿ.ಎಸ್ ಅಧಿಕಾರಿ. ಆಗಿನ ಕಾಲದ ಸಾಂಪ್ರದಾಯಿಕ ಧಾರ್ಮಿಕ ನಿರ್ಬಂಧಗಳನ್ನು ಧಿಕ್ಕರಿಸಿ ಸಮುದ್ರಯಾನ ಮಾಡಿ ಬಂದು ತನ್ನ ಆಳ್ವಿಕೆಯ ಆ ಬೆಟ್ಟಗುಡ್ಡಗಳ ಸಣ್ಣ ರಾಜ್ಯದ ಜನರಿಗಾಗಿ ಆಧುನಿಕ ಸುಧಾರಣೆಗಳನ್ನು ತರುತ್ತಾನೆ. ತನ್ನ ಆಡಳಿತಾತ್ಮಕ ಜಾಣ್ಮೆಯಿಂದ ರಾಜನನ್ನು ಒಲಿಸಿಕೊಂಡು, ಆಧುನಿಕತೆಯನ್ನು ಜನರಿಗೆ ಪರಿಚಯಿಸುತ್ತಾನೆ. ಅಂಥವನು ತನ್ನ ವೃತ್ತಿಯ ಉತ್ತುಂಗ ಶಿಖರದಲ್ಲಿದ್ದಾಗ 'ಸತ್ತುಹೋದ' ಎಂದು ಕಿಪ್ಲಿಂಗ್ ಹೇಳುತ್ತಾನೆ. ಹಾಗೆಂದರೆ ಪೂರಣ್ ದಾಸ್ ಸಂನ್ಯಾಸವನ್ನು ಸ್ವೀಕರಿಸಿದ ಎಂದು ಅರ್ಥ. ಸಾಂಪ್ರದಾಯಿಕ ಹಿಂದೂ ಚಿಂತನೆಯ ದೃಷ್ಟಿಯ ಪ್ರಕಾರ ಸಂನ್ಯಾಸಿಯಾಗುವುದೆಂದರೆ ಪೂರ್ವಾಶ್ರಮದ ಬದುಕಿಗೆ ವಿದಾಯ ಹೇಳುವುದೇ ತಾನೆ!

ಆ ಇಳಿ ವಯಸ್ಸಿನಲ್ಲಿ ವಿರಾಗಿಯಾಗಿ, ಎಲ್ಲ ಲೌಕಿಕ ಭೋಗಗಳನ್ನೂ ತೊರೆದು ಜನವಸತಿ ವಿರಳವಾಗಿರುವ ಗುಡ್ಡಗಳ ನಡುವೆ ಒಂದು ಸಣ್ಣ ಗುಹೆಯಲ್ಲಿ ಪೂರಣ್ ಭಗತ್ ಆಗಿ ವಾಸಿಸುತ್ತಾ ಸಮಾಧಿಯ ಹಂತಕ್ಕೆ ತಲುಪುವಷ್ಟು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗುತ್ತಾನೆ. ಗುಡ್ಡಗಳ ಬುಡದಲ್ಲಿ, ನೂರಾರು ಅಡಿ ಕೆಳಗೆ ಸುತ್ತ ಮುತ್ತಲಿನ ಕಣಿವೆಗಳಲ್ಲಿ ವಾಸಿಸುವ ಗ್ರಾಮಸ್ಥರು ದಿನವೂ ಗುಡ್ಡ ಹತ್ತಿ ಗುಡ್ಡ ಇಳಿದು ಪೂರಣ್ ಭಗತ್ ಗೆ ಅಯಾಚಿತವಾಗಿ ಆಹಾರವನ್ನು ತಂದುಕೊಡುತ್ತಾರೆ. ನಾನಾ ಬಗೆಯ ಕಾಡು ಪ್ರಾಣಿಗಳು ಸಾಧು ಸ್ವಭಾವವನ್ನು ಮೈಗೂಡಿಸಿಕೊಂಡು ಅವನ ಬಂಧುಗಳಾಗುತ್ತಾರೆ. ಹೀಗಿರಲು ಒಂದು ಸಲ ವಾರಗಟ್ಟಲೆ ಮಳೆ ಸುರಿಯುತ್ತದೆ. ಪೂರಣ್ ಭಗತ್ ನಿಸ್ಸಹಾಯಕನಾಗಿ, ಆಹಾರವಿಲ್ಲದೆ ಗುಹೆಯಲ್ಲೇ ಉಳಿಯುತ್ತಾನೆ. ಮಧ್ಯರಾತ್ರಿಯಲ್ಲಿ, ಮಳೆಸುರಿಯುತ್ತಿರುವಾಗಲೇ ತನ್ನ ಜೊತೆಗಿದ್ದ ಕಡವೆಯು ಕೊಡುವ ಮುನ್ಸೂಚನೆಯಿಂದಾಗಿ ಭೂ ಕುಸಿತ ಸಂಭವಿಸುತ್ತದೆ ಎಂದು ಅವನಿಗೆ ಅರ್ಥವಾಗುತ್ತದೆ. ಕಣಿವೆಯಲ್ಲಿ ವಾಸಿಸುವ, ತನಗೆ ದಿನವೂ ಆಹಾರ ತಂದುಕೊಡುವ ಗ್ರಾಮಸ್ಥರು ಮನಸ್ಸಿಗೆ ಬರುತ್ತಾರೆ. ಗುಡ್ಡ ಕುಸಿದರೆ ಕಣಿವೆಯಲ್ಲಿರುವ ಗ್ರಾಮಸ್ಥರ ಗತಿ ಏನು ಎಂದು ವ್ಯಾಕುಲನಾಗುತ್ತಾನೆ. ಒಬ್ಬ ಸಾಧು, ಒಂದು ಕ್ಷಣ, ವಿರಾಗಿಯಾದ ಸಾಧು, ತಾನೇನು ಮಾಡಬಲ್ಲೆ ಎಂದು ವ್ಯಸನಪಟ್ಟು ಉದಾಸೀನನಾಗುತ್ತಾನೆ. ಮರುಕ್ಷಣವೇ 'ಪೂರಣ್ ಭಗತ್' 'ಪೂರಣ್ ದಾಸ್' ಅಧಿಕಾರಿಯಾಗಿ ಬಿಡುತ್ತಾನೆ.

ಕಡವೆಯ ಕೊರಳಿನ ಆಸರೆ ಪಡೆದು ಲೆಕ್ಕಿಸದೆ ಗುಡ್ಡ ಇಳಿದು, ಆಯಾಸವಾದರೂ ಗುಡ್ಡ ಹತ್ತಿ ಕಣಿವೆಗಳಲ್ಲಿ ಕಿಟಕಿ ಬಾಗಿಲುಗಳನ್ನು ಭದ್ರಪಡಿಸಿಕೊಂಡು ಮಲಗಿದ್ದ ಜನರ ಒಂದೊಂದು ಮನೆಯ ಬಾಗಿಲನ್ನೂ ತಟ್ಟಿ ಗುಡ್ಡ ಕುಸಿಯುತ್ತಿದೆ ಎಂದು ಕೂಗಿ ಕೂಗಿ ಎಬ್ಬಿಸುತ್ತಾನೆ. ನಿದ್ದೆಗಣ್ಣಿನಲ್ಲಿದ್ದ ಜನರನ್ನು ಜಮಾಯಿಸಿಕೊಂಡು ಆ ನಿಟ್ಟಿರುಳಿನಲ್ಲಿ ಎದುರಿಗಿದ್ದ ಮತ್ತೊಂದು ಗುಡ್ಡವನ್ನು ಏರುತ್ತಾನೆ. ಎಲ್ಲರೂ ಆತಂಕದಿಂದ ಬೆಳಗಾಗುವುದನ್ನೇ ಕಾಯುತ್ತಾರೆ. ಬೆಳಗಾಗಿ ನೋಡಿದರೆ ಅವರ ಇಡೀ ಹಳ್ಳಿಯ ಮೇಲೆ ಗುಡ್ಡವೇ ಜಾರಿ ಕುಳಿತಿರುತ್ತದೆ. ಮೊದಲು ಹಳ್ಳಿಯಿದ್ದ ಸ್ಥಳ ಹಳ್ಳಿಯ ಗುರುತೇ ಗೊತ್ತಾಗದಷ್ಟು ಮಣ್ಣು ರಾಶಿಯಾಗಿರುತ್ತದೆ. ಪೂರಣ್ ಭಗತ್ ವಯಸ್ಸಿನ ಮತ್ತು ಅತೀವ ಶ್ರಮದಿಂದಾದ ಬಳಲಿಕೆಯ ನಿಶ್ಶಕ್ತಿಯಿಂದಾಗಿ ಪ್ರಾಣಬಿಡುತ್ತಾನೆ. ಗ್ರಾಮಸ್ಥರು ಕೃತಜ್ಞತೆಯಿಂದ ಅವನಿಗೊಂದು ಗುಡಿ ಕಟ್ಟುತ್ತಾರೆ. ಆ ಗುಡಿಯ ಹಿನ್ನೆಲೆ, ಕತೆಗಾರ ಕಿಪ್ಲಿಂಗ್ಗೆ ದೊರೆತು 'ದಿ ಮಿರಾಕಲ್ ಆಫ್ ಪೂರಣ್ ಭಗತ್' ಕತೆ ಹುಟ್ಟುತ್ತದೆ.

'ಪೂರ್ಣ ಮದಃ, ಪೂರ್ಣಮಿದಂ' ಎಂಬ ಮಂತ್ರ ಬಾಯಿಪಾಠವಾಗಿರುವ. ದೆಹಲಿ–ಹರಿದ್ವಾರದ ದರ್ಮ ಸಂಸತ್ತಿನ 'ಸಾಧು–ಸಂತ'ರು ಧರ್ಮದ ರಕ್ಷಣೆಗಾಗಿ ಪ್ರಾಣ ಕೊಡಲು ಕರೆಕೊಡುತ್ತಾರೆ. ಯಾರ ಪ್ರಾಣ? ಎಂಬ ಪ್ರಶ್ನೆಗೆ ಸಿಗುವ ಉತ್ತರದಲ್ಲಿ ಪೂರಣ್ ಭಗತ್ ಆಚರಿಸಿದ ಧರ್ಮಕ್ಕೂ 'ಭಗತ್ ಲೋಗ್' ಆಚರಿಸಲು ಬಯಸುವ ಧರ್ಮಕ್ಕೂ ಇರುವ ವ್ಯತ್ಯಾಸ ಢಾಳಾಗಿ ಗೋಚರಿಸುತ್ತದೆ.





ಉತ್ತರ ಪ್ರದೇಶ: ಕೋಮುವಾದಿ ಅಜೆಂಡಾಕ್ಕೇ ಜೋತು ಬಿದ್ದ ಬಿಜೆಪಿ



ರೈತ ಚಳವಳಿಯ ಪ್ರಭಾವ ಮತ್ತು ಸಾಮಾಜಿಕ-ಆರ್ಥಿಕ ರಂಗದಲ್ಲಿ ಕಳಪೆ ದಾಖಲೆಯನ್ನು ಇಟ್ಟುಕೊಂಡು ಮೋದಿ-ಷಾ-ಆದಿತ್ಯನಾಥ ತ್ರಿಮೂರ್ತಿಗಳು ಅಯೋಧ್ಯೆಯಲ್ಲಿ ಭವ್ಯ ಮಂದಿರ, ಕಾಶಿ ವಿಶ್ವನಾಥ ಕಾರಿಡಾರ್ ಮತ್ತು ಭವಿಷ್ಯದಲ್ಲಿ ಮಥುರಾ ಮಂದಿರ ಸಹಿತ ಹಿಂದೂ ಗುರಿಸಾಧನೆಗ್ಗೆ ತಾವು ನೀಡಿದ ಕೊಡುಗೆಗಳೆಂದು ವೈಭವೀಕರಿಸುವ ಮಾರ್ಗ ಅನುಸರಿಸುತ್ತಿದ್ದಾರೆ. ಮುಸ್ಲಿಮರನ್ನು ಎಲ್ಲಿಡಬೇಕೋ ಅಲ್ಲಿಟ್ಟು ಇವನ್ನೆಲ್ಲ ಸಾಧಿಸಲಾಗಿದೆ ಎಂಬ ಗೋಪ್ಯ ಸಂದೇಶವನ್ನೂ ಅದು ಸಾರುತ್ತಿದೆ. ಅಮಿತ್ ಷಾ ಮಾತಿನಲ್ಲೇ ಹೇಳುವುದಾದರೆ ಇದು ಬಿಜೆಪಿಗೆ ಒಂದು ವಿಧಾನಸಭೆ ಚುನಾವಣೆ ಅಷ್ಟೇ ಅಲ್ಲ; ಭಾರತದ ಭವಿಷ್ಯವನ್ನು ನಿರ್ಧರಿಸುವ ವಿದ್ಯಮಾನವಾಗಿದೆ. ಹಿಂದುತ್ವದ ಭವಿಷ್ಯದ ವಿಚಾರವೇ ಅದರಲ್ಲಿ ಒಳಗೊಂಡಿರುವುದರಿಂದ ಬಿಜೆಪಿ ಇದನ್ನು ಬಹಳ ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡಿದೆ. ಅದುವೇ ಬಿಜೆಪಿ ನಾಯಕತ್ವದ ಹತಾಶೆಯನ್ನು ವಿವರಿಸುತ್ತದೆ.

*** ಪ್ರಕಾಶ್ ಕಾರಟ್**

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗಳಿಗೆ ಸಜ್ಜಾಗಿದೆ. ರಾಜ್ಯದ ಪಶ್ಚಿಮ ಭಾಗದಲ್ಲಿ ಫೆಬ್ರವರಿ 10ರಂದು ಮೊದಲ ಹಂತದ ಮತದಾನ ನಡೆಯಲಿದ್ದು ಬಿಜೆಪಿ ಮತ ಸೆಳೆಯಲು ಕೇವಲ ಹಿಂದುತ್ವ ಕೋಮುವಾದಿ ಅಜೆಂಡಾದ ಮೇಲೆಯೇ ಅವಲಂಬಿಸಿರುವುದು ಸ್ಪಷ್ಟವಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಮತ್ತು ಮುಖ್ಯಮಂತ್ರಿ ಆದಿತ್ಯನಾಥ ಬಿಜೆಪಿ ಪ್ರಚಾರ ಕಾರ್ಯ ಆರಂಭಿಸಿದ್ದು ಅವರ ಭಾಷಣಗಳು ಕೋಮುವಾದಿ ಗೋಪ್ಯಸಂದೇಶಗಳನ್ನು ಬಿತ್ತರಿಸುವ ಹಾಗೂ ಮುಸ್ಲಿಂ-ವಿರೋಧಿ ಅಂಶಗಳಿಂದ ಕೂಡಿವೆ. ಇದು 80% ವರ್ಸಸ್ 20% ನಡುವಿನ ಹೋರಾಟವಾಗಲಿದೆ ಎಂದು ಘೋಷಿಸುವ ಮೂಲಕ ಆದಿತ್ಯನಾಥ ಪ್ರಚಾರಕ್ಕೆ ಚಾಲನೆ ನೀಡಿದ್ದಾರೆ. ಇದು ರಾಜ್ಯದ ಹಿಂದೂ ಮತ್ತು ಮುಸ್ಲಿಮರ ಜನಸಂಖ್ಯೆಯ ಅಂದಾಜು ಅನುಪಾತವಾಗಿದೆ. 20 ಶೇಕಡ ಜನರು ಎಂದರೆ ರಾಮ ಮಂದಿರ, ಕಾಶಿ ವಿಶ್ವನಾಥ ಧಾಮ, ಮಥುರಾ ಬೃಂದಾವನ ವಿರೋಧಿಸುವವರು ಎಂದು ಆದಿತ್ಯನಾಥ ನಂತರ ಸಮಜಾಯಿಷಿ ನೀಡಿದ್ದರು. ಅವರು, ಅಂದರೆ ಶೇಕಡ 20 ಜನರು ಮಾಫಿಯಾಗಳು ಮತ್ತು ಭಯೋತ್ಪಾದಕರ ಹಿತಚಿಂತಕರೂ ಎಂದೂ ಹೇಳಿದ್ದರು.

ಆದಿತ್ಯನಾಥ-ಅಮಿತ್‌ಷಾ ಕೋಮುವಾದಿ ಪ್ರಚಾರ

ಆದಿತ್ಯನಾಥರ ಕೋಮುವಾದಿ ಪ್ರಚಾರದ ಉದ್ದೇಶ ಇದು. ಒಂದು ಕಡೆ ಹಿಂದೂಗಳು, ಮತ್ತೊಂದು ಕಡೆ ಹಿಂದೂ ದೇವಸ್ಥಾನಗಳನ್ನು ವಿರೋಧಿಸುವವರು, ಭಯೋತ್ಪಾದಕರು ಹಾಗೂ ಮಾಫಿಯಾಗಳೊಂದಿಗೆ ಸಂಪರ್ಕ ಇರುವವರು ಎಂದು ಬಿಂಬಿಸುವುದು ಅವರ ಗುರಿಯಾಗಿದೆ. ಸಮಾಜವಾದಿ ಪಕ್ಷವನ್ನು ಜಿನ್ನಾ ಪ್ರೇಮಿಗಳು ಹಾಗೂ ಮಾಫಿಯಾ ಹಾಗೂ ಭಯೋತ್ಪಾದನೆ ಬೆಂಬಲಿಗರು ಎಂದು ಬಿಂಬಿಸಲು ಯತ್ನಿಸಲಾಗಿದೆ. ತನ್ನ ಉದ್ದೇಶ ಏನೆಂಬುದನ್ನು ಇನ್ನೂ ಸ್ಪಷ್ಟಪಡಿಸಲು ಆದಿತ್ಯನಾಥ ಒಂದು ಟ್ವೀಟ್ ಮಾಡಿದ್ದಾರೆ: 'ಅವರು ಜಿನ್ನಾ ಪ್ರೇಮಿಗಳು. ನಾವು ಸರ್ದಾರ್ ಪಟೇಲ್‌ರ ಆರಾಧಕರು' ಎಂಬುದೇ ಆ ಟ್ವೀಟ್.

ಕೋಮುವಾದಿ ಪ್ರಚಾರದಲ್ಲಿ ಅಮಿತ್ ಷಾ ಕೂಡ ಹಿಂದೆ ಬಿದ್ದಿಲ್ಲ. ಅಸೆಂಬ್ಲಿ ಚುನಾವಣೆ ಘೋಷಣೆಯಾದ ನಂತರ ಷಾ ಕೈರಾನಾ ಪಟ್ಟಣದಲ್ಲಿ ಮೊದಲ ಸಭೆ ನಡೆಸಿದರು. ಸಮಾಜವಾದಿ ಪಕ್ಷದ ಆಡಳಿತವಿದ್ದಾಗ ಬೆದರಿಕೆಗಳಿಂದಾಗಿ ಸಾವಿರಾರು ಹಿಂದೂಗಳು ಕೈರಾನಾದಿಂದ ವಲಸೆ ಹೋಗಿದ್ದರು ಎಂದು 2017ರ ಅಸೆಂಬ್ಲಿ ಚುನಾವಣೆ ಪ್ರಚಾರದ ವೇಳೆ ಬಿಜೆಪಿ ಅಪಪ್ರಚಾರ ಮಾಡಿತ್ತು.

ಬಿಜೆಪಿ ಆಡಳಿತದಿಂದಾಗಿ ಜನರು ಸುರಕ್ಷಿತವಾಗಿ ಇರಬಹುದು ಎಂದು ಕೈರಾನಾ ಸಭೆಯಲ್ಲಿ ಷಾ ಹೇಳಿದರು. ದೇವಬಂದ್‌ನಲ್ಲಿ ನಡೆದ ಇನ್ನೊಂದು ಸಭೆಯಲ್ಲಿ ಮಾತನಾಡಿದ ಷಾ, 2013ರಲ್ಲಿ ಮುಜಾಫರ್‌ನಗರದಲ್ಲಿ ಮುಸ್ಲಿಮರ ವಿರುದ್ಧ ನಡೆದ ಹಿಂಸಾಚಾರದ ಪಿತೂರಿಗಾರರನ್ನು ಸಮರ್ಥಿಸಿ ಬೆಂಬಲಿಸಿದರು. ಬಿಜೆಪಿ ನಾಯಕರ ವಿರುದ್ಧ ಸುಳ್ಳು ಕೇಸ್‌ಗಳನ್ನು ಹೂಡಲಾಗಿತ್ತು ಎಂದು ಆರೋಪಿಸಿದ ಷಾ, ನ್ಯಾಯಕ್ಕಾಗಿ ಅವರು ನಡೆಸಿದ ಹೋರಾಟವನ್ನು ಶ್ಲಾಘಿಸಿದ್ದರು. ಅಖಿಲೇಶ್ ಯಾದವ್ ಸರ್ಕಾರದ ಅವಧಿಯಲ್ಲಿ ಕ್ರಿಮಿನಲ್‌ಗಳು ಮುಕ್ತವಾಗಿ ಓಡಾಡುತ್ತಿದ್ದರು. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾದ್ದರಿಂದ ಕ್ರಿಮಿನಲ್‌ಗಳಿಗೆ ರಕ್ಷಣೆ ನೀಡಲಾಗಿತ್ತು ಎಂಬ ಭಾವನೆ ಬರುವಂತೆ ಷಾ ಮಾತನಾಡಿದರು.

ಮೊದಲ ಮೂರು ಹಂತದ ಚುನಾವಣೆಗಳು ರಾಜ್ಯದ ಪಶ್ಚಿಮ ಭಾಗದಲ್ಲಿ ನಡೆಯುತ್ತಿರುವುದರಿಂದ ಮಥುರಾದ ಈದ್ಗಾ ಇರುವ ಸ್ಥಳದಲ್ಲಿ ದೇವಸ್ಥಾನ ನಿರ್ಮಿಸುವ ವಿಚಾರವನ್ನು ಬಿಜೆಪಿ ಕೆದಕಿದೆ. ಸ್ವತಃ ಉಪ ಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಅವರೇ ಈ ವಿಚಾರವನ್ನು ಎತ್ತಿದ್ದಾರೆ. ಅಂದರೆ ಇಡೀ ಚುನಾವಣಾ ಪ್ರಚಾರದಲ್ಲಿ ಅಯೋಧ್ಯೆ, ಕಾಶಿ ಮತ್ತು ಮಥುರಾ ವಿಚಾರ ಪ್ರಮುಖ ಸ್ಥಾನ ಪಡೆಯಲಿವೆ ಎಂದಾಯಿತು. ಕೋಮುವಾದಿ ಅಜೆಂಡಾ ಬಗ್ಗೆ ಬಿಜೆಪಿ ಒತ್ತು ಹಾಗೂ ಕೋಮುವಾದಿ ಧ್ರುವೀಕರಣಕ್ಕೆ ನಡೆಸುತ್ತಿರುವ ಅದರ ಪ್ರಯತ್ನಗಳು, ವಸ್ತುಸ್ಥಿತಿ ಬದಲಾದ ಹಿನ್ನೆಲೆಯಲ್ಲಿ ಬಿಜೆಪಿಯ ಹತಾಶೆಯನ್ನು ಬಿಂಬಿಸುತ್ತದೆ.

*** ರೈತ ಚಳವಳಿಯ ಪ್ರಭಾವ**

ಐತಿಹಾಸಿಕ ರೈತ ಚಳವಳಿಯು ಜಾಟ್-ಮುಸ್ಲಿಂ ನಡುವಿನ ಒಡಕನ್ನು ಬಹುತೇಕವಾಗಿ ಮುಚ್ಚಿದೆ. 2013ರಲ್ಲಿ ಮುಜಾಫರ್‌ನಗರದಲ್ಲಿ ನಡೆದ ದೊಂಬಿಗಳ ನಂತರ ಜಾಟ್-ಮುಸ್ಲಿಂ ಬಿರುಕು ದೊಡ್ಡದಾಗಿತ್ತು. ವಿಶೇಷವಾಗಿ ಲಖಿಂಪುರ ಖೇರಿಯಲ್ಲಿ ನಾಲ್ಕು ರೈತರ ಸಾವಿಗೆ ಕಾರಣವಾದ ದೌರ್ಜನ್ಯದ ನಂತರ, ರೈತರ ಆಕ್ರೋಶ ಎದ್ದು ಕಾಣುತ್ತಿದೆ. ಬಿಜೆಪಿ ಅಭ್ಯರ್ಥಿಗಳು ಕಾಲಿಟ್ಟ ಗ್ರಾಮಗಳಲ್ಲಿ ಜನರು ವಿರೋಧದೊಂದಿಗೆ ಸ್ವಾಗತ ನೀಡುತ್ತಿದ್ದಾರೆ. ಬಿಜೆಪಿಗರು ಹಳ್ಳಿಗಳಿಗೆ ಪ್ರವೇಶಿಸುವುದಕ್ಕೇ ಬಿಡುತ್ತಿಲ್ಲ. ಮುಸ್ಲಿಂ-ವಿರೋಧಿ ವಿಚಾರವನ್ನು ಹಾಗೂ ಹಳೆಯ ವಿವಾದಗಳನ್ನು ಕೆದಕುವುದು ಕೋಮುವಾದಿ ಒಡಕು ಹುಟ್ಟಿಸುವ ಸ್ಪಷ್ಟ ತಂತ್ರವಾಗಿದೆ.

ಹಲವು ಹಿಂದುಳಿದ ವರ್ಗಗಳ ಸಚಿವರು ಮತ್ತು ಶಾಸಕರು ಬಿಜೆಪಿ ತೊರೆದು ಸಮಾಜವಾದಿ ಪಕ್ಷವನ್ನು ಸೇರುತ್ತಿರುವುದು ಯಾದವೇತರ ಹಿಂದುಳಿದ ಜಾತಿಗಳ ಮತಗಳನ್ನು ಸೆಳೆಯುವ ಅವಕಾಶ ಕುಗ್ಗುತ್ತಿದೆ ಎನ್ನುವುದರ ಸ್ಪಷ್ಟ ಸೂಚನೆಯಾಗಿದೆ. 2017ರ ಚುನಾವಣೆಯಲ್ಲಿ ಆ ವಿಭಾಗಗಳ ಮತಗಳನ್ನು ಬಿಜೆಪಿ ಸೆಳೆದಿತ್ತು.

*** ಬೊಗಳೆಗಳೂ ಲೊಳಲೊಟ್ಟೆಗಳೂ**

ಆದಿತ್ಯನಾಥರ ನಾಯಕತ್ವದಲ್ಲಿ 'ವಿಕಾಸ' ಎಂಬ ಬೊಗಳೆ, ಉದ್ಯೋಗ ಸೃಷ್ಟಿಯಾಗಿದೆ ಎಂದು ತೋರಿಸುವ ಸುಳ್ಳು ಅಂಕಿ-ಸಂಖ್ಯೆಗಳು, ಮಹಿಳೆಯರ ವಿರುದ್ಧ ಅಪರಾಧ ಪ್ರಕರಣಗಳಲ್ಲಿ ಇಳಿಕೆಯಾಗಿದ್ದು ಅವರು ಶಾಂತಿ ಹಾಗೂ ನೆಮ್ಮದಿಯಿಂದ ಬದುಕಬಹುದು ಎಂದು ಬಿಂಬಿಸುವುದು – ಈ ಎಲ್ಲ ಪ್ರಯತ್ನಗಳು ಜನರಿಂದ ನಿರೀಕ್ಷಿತ ಪ್ರತಿಕ್ರಿಯೆ ಹುಟ್ಟಿಸುವಲ್ಲಿ ವಿಫಲವಾಗಿರುವುದರಿಂದ ಬಿಜೆಪಿ ಗಲಿಬಿಲಿಗೊಂಡಿದೆ.

ಭಾರತೀಯ ಆರ್ಥಿಕತೆ ನಿಗಾ ಕೇಂದ್ರ (ಸಿಎಂಐಇ) ಬಿಡುಗಡೆ ಮಾಡಿರುವ ಅಂಕಿ-ಅಂಶದ ಪ್ರಕಾರ ಉತ್ತರ ಪ್ರದೇಶದಲ್ಲಿ ಉದ್ಯೋಗ ದರ 2016 ಡಿಸೆಂಬರ್‌ನಲ್ಲಿದ್ದ ಶೇಕಡ 38.5ರಿಂದ 2021 ಡಿಸೆಂಬರ್‌ನಲ್ಲಿ ಶೇಕಡ 32.8ಕ್ಕೆ ಕುಸಿದಿದೆ. ರೈಲ್ವೆ ನೇಮಕಾತಿ ಪರೀಕ್ಷೆಗಳನ್ನು ಪ್ರತಿಭಟಿಸಿ ಸಾವಿರಾರು ಯುವಜನರು ಬೀದಿಗಿಳಿದ ಹಾಗೂ ಅವರು ಉಳಿದುಕೊಂಡಿದ್ದ ಲಾಡ್ಜ್‌ಗಳ ಮೇಲೆ ಪೊಲೀಸರು ನಡೆಸಿದ ದಬ್ಬಾಳಿಕೆಯ ವಿಡಿಯೋ ದೃಶ್ಯಗಳು ಲಕ್ಷಾಂತರ ಉದ್ಯೋಗ ಸೃಷ್ಟಿಸಿರುವುದಾಗಿ ಹೇಳಿರುವ ಉತ್ತರ ಪ್ರದೇಶ ಸರ್ಕಾರದ ಹೇಳಿಕೆಗಳು ಬರೀ ಬೊಗಳೆ ಎನ್ನುವುದಕ್ಕೆ ಹಿಡಿದ ಕನ್ನಡಿಯಾಗಿವೆ. ಇಂಥ ಪರಿಸ್ಥಿತಿಯಲ್ಲಿ ಜಿನ್ನಾ ವಿರುದ್ಧ ವಿಷ ಕಾರುವುದು ಹಾಗೂ ಬಿಜೆಪಿ ವಿರೋಧಿಸುವ ಎಲ್ಲರನ್ನು ಜಿನ್ನಾ ಹಿಂಬಾಲಕರು ಎಂದು ಬಿಂಬಿಸುವುದು ಸುರಕ್ಷಿತ ಎಂದು ಬಿಜೆಪಿ ಭಾವಿಸಿದೆ.

*** ಗಂಗೆಯಲ್ಲಿ ತೇಲಿದ ಶವಗಳು**

ಕೋವಿಡ್ ಮಹಾ ಸೋಂಕಿನ ಎರಡನೇ ಅಲೆ ವೇಳೆ ಗಂಗಾ ನದಿಯಲ್ಲಿ ಸಾಲು ಸಾಲು ಹೆಣಗಳು ತೇಲಿ ಬಂದಿದ್ದ ಘೋರ ದೃಶ್ಯಗಳಿಗೆ ಉತ್ತರ ಪ್ರದೇಶ ಸಾಕ್ಷಿಯಾಗಿತ್ತು. ಅದಲ್ಲದೆ, ನದಿ ದಂಡೆ ಮೇಲೆ ಮರಳಿನಲ್ಲಿ ಇನ್ನೂ ನೂರಾರು ಹೆಣಗಳನ್ನು ಹೂಳಲಾಗಿತ್ತು. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಸುಧಾರಿಸಲಾಗಿದೆ ಹಾಗೂ ವಿಸ್ತರಿಸಲಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರ ಬಡಾಯಿ ಕೊಚ್ಚಿಕೊಳ್ಳುತ್ತಿದ್ದರೂ ಆದಿತ್ಯನಾಥ ಆಡಳಿತದಲ್ಲಿ 'ನಾತ' ಹರಡಿರುವುದಕ್ಕೆ ನೀತಿ ಆಯೋಗದ ಆರೋಗ್ಯ ಸೂಚ್ಯಂಕವೇ ಕನ್ನಡಿ ಹಿಡಿದಿದೆ. ನೀತಿ ಆಯೋಗದ ಆರೋಗ್ಯ ಸೂಚ್ಯಂಕದಲ್ಲಿ ಆರೋಗ್ಯ ಕಾಳಜಿ ವಿಚಾರದಲ್ಲಿ ಉತ್ತರ ಪ್ರದೇಶವು ದೊಡ್ಡ ರಾಜ್ಯಗಳ ಪೈಕಿ ತೀರಾ ಕೆಳಗಿನ ಸ್ಥಾನದಲ್ಲಿದೆ. ಬಹು-ಆಯಾಮದ ಬಡತನದ ಸೂಚ್ಯಂಕದಲ್ಲಿ ಉತ್ತರ ಪ್ರದೇಶ ಕೆಳಗಿನಿಂದ ಮೂರನೇ ರ್‍ಯಾಂಕ್‌ನಲ್ಲಿದೆ. ರಾಜ್ಯದ ಶೇಕಡ 38 ಜನರು ಬಡವರಾಗಿದ್ದಾರೆ.

ಹತಾಶೆಗೆ ಕಾರಣ


ಇಂಥ ಕಳಪೆ ದಾಖಲೆಯನ್ನು ಇಟ್ಟುಕೊಂಡು ಮೋದಿ-ಷಾ-ಆದಿತ್ಯನಾಥ ತ್ರಿಮೂರ್ತಿಗಳು ಅಯೋಧ್ಯೆಯಲ್ಲಿ ಭವ್ಯ ಮಂದಿರ, ಕಾಶಿ ವಿಶ್ವನಾಥ ಕಾರಿಡಾರ್ ಮತ್ತು ಭವಿಷ್ಯದಲ್ಲಿ ಮಥುರಾ ಮಂದಿರ ಸಹಿತ ಹಿಂದೂ ಉದ್ದೇಶಕ್ಕೆ ತಾವು ನೀಡಿದ ಕೊಡುಗೆಗಳೆಂದು ವೈಭವೀಕರಿಸುವ ಮಾರ್ಗ ಅನುಸರಿಸುತ್ತಿದ್ದಾರೆ. ಮುಸ್ಲಿಮರನ್ನು ಎಲ್ಲಿಡಬೇಕೋ ಅಲ್ಲಿಟ್ಟು ಇವನ್ನೆಲ್ಲ ಸಾಧಿಸಲಾಗಿದೆ ಎಂಬ ಗೋಪ್ಯ ಸಂದೇಶವನ್ನೂ ಅದು ಸಾರುತ್ತಿದೆ.

ಅಮಿತ್ ಷಾ ಮಾತಿನಲ್ಲೇ ಹೇಳುವುದಾದರೆ ಇದು ಬಿಜೆಪಿಗೆ ಒಂದು ವಿಧಾನಸಭೆ ಚುನಾವಣೆ ಅಷ್ಟೇ ಅಲ್ಲ; ಭಾರತದ ಭವಿಷ್ಯವನ್ನು ನಿರ್ಧರಿಸುವ ವಿದ್ಯಮಾನವಾಗಿದೆ. ಹಿಂದುತ್ವದ ಭವಿಷ್ಯದ ವಿಚಾರವೇ ಅದರಲ್ಲಿ ಒಳಗೊಂಡಿರುವುದರಿಂದ ಬಿಜೆಪಿ ಇದನ್ನು ಬಹಳ ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಂಡಿದೆ. ಅದುವೇ ಬಿಜೆಪಿ ನಾಯಕತ್ವದ ಹತಾಶೆಯನ್ನು ವಿವರಿಸುತ್ತದೆ.

ಅನು: ವಿಶ್ವ



ಜನಸಾಮಾನ್ಯರಿಗೆ 20% ಮಾಧ್ಯಮಗಳಿಗೆ 80%
ವಾಹ್!ಯೋಗೀಜೀ! ವಾಹ್!
ವ್ಯಂಗ್ಯಚಿತ್ರ: ಸತೀಶ ಆಚಾರ್ಯ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ



2022-23 ರ ಬಜೆಟ್ ಸಾಮಾನ್ಯ ಜನರಿಗೆ ಪರಿಹಾರವನ್ನು ಒದಗಿಸುವ ಆದ್ಯತೆಗಳನ್ನು ಗುರುತಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇದೊಂದು ವಿಶ್ವಾಸದ್ರೋಹ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಜನವಿರೋಧಿ ಕಾರ್ಪೊರೇಟ್–ಪರ ಬಜೆಟ್ ವಿರುದ್ಧ ಪ್ರತಿಭಟಿಸುವಂತೆ ಮತ್ತು ಆದಾಯ ತೆರಿಗೆ ವ್ಯಾಪ್ತಿಯ ಹೊರಗಿನ ಎಲ್ಲಾ ಕುಟುಂಬಗಳಿಗೆ ಮಾಸಿಕ 7,500 ನೇರ ನಗದು ವರ್ಗಾವಣೆ ಗೆ ಹಾಗೂ ಉಚಿತ ಆಹಾರ ಕಿಟ್‌ಗಳ ವಿತರಣೆಗೆ ಆಗ್ರಹಿಸಬೇಕು ಎಂದು ಕರೆ ನೀಡಿದೆ. ಈ ಬಜೆಟ್ ಕುರಿತಂತೆ ಸಿಪಿಐ(ಎಂ) ವಿಶ್ಲೇಷಣೆ ಮತ್ತು ದುಡಿಯುವ ಜನಗಳ ಸಂಘಟನೆಗಳ ಪ್ರತಿಕ್ರಿಯೆಗಳು, ಪರಿಣಿತರ ಲೇಖನಗಳು ಇಲ್ಲಿ ಮತ್ತು ಮುಂದಿನ ಪುಟಗಳಲ್ಲಿ ....

ಬಜೆಟ್ 2022-23: ಜನರ ಹಿತಾಸಕ್ತಿಗಳಿಗೆ ವಿಶ್ವಾಸದ್ರೋಹ

ಬಹುಪಾಲು ಜನರು ಉದ್ಯೋಗ ನಷ್ಟ ಮತ್ತು ನಿಜ ಆದಾಯದಲ್ಲಿ ಭಾರಿ ಕಡಿತವನ್ನು ಎದುರಿಸುತ್ತಿರುವ ಆರ್ಥಿಕ ಸನ್ನಿವೇಶದ ಹಿನ್ನೆಲೆಯಲ್ಲಿ ಹಣಕಾಸು ಸಚಿವರು 2022 ರ ಬಜೆಟ್ ಅನ್ನು ಮಂಡಿಸಿದರು. ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿಯು ಮಹಾಸೋಕಿನ ಪೂರ್ವದ ಮಟ್ಟವನ್ನು ತುಸುಮಟ್ಟಿಗೆ ದಾಟುತ್ತದೆ ಎಂದು ಅಂದಾಜಿಸಲಾಗಿದೆ. ಖಾಸಗಿ ಬಳಕೆಯ ವೆಚ್ಚವು ಈಗಲೂ ಮಹಾಸೋಂಕಿನ ಪೂರ್ವದ ಮಟ್ಟಕ್ಕಿಂತ ಇನ್ನೂ ಕಡಿಮೆಯೇ ಇದೆ. ಮತ್ತು ಕೈಗಾರಿಕೆಗಳು ತಮ್ಮ ಉತ್ಪಾದನಾ ಸಾಮರ್ಥ್ಯದ ಪೂರ್ಣಬಳಕೆ ಮಾಡಲಾಗದಿರುವ, ದಾಸ್ತಾನುಗಳೇ ಹೆಚ್ಚುತ್ತಿರುವ ಪರಿಸ್ತಿತಿಯುನ್ನು ಎದುರಿಸುತ್ತಿವೆ, ಮುಖ್ಯವಾಗಿ ಅರ್ಥವ್ಯವಸ್ಥೆಯಲ್ಲಿ ಸಾಕಷ್ಟು ಬೇಡಿಕೆಯಿಲ್ಲ. ಇಂತಹ ಸನ್ನಿವೇಶದಲ್ಲಿ ಬಜೆಟ್‌ನಲ್ಲಿ ಅಗತ್ಯವಿದ್ದದ್ದು ಉದ್ಯೋಗ ಸೃಷ್ಟಿ ಮತ್ತು ಆಂತರಿಕ ಬೇಡಿಕೆಯನ್ನು ಹೆಚ್ಚಿಸುವತ್ತ ಒಂದು ದೊಡ್ಡ ಒತ್ತು. ಈ ಪ್ರಶ್ನೆಗಳನ್ನು ಪರಿಹರಿಸುವಲ್ಲಿ ಬಜೆಟ್ ಸಂಪೂರ್ಣ ವಿಫಲವಾಗಿದೆ. ನಗರ ಉದ್ಯೋಗ ಖಾತ್ರಿ ಯೋಜನೆಯೊಂದನ್ನು ತರಬೇಕಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ, ಮನರೇಗ ಸ್ಕೀಮಿಗೆ 25,000 ಕೋಟಿ ರೂ.ಗಳ ವೆಚ್ಚವನ್ನು ಕಡಿತ ಮಾಡಲಾಗಿದೆ ಮತ್ತು ಆಹಾರ, ಇಂಧನ ಮತ್ತು ರಸಗೊಬ್ಬರ ಸಬ್ಸಿಡಿಗಳನ್ನು ಕಡಿತಗೊಳಿಸಲಾಗಿದೆ, ಆರೋಗ್ಯ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹಂಚಿಕೆಗಳಲ್ಲಿಯೂ ಕಡಿತವಾಗಿದೆ.

ಒಟ್ಟು ಬಜೆಟ್ ವೆಚ್ಚದಲ್ಲಿ ರೂ. 2021–22 ರ ಪರಿಷ್ಕೃತ ಅಂದಾಜಿಗಿಂತ 1,74,909 ಕೋಟಿ ರೂ.ಗಳಷ್ಟು ಹೆಚ್ಚಳದ ಪ್ರಸ್ತಾಪವಿದೆ. ಆದರೆ ಜಿಡಿಪಿ ಯ ಶೇಕಡಾವಾರಾಗಿ ಒಟ್ಟು ವೆಚ್ಚವು 2020–21 ರಲ್ಲಿ 17.8 ಶೇಕಡಾ ಇದ್ದದ್ದು 2022–23 ರ ಬಜೆಟ್ ಅಂದಾಜಿನಲ್ಲಿ ಶೇಕಡಾ 15.3 ಕ್ಕೆ ಇಳಿದಿದೆ. ಮಹಾಸೋಂಕಿನ ಸಮಯದಲ್ಲಿ ಮುಖ್ಯವಾಗಿ ಕಾರ್ಪೊರೇಟ್‌ಗಳು ಲಾಭಗಳನ್ನು ಕಲೆಹಾಕಲು ಸಾಧ್ಯವಾಗಿರುವುದರಿಂದಾಗಿ ರೆವಿನ್ಯೂ ಆದಾಯ ಬೆಳೆದಿದೆ, ಹೆಚ್ಚಿನ ಕಾರ್ಪೊರೇಟ್ ತೆರಿಗೆ ಸಂಗ್ರಹ ಮತ್ತು ಜಿಎಸ್‌ಟಿ, ಪೆಟ್ರೋಲಿಯಂ ಬೆಲೆಗಳ ಹೆಚ್ಚಳ ಮತ್ತು ಸಾಮಾನ್ಯ ಜನರ ಮೇಲೆ ವಿಧಿಸಲಾದ ಪರೋಕ್ಷ ತೆರಿಗೆಗಳ ಮೂಲಕ ಗಳಿಕೆ ಹೆಚ್ಚಿದೆ. ಆದಾಗ್ಯೂ ವೆಚ್ಚದ ಬೆಳವಣಿಗೆಯು ಆದಾಯದ ಸ್ವೀಕೃತಿಗಳ ಬೆಳವಣಿಗೆಗಿಂತ ತೀರಾ ಕಡಿಮೆಯಾಗಿದೆ ಮತ್ತು ನಿಜಮೌಲ್ಯದಲ್ಲಿ ಕಳೆದ ವರ್ಷದ ಪರಿಷ್ಕೃತ ಅಂದಾಜಿಗಿಂತಲೂ ಕಡಿಮೆಯಾಗಿದೆ.


ಹಿಂಡಿರುವುದು ಕೇವಲ ಕೇಂದ್ರ ಸರ್ಕಾರದ ವೆಚ್ಚಗಳನ್ನಷ್ಟೇ ಅಲ್ಲ. ರಾಜ್ಯಗಳಿಗೆ ಸಂಪನ್ಮೂಲಗಳ ವರ್ಗಾವಣೆಯನ್ನು ಕೂಡ ಹಿಸುಕುವ ಮೂಲಕ, ರಾಜ್ಯ ಸರ್ಕಾರಗಳನ್ನು ಸಹ ಅದೇ ರೀತಿ ಮಾಡಲು ಒತ್ತಾಯಿಸಲಾಗುತ್ತಿದೆ. ಈ ವರ್ಗಾವಣೆಗಳು 2021–22 ರ ಪರಿಷ್ಕೃತ ಅಂದಾಜಿನಲ್ಲಿ ಜಿಡಿಪಿಯ 6.91% ಇದ್ದರೆ, 2022–23 ರ ಬಜೆಟಿನಲ್ಲಿ 6.25%ಕ್ಕೆ ಇಳಿಯುತ್ತವೆ.

ರೈತರಿಗಾಗಿ ಎಲ್ಲಾ ಪ್ರಮುಖ ಯೋಜನೆಗಳಿಗೆ ಬಜೆಟ್‌ಹಂಚಿಕೆಗಳಲ್ಲಿ ಕಡಿತ ಕಂಡುಬಂದಿದೆ. ರೈತರು ಕಾನೂನುಬದ್ಧವಾಗಿ ಖಾತರಿಪಡಿಸಿದ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಗಾಗಿ ಹೆಣಗಾಡುತ್ತಿರುವ ಸಮಯದಲ್ಲಿ ಎಫ್‌ಸಿಐಗೆ ಮತ್ತು ವಿಕೇಂದ್ರೀಕರಣದ ಖರೀದಿ ಯೋಜನೆಯಡಿಯಲ್ಲಿ ಸಂಗ್ರಹಣೆಗಾಗಿ ಹಣಹಂಚಿಕೆಯನ್ನು ಸುಮಾರು 28%ದಷ್ಟು ಕಡಿಮೆ ಮಾಡಲಾಗಿದೆ. ರಸಗೊಬ್ಬರ ಸಬ್ಸಿಡಿಗೆ ಹಣ ಹಂಚಿಕೆಯಲ್ಲಿ ಶೇ.25ರಷ್ಟು ಕಡಿತ ಮಾಡಲಾಗಿದೆ. ಪಿಎಂ–ಕಿಸಾನ್ ಅಡಿಯಲ್ಲಿ, 12.5 ಕೋಟಿ ರೈತ ಕುಟುಂಬಗಳಿಗೆ ರೂ. ತಲಾ 6000 ರೂ.ಗಳನ್ನು ಕೊಡಲು 75000 ಕೋಟ ಬೇಕು. ಆದರೆ ಕೊಟ್ಟಿರುವುದು ಕೇವಲ ರೂ. 68000 ಕೋಟಿ. ಫಸಲ್ ಭೀಮಾ ಯೋಜನೆಗೆ ಹಂಚಿಕೆಯೂ ಸುಮಾರು 500 ಕೋಟಿಗಳಷ್ಟು ಇಳಿದಿದೆ.

ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ಮಕ್ಕಳ ಕಲ್ಯಾಣಕ್ಕೆ ಮೀಸಲಿಟ್ಟ ಅಲ್ಪಸ್ವಲ್ಪ ಹಣವನ್ನೂ ಖರ್ಚು ಮಾಡಿಲ್ಲ. ಮಕ್ಕಳ ಕಲ್ಯಾಣ ವೆಚ್ಚದ ಪರಿಷ್ಕೃತ ಅಂದಾಜು ರೂ. ಬಜೆಟ್ ಅಂದಾಜಿಗಿಂತ 5700 ಕೋಟಿ ಕಡಿಮೆಯಾಗಿದೆ. ಶಾಲೆಗಳು ಮತ್ತು ಅಂಗನವಾಡಿಗಳ ಮುಚ್ಚುವಿಕೆಯ ವಿನಾಶಕಾರಿ ಪರಿಣಾಮವನ್ನು ನಿಭಾಯಿಸಲು ಮಕ್ಕಳಿಗೆ ಸಹಾಯ ಮಾಡಲು ಏನನ್ನೂ ಮಾಡಲಾಗಿಲ್ಲ.

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣಕ್ಕಾಗಿ ನಿಧಿಗಳ ಹಂಚಿಕೆಯು ಅಂಕಿಅಂಶಗಳಲ್ಲಿ ಪುಟ 11 ನೋಡಿ

- # ಉದ್ಯೋಗ ಸೃಷ್ಟಿ ಮತ್ತು ಆಂತರಿಕ ಬೇಡಿಕೆಯನ್ನು ಹೆಚ್ಚಿಸುವತ್ತ ಒಂದು ದೊಡ್ಡ ಒತ್ತು ನೀಡುವ ಬದಲು ಮನರೇಗ ಸ್ಕೀಮಿಗೆ 25,000 ಕೋಟಿ ರೂ.ಗಳ ಕಡಿತ ಮಾಡಲಾಗಿದೆ ; ಆಹಾರ, ಇಂಧನ ಮತ್ತು ರಸಗೊಬ್ಬರ ಸಬ್ಸಿಡಿಗಳನ್ನು ಕಡಿತಗೊಳಿಸಲಾಗಿದೆ; ಆರೋಗ್ಯ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹಂಚಿಕೆಗಳಲ್ಲಿಯೂ ಕಡಿತವಾಗಿದೆ.
- # ನೇರ, ಪರೋಕ್ಷ ತೆರಿಗೆಗಳಿಂದ ಆದಾಯಗಳನ್ನು ಹೆಚ್ಚಿಸಿಕೊಂಡರೂ, ಜಿಡಿಪಿ ಯ ಶೇಕಡಾವಾರಾಗಿ ಒಟ್ಟು ಬಜೆಟ್ ವೆಚ್ಚವು 2020-21 ರಲ್ಲಿ 17.8 ಶೇಕಡಾ ಇದ್ದದ್ದು 2022-23 ರ ಬಜೆಟ್ ಅಂದಾಜಿನಲ್ಲಿ ಶೇಕಡಾ 15.3 ಕ್ಕೆ ಇಳಿದಿದೆ.
- # ರಾಜ್ಯ ಸರಕಾರಗಳಿಗೆ ವರ್ಗಾವಣೆಗಳು 2021-22 ರ ಪರಿಷ್ಕೃತ ಅಂದಾಜಿನಲ್ಲಿ ಜಿಡಿಪಿಯ 6.91% ಇದ್ದರೆ, 2022-23 ರ ಬಜೆಟಿನಲ್ಲಿ 6.25%ಕ್ಕೆ ಇಳಿಯುತ್ತವೆ.
- # ರೈತರಿಗಾಗಿ ಇರುವ ಎಲ್ಲಾ ಪ್ರಮುಖ ಯೋಜನೆಗಳಿಗೆ ಬಜೆಟ್ ಹಂಚಿಕೆಗಳಲ್ಲಿ ಕಡಿತ ಕಂಡುಬಂದಿದೆ.
- # ಎಲ್‌ಪಿಜಿ ಸಬ್ಸಿಡಿಯಲ್ಲಿ ಕಳೆದ ವರ್ಷದ 60% ಕಡಿತದ ನಂತರ 2022-23 ರ ಬಜೆಟ್‌ನಲ್ಲಿ ಮತ್ತೆ ಶೇಕಡಾ 60 ರಷ್ಟು ಕಡಿತವನ್ನು ವಿಧಿಸಲಾಗಿದೆ.
- # ಸೂಪರ್ ಶ್ರೀಮಂತರ ಮೇಲೆ ತೆರಿಗೆ ವಿಧಿಸುವ ಮತ್ತು ಈ ಸಂಪನ್ಮೂಲಗಳನ್ನು ಬಹುಪಾಲು ಬಳಲುತ್ತಿರುವ ಜನರಿಗೆ ಪರಿಹಾರವನ್ನು ಒದಗಿಸಲು ಬಳಸುವ ಯಾವುದೇ ಪ್ರಸ್ತಾಪವಿಲ್ಲ.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ಪ್ರಜಾವಾಣಿ

ರೈತರ ಪ್ರತಿಭಟನೆಗೆ ಮೋದಿ ಸರ್ಕಾರದ ಪ್ರತೀಕಾರ–ಎಐಕೆಎಸ್

ರೈತರ ನೈಜ ಅಗತ್ಯಗಳಿಗೆ ಸಂವೇದನಾಶೂನ್ಯವಾಗಿರುವ ಬಜೆಟ್

ಬಜೆಟ್ ರೈತರ ನೈಜ ಬೇಡಿಕೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ, ಇದು ರೈತರ ಯಶಸ್ವಿ ಐಕ್ಯ ಚಳವಳಿಯ ಮೇಲಿನ ಸೇಡಿನ ಕ್ರಮದಂತೆ ತೋರುತ್ತದೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ತೀವ್ರ ಖೇದವನ್ನು ವ್ಯಕ್ತಪಡಿಸಿದೆ. ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಯಾವುದೇ ಪರಿಹಾರ ಘೋಷಿಸಿಲ್ಲ. ಫಲದಾಯಕ ಬೆಲೆಯಲ್ಲಿ ಖಚಿತವಾದ ಖರೀದಿ ಮತ್ತು ಸಾಲ ಮನ್ನಾಕ್ಕಾಗಿ ರೈತರ ಬೇಡಿಕೆಗಳನ್ನು ತುಚ್ಛವಾಗಿ ಕಾಣಲಾಗಿದೆ. 2021–22ರ ಪರಿಷ್ಕೃತ ಅಂದಾಜುಗಳಲ್ಲಿ ಕೃಷಿಗೆ ಒಟ್ಟು ಹಂಚಿಕೆ ರೂ.474750.47 ಕೋಟಿಗಳಷ್ಟಿತ್ತು . ಈಗ ಅದು ರೂ.3,70,303 ಕೋಟಿಗಳಿಗೆ ಕುಸಿದಿದೆ; ಅಂದರೆ 1 ಲಕ್ಷ ಕೋಟಿಗೂ ಹೆಚ್ಚು ಕುಸಿತ. ಬಜೆಟ್‌ನಲ್ಲಿ ಗ್ರಾಮೀಣಾಭಿವೃದ್ಧಿಯ ಪಾಲು ಕೂಡ ಶೇ.5.59ರಿಂದ ಶೇ.5.23ಕ್ಕೆ ಕುಸಿದಿದೆ. ಇದರಿಂದಾಗಿ ಧಾನ್ಯ ಸಂಗ್ರಹಣೆ, ಮನರೇಗ, ಬೆಳೆ ವಿಮೆ, ಆಹಾರ ಮತ್ತು ರಸಗೊಬ್ಬರ ಸಬ್ಸಿಡಿಗಳಿಗೆ ಹಂಚಿಕೆಗಳಲ್ಲೂ ಕಡಿತವನ್ನು ಉಂಟು ಮಾಡಿದೆ ಎಂಬ ಸಂಗತಿಯತ್ತ ಎಐಕೆಎಸ್ ಗಮನ ಸೆಳೆದಿದೆ.

2022–23ರಲ್ಲಿ ಭತ್ತ ಮತ್ತು ಗೋಧಿ ಖರೀದಿಗೆ 2.37 ಲಕ್ಷ ಕೋಟಿ ಮೀಸಲಿಡಲಾಗಿದೆ ಎಂದೊಂದು ಅಬ್ಬರವನ್ನು ಸೃಷ್ಟಿಸಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಯತ್ನಿಸಿದ್ದಾರೆ. ವಾಸ್ತವವಾಗಿ ಇದು ಕಳೆದ ವರ್ಷ ಮಾಡಿದ 2.48 ಲಕ್ಷ ಕೋಟಿ ಹಂಚಿಕೆಗಿಂತ ಕಡಿಮೆಯಾಗಿದೆ ಮತ್ತು ಫಲಾನುಭವಿಗಳ ಸಂಖ್ಯೆ ಕೂಡ ಸಹ ಕಳೆದ ವರ್ಷ 1.97 ಕೋಟಿ ಆಗಿದ್ದದ್ದು, ಈ ವರ್ಷ 1.63 ಕೋಟಿಗೆ ತೀವ್ರ ಇಳಿಕೆ ಕಾಣುತ್ತದೆ. ಖರೀದಿಯನ್ನು ಎಲ್ಲಾ ಬೆಳೆಗಳಿಗೆ ವಿಸ್ತರಿಸಬೇಕು ಮತ್ತು ವ್ಯಾಪ್ತಿಯನ್ನು ವಿಸ್ತರಿಸಬೇಕೆಂದು ರೈತರು ಒತ್ತಾಯಿಸುತ್ತಿರುವಾಗ 34 ಲಕ್ಷ ರೈತರನ್ನು ಹೊರಗಿಡಲಾಗಿದೆ. ಎಫ್‌ಸಿಐಗೆ ಮತ್ತು ವಿಕೇಂದ್ರೀಕೃತ ಖರೀದಿ ಯೋಜನೆಯಡಿಯಲ್ಲಿ ಸಂಗ್ರಹಣೆಗಾಗಿ ಹಂಚಿಕೆಯನ್ನು ವಾಸ್ತವವಾಗಿ 28% ದಷ್ಟು ಕಡಿಮೆ ಮಾಡಲಾಗಿದೆ. ಹಂಚಿಕೆಯಲ್ಲಿನ ಕಡಿತ ಮತ್ತು ಹಣದುಬ್ಬರ ಒಟ್ಟಾರೆಯಾಗಿ 2022–23ರಲ್ಲಿ ಸಂಗ್ರಹಣೆಯಲ್ಲಿ ಗಮನಾರ್ಹ ಇಳಿಕೆಗೆ ಕಾರಣವಾಗುತ್ತದೆ. ರಸಗೊಬ್ಬರ ಸಬ್ಸಿಡಿ ಹಣ ಪುಟ 11 ನೋಡಿ

ದುಡಿಯುವ ಜನಗಳ ಸಂಕಟಗಳಿಗೆ ಸ್ಪಂದಿಸದ ರಾಷ್ಟ್ರೀಯ ಅರ್ಥವ್ಯವಸ್ಥೆಗೆ ವಿನಾಶಕಾರಿಯಾದ ಬಜೆಟ್–ಸಿಐಟಿಯು

ಹೂರಣವಿಲ್ಲದೆ ಭಾರೀ ಸದ್ದೇ ತುಂಬಿರುವ 2022–23ರ ಬಜೆಟನ್ನು ಮಂಡಿಸಲಾಗಿದೆ ಎಂದು ಸಿಐಟಿಯು ಅದನ್ನು ಕಟುವಾಗಿ ಟೀಕಿಸಿದೆ. ಅದರ ಹಿಂದಿನ ದಿನ ಮಂಡಿಸಲಾದ ಆರ್ಥಿಕ ಸಮೀಕ್ಷೆಯ ಮುಂದುವರಿದ ಭಾಗವಾಗಿ ಬಜೆಟ್ ಸಹ ಅದರ ಕ್ರೂರ ಸಂವೇದನಾಹೀನತೆಯನ್ನು ಬಿಂಬಿಸಿದೆ. ಒಂದೆಡೆಯಲ್ಲಿ, ಸರಕಾರದ ಧೋರಣೆಗಳಿಂದಾಗಿ ನಡೆದಿರುವ ಬೆಲೆಯೇರಿಕೆಗಳ ನಡುವೆ ಜೀವನೋಪಾಯಗಳಲ್ಲಿ ದೊಡ್ಡ ನಷ್ಟ, ಗಳಿಕೆಯಲ್ಲಿ ನಷ್ಟ, ಆಳವಾದ ಬಡತನ ಮತ್ತು ತೀವ್ರತರವಾದ ಹಸಿವಿನಿಂದ ಜನಸಾಮಾನ್ಯರು ನರಳುತ್ತಿದ್ದರೆ, ಇನ್ನೊಂದು ಕಡೆ ಬೆರಳೆಣಿಕೆಯಷ್ಟು ದೊಡ್ಡ ಕಾರ್ಪೊರೇಟ್ ವರ್ಗಗಳು ಬೃಹತ್ ಸಂಪತ್ತನ್ನು ಗಳಿಸುತ್ತಿದ್ದಾರೆ. ಆ ಮೂಲಕ ಯಾವುದೇ ನಾಗರಿಕ ಸಮಾಜದಲ್ಲಿ ಒಪ್ಪಲಾರದ ಅತ್ಯಂತ ಅಶ್ಲೀಲ ಅಸಮಾನತೆಯ ಸನ್ನಿವೇಶದಲ್ಲಿ ಹಣಕಾಸು ಸಚಿವರು ತಮ್ಮ ಭಾಷಣದಲ್ಲಿ "ಒಳಗೊಳ್ಳುವ ಬೆಳವಣಿಗೆ", "ಆರ್ಥಿಕ ಸೇರ್ಪಡೆ" ಮುಂತಾದ ಪದಗಳನ್ನು ಹಲವಾರು ಬಾರಿ ಉಚ್ಛರಿಸಿದರೂ, ಇದು ಬಿಜೆಪಿ ಸರ್ಕಾರದ ನಾಚಿಕೆಯಿಲ್ಲದ ಬೂಟಾಟಿಕೆಯನ್ನು ಪ್ರದರ್ಶಿಸುತ್ತದೆಯೇ ಹೊರತು, ಬೇರೇನೂ ಅಲ್ಲ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಹೇಳಿದ್ದಾರೆ.

ಮಹಾಸೋಂಕಿನ ಸಮಯದಲ್ಲಿ ದುಡಿಯುವ ಜನರು ಜೀವನೋಪಾಯ ಮತ್ತು ಗಳಿಕೆಯ ನಷ್ಟದ ರೂಪದಲ್ಲಿ ಮತ್ತು ಉದ್ಯೋಗದ ವ್ಯಾಪಕ ಮತ್ತು ತೀವ್ರ ಅನೌಪಚಾರಿಕೀಕರಣದ ರೂಪದಲ್ಲಿ ಎದುರಿಸುತ್ತಿರುವ ಸಂಕಟಗಳ ಬಗ್ಗೆ ಬಜೆಟ್ ತಲೆಕೆಡಿಸಿಕೊಂಡಿಲ್ಲ. ಎಲ್ಲರಿಗೂ ಪರಿಹಾರಗಳು ಮತ್ತು ಸಾಮಾಜಿಕ ಭದ್ರತೆಯ ವಿಸ್ತರಣೆ ಮಾಡಬೇಕೆಂದು ಮತ್ತೆ–ಮತ್ತೆ ಆಗ್ರಹಿಸುತ್ತಿದ್ದರೂ, ರಾಷ್ಟ್ರದ ಸಂಪತ್ತನ್ನು ಸೃಷ್ಟಿಸುವ ದುಡಿಯುವ ಜನರಿಗೆ ಅದನ್ನು ನಿರಾಕರಿಸುವ ನಿಲುವನ್ನೇ ಬಜೆಟ್ ಪ್ರದರ್ಶಿಸುವ ಜೊತೆಗೇ ಪರೋಕ್ಷ ತೆರಿಗೆಗಳ ಹೊರೆಯನ್ನು ಹೆಚ್ಚಿಸುವ ಮೂಲಕ ಸರ್ಕಾರವು ದುಡಿಯುವ ಜನರನ್ನು ಕ್ರೂರವಾಗಿ ಹಿಂಡುತ್ತಿದೆ.

ಇನ್ನೊಂದೆಡೆಯಲ್ಲಿ, ಸರಕಾರ ತನ್ನ ಕಾರ್ಪೊರೇಟ್ ಯಜಮಾನರುಗಳಿಗೆ ಪುಟ 15 ನೋಡಿ

ಉತ್ತರ ಪ್ರದೇಶದಲ್ಲಿ ಏನಾಗುತ್ತಿದೆ?



ಬಿಜೆಪಿ ಸರಕಾರ ಉತ್ತಮ ಆಡಳಿತ ನೀಡಿದೆ, ಎಲ್ಲ ಆಶ್ವಾಸನೆಗಳನ್ನು ಪೂರೈಸಿದೆ. ಇನ್ನೂ ಸಮಸ್ಯೆಗಳಿದ್ದರೆ ಹಿಂದಿನ ವಿರೋಧ ಪಕ್ಷಗಳ ದುರಾಡಳಿತದ ಫಲ. ಅವನ್ನು ಮುಂದೆ ಸರಿಪಡಿಸಲಾಗುವುದು ಎಂದು ಜನತೆಯನ್ನು ನಂಬಿಸುವುದು ಯೋಗಿ–ಮೋದಿ–ಶಾ ತ್ರಿವಳಿ ಗಳಿಗೆ ಕಷ್ಟವಾಗುತ್ತಿದೆ. ಅದರ ಸಾಮಾಜಿಕ ಇಂಜಿನೀಯರಿಂಗ್ ತಿರುಗುಬಾಣ ಆಗುತ್ತಿದೆ. ಬಿಜೆಪಿಯ ದುರಾಡಳಿತದ ವೈಫಲ್ಯ ಮತ್ತು ಸಾಮಾಜಿಕ ಇಂಜಿನೀಯರಿಂಗ್ ಬಯಲು ಮಾಡುವುದರಲ್ಲೂ, ತನ್ನದೇ ಸಾಮಾಜಿಕ ಇಂಜಿನೀಯರಿಂಗ್ ಆಧಾರಿತ ರಾಜಕೀಯ ಮೈತ್ರಿಕೂಟ ಕಟ್ಟುವುದರಲ್ಲೂ ಎಸ್,ಪಿ ಅದಕ್ಕೆ ಪ್ರಬಲ ಸವಾಲೆಸೆದು ನೇರ ಮತ್ತು ಪ್ರಮುಖ ಸ್ಪರ್ಧಿಯಾಗಿದೆ. ಎಸ್.ಪಿ. ಗೆ ಭಾರೀ ಬಹುಮತ ಬಾರದಿದ್ದರೆ ಬಿಜೆಪಿಯನ್ನು ಸರಕಾರದಿಂದ ಉರುಳಿಸುವುದು ಸುಲಭವಾಗಲಿಕ್ಕಿಲ್ಲ. ಆದರೆ 'ಐಡೆಂಟಿಟಿ ರಾಜಕೀಯ'ದ ಸೀಮಿತತೆ ಬಯಲಾಗುವುದು ಅಥವಾ ಅದು ದುರ್ಬಲವಂತೂ ಆಗುವುದು ಮತ್ತು ಸಾಮಾಜಿಕ ಆರ್ಥಿಕ ವಿಷಯಗಳು ಮುನ್ನೆಲೆಗೆ ಬರುವ ಸೂಚನೆಯನ್ನು ಯುಪಿ ಚುನಾವಣೆ ಕೊಟ್ಟರೆ, ಅದೂ ರಾಷ್ಟ್ರೀಯ ರಾಜಕಾರಣವನ್ನು ಸಕಾರಾತ್ಮಕ ದಿಕ್ಕಿನಲ್ಲಿ ಬದಲಾಯಿಸುವ ಸಾಧ್ಯತೆಯಂತೂ ಇದೆ.

ವಸಂತರಾಜ ಎನ್.ಕೆ.

ಸುಮಾರು ಒಂದು ತಿಂಗಳ ಕಾಲ (ಫೆ.10–ಮಾ.7) 403 ಸ್ಥಾನಗಳಿಗೆ ನಡೆಯಲಿರುವ ಏಳು ಸುತ್ತಿನ ವಿಧಾನಸಭೆ ಚುನಾವಣೆಗಳಲ್ಲಿ ಮೊದಲ ಸುತ್ತು ಇನ್ನೇನು (ಫೆ.10) ಆರಂಭವಾಗಲಿದೆ. ಪಶ್ಚಿಮ ಭಾಗದಿಂದ ಆರಂಭವಾಗಿ ಪ್ರತಿ ಸುತ್ತಿನಲ್ಲಿ 55–60 ಸೀಟುಗಳಿಗೆ ಚುನಾವಣೆ ನಡೆಯಲಿದೆ. ದೇಶದ ಅತಿ ದೊಡ್ಡ ರಾಜ್ಯವಾಗಿ ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಗಳು ಯಾವತ್ತೂ ರಾಷ್ಟ್ರೀಯ ಪ್ರಾಮುಖ್ಯತೆ ಪಡೆದಿದ್ದವು. ಉತ್ತರ ಪ್ರದೇಶದ ರಾಜಕಾರಣದಲ್ಲಿ ಬರುವ ಬದಲಾವಣೆಗಳು ರಾಷ್ಟ್ರೀಯ ರಾಜಕಾರಣದಲ್ಲಿ ಬದಲಾವಣೆಗಳಿಗೆ ಹೆಚ್ಚಾಗಿ ಪೂರ್ವಸೂಚಿಯಾಗಿರುತ್ತವೆ. 2017ರಲ್ಲಿ ಉತ್ತರ ಪ್ರದೇಶದಲ್ಲಿ ಬಿಜೆಪಿಯ ನಿಚ್ಚಳ ಮತ್ತು ಅಗಾಧ ಬಹುಮತದೊಂದಿಗೆ ವಿಜಯ 2019ರ ಲೋಕಸಭಾ ಚುನಾವಣೆಯಲ್ಲಿ ಅದರ ಅಗಾಧ ವಿಜಯದ ಪೂರ್ವಸೂಚಿಯಾಗಿತ್ತು. ಈಗಲೂ 2024ರ ಲೋಕಸಭಾ ಚುನಾವಣೆಯ ಪೂರ್ವಸೂಚಿಯಾಗಿಯೇ ಇಡೀ ದೇಶದಲ್ಲಿ ಕುತೂಹಲ ಮೂಡಿಸಿದೆ.

ಹಿಂದುತ್ವ ವರ್ಸಸ್ ಸಾಮಾಜಿಕ ನ್ಯಾಯ?

1980 ರ ದಶಕದ ಕೊನೆಯ ವರ್ಷಗಳ ನಂತರ 'ಮಂಡಲ' ಮತ್ತು 'ಕಮಂಡಲ' ರಾಜಕಾರಣದ ನಡುವೆ ಉತ್ತರ ಪ್ರದೇಶ ಓಲಾಡುತ್ತಿದೆ. ಸಾಮಾಜಿಕ ನ್ಯಾಯ ಮತ್ತು ಕೋಮುವಾದಿ ರಾಜಕಾರಣಗಳ ನಡುವೆ ಹಣಾಹಣಿ ನಡೆಯುತ್ತಿದೆ. ಎಸ್.ಪಿ, ಬಿ.ಎಸ್.ಪಿ ಮತ್ತಿತರ ಹಲವು ಸಣ್ಣ ಪಕ್ಷಗಳು ಸಾಮಾಜಿಕ ನ್ಯಾಯಕ್ಕಾಗಿ ಹಿಂದುಳಿದ/ದಲಿತ ಜಾತಿಗಳ ಆಕ್ರೋಶವನ್ನು ಪ್ರತಿನಿಧಿಸುತ್ತವೆ. ಎಸ್.ಪಿ, ಎಲ್ಲ ಒಬಿಸಿ (ಹಿಂದುಳಿದ) ಜಾತಿಗಳ ಪಕ್ಷವಾಗಿ ಹೊಮ್ಮಲು ಪ್ರಯತ್ನಿಸಿತ್ತು. ಕೆಲ ಕಾಲ ಆಗಿತ್ತು ಕೂಡಾ. ಅದೇ ರೀತಿ ಬಿ.ಎಸ್.ಪಿ ಎಲ್ಲ ಪರಿಶಿಷ್ಟ (ದಲಿತ) ಜಾತಿಗಳ ಪಕ್ಷವಾಗಿ ಹೊಮ್ಮಲು ಪ್ರಯತ್ನಿಸಿತ್ತು. ಕೆಲ ಕಾಲ ಆಗಿತ್ತು ಕೂಡಾ. ಬಿಜೆಪಿ ಕೋಮುವಾದಿ ಆಧಾರದ ಮೇಲೆ ಇಡೀ 'ಹಿಂದೂ ಸಮಾಜ'ವನ್ನು ಪ್ರತಿನಿಧಿಸಲು ಪ್ರಯತ್ನಿಸುತ್ತಿತ್ತು. ಇನ್ನೂ ಪ್ರಯತ್ನಿಸುತ್ತಿದೆ, ಕಾಂಗ್ರೆಸ್ ಬಹು–ಜಾತಿ ಬಹು–ಧರ್ಮೀಯ ರಾಷ್ಟ್ರೀಯ ಪಕ್ಷವಾಗಿ ತನ್ನನ್ನು ಪ್ರಸ್ತುತ ಪಡಿಸಲು ಪ್ರಯತ್ನಿಸುತ್ತಿತ್ತು. ಇನ್ನೂ ಪ್ರಯತ್ನಿಸುತ್ತಿದೆ ಎಂದು ರಾಜಕೀಯ ವೀಕ್ಷಕರು ಸಾಮಾನ್ಯವಾಗಿ ಹೇಳುತ್ತಾರೆ.

ಇವು ಈ ಪಕ್ಷಗಳ ಆಶಯ–ತೋರಿಕೆಗಳಷ್ಟೇ. ಈ ಪಕ್ಷಗಳ ನಿಜವಾದ ನೆಲೆ, ಪ್ರಾತಿನಿಧ್ಯ ಕೆಲವು ಜಾತಿ–ವರ್ಗಗಳಿಗೆ ಸೀಮಿತವಾಗಿದೆ. ಕಾಂಗ್ರೆಸ್ ಅದರ ಅಜೇಯ ಏಕಸ್ವಾಮ್ಯದ ಅವಧಿಯಲ್ಲೂ ಸಹ ಉಚ್ಛ ಜಾತಿಗಳ ಅದರಲ್ಲೂ ಬ್ರಾಹ್ಮಣರ ಪ್ರಾಬಲ್ಯವನ್ನು ಪ್ರತಿನಿಧಿಸುತ್ತಿತ್ತು. ಬಿಜೆಪಿ ಮತ್ತು ಅದರ ಹಿಂದಿನ ಅವತಾರ ಜನಸಂಘ ಸಹ ಬ್ರಾಹ್ಮಣ–ಬನಿಯಾ ಮತ್ತಿತರ ಉಚ್ಛ ಜಾತಿಗಳ ಜಾತಿಗಳ ಪ್ರಾಬಲ್ಯವನ್ನೇ ಪ್ರತಿನಿಧಿಸುತ್ತಿತ್ತು. ಕಾಂಗ್ರೆಸ್ ನ ರಾಜಕೀಯ ಏಕಸ್ವಾಮ್ಯಕ್ಕೆ ವಿರೋಧ ಪಕ್ಷಗಳ ಕೂಟ 60ರ ದಶಕದ ಕೊನೆಯಲ್ಲಿ ಸವಾಲು ಹಾಕಿದ್ದವು. 1970ರ ದಶಕದ ಕೊನೆಯಲ್ಲಿ ಇವೆಲ್ಲ ಒಂದುಗೂಡಿ ರಚಿಸಿದ ಬಹು–ಜಾತಿ ಬಹು–ಧರ್ಮೀಯ ರಾಷ್ಟ್ರೀಯ 'ಜನತಾ ಪಕ್ಷ'ದ ಪ್ರಯೋಗದ ವೈಫಲ್ಯದೊಂದಿಗೆ ಹಲವು ಸಣ್ಣ ಪಕ್ಷಗಳು ಮತ್ತೆ ತಲೆಎತ್ತಿದ್ದವು. ಬರಬರುತ್ತಾ ಹೆಚ್ಚಿನ ಈ ಪಕ್ಷಗಳು ಒಂದೆರಡು ಜಾತಿಯ ಪಕ್ಷಗಳಾಗಿ ಬಿಟ್ಟವು.

ಜಾತಿ ಸಮೀಕರಣ ಮಾತ್ರವೇ?

ಈಗಿನ ಪರಿಸ್ಥಿತಿ ಹೇಗಿದೆಯೆಂದರೆ ಸಮಾಜವಾದಿ ಪಾರ್ಟಿ ಯಾದವರ ಪಕ್ಷ, ಬಿಜೆಪಿ ಬ್ರಾಹ್ಮಣ–ಬನಿಯಾಗಳ ಪಕ್ಷ ಮತ್ತು ಬಿ.ಎಸ್.ಪಿ ಪ್ರಮುಖವಾಗಿ ಜಾತವ ದಲಿತ ಜಾತಿಯ ಪಕ್ಷ. ಇನ್ನೂ ಹಲವು ಸಣ್ಣ ಪಕ್ಷಗಳು ತಲಾ ಒಂದು ಜಾತಿಯ (ಉದಾ: ಆರ್.ಎಲ್.ಡಿ ಜಾಟರದ್ದು, ನಿಶಾದ ಪಾರ್ಟಿ ನಿಶಾದ ಮುಂತಾದ ನದಿ ತಟದ ಮೀನುಗಾರ ಅಂಬಿಗ ಜಾತಿಗಳದ್ದು, ಅಪ್ನಾ ದಲ್ ಕೂರ್ಮಿ ಜಾತಿಯದ್ದು) ಪಕ್ಷಗಳಾಗಿವೆ. ಈ ಪಕ್ಷಗಳು ಚುನಾವಣಾ ಸಮೀಕರಣವನ್ನು ಪ್ರಭಾವಿಸುವ ಸಂಖ್ಯೆಯಲ್ಲಿ ಕೆಲವು ಪ್ರದೇಶಗಳಲ್ಲಿ ಮಾತ್ರ ಪ್ರಬಲವಾಗಿರುವ ಪ್ರಾದೇಶಿಕ ಪಕ್ಷಗಳೂ ಹೌದು. ಈ ರಾಜ್ಯದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಮುಸ್ಲಿಮರಿಗೆ ಮಾತ್ರ ತಮ್ಮದೇ ಪಕ್ಷವಿಲ್ಲ. ಓವೈಸಿ ಯ ಎಂ.ಐ.ಎಂ ಪಕ್ಷ ಪ್ರಯತ್ನಿಸುತ್ತಿದ್ದರೂ ಈ ವರೆಗೆ ಸಫಲವಾಗಿಲ್ಲ. ಮುಸ್ಲಿಮರು ಹೆಚ್ಚಾಗಿ ದೊಡ್ಡ ಅಥವಾ ಗೆಲ್ಲುವ ಸಾಧ್ಯತೆಯಿರುವ (ಅಥವಾ ಬಿಜೆಪಿ ಯನ್ನು ಸೋಲಿಸುವ ಹೆಚ್ಚಿನ ಸಾಧ್ಯತೆಯುಳ್ಳ) 'ಸೆಕ್ಯುಲರ್' ಪಕ್ಷಗಳನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಅವರು ಒಂದು ಪಕ್ಷವನ್ನು ಸಾರಾ ಸಗಟಾಗಿ ಬೆಂಬಲಿಸುತ್ತಾರೆಂಬುದು ಸಹ ಮಿಥ್ಯೆ. ಮುಸ್ಲಿಮರೊಳಗೂ ಜಾತಿ–ವರ್ಗಗಳಿವೆ. ಪ್ರಾದೇಶಿಕವಾಗಿ, ಕ್ಷೇತ್ರವಾರಾಗಿ ಸಹ ಭಿನ್ನತೆಗಳನ್ನು ಆಧರಿಸಿ ಅವರ ರಾಜಕೀಯ ಆಯ್ಕೆ ಭಿನ್ನವಾಗಿರುತ್ತದೆ. ಇದು ಎಲ್ಲಾ ಜಾತಿಗಳ ಕುರಿತೂ ನಿಜ. ಆದರೂ ಈ ಪಕ್ಷಗಳು ರಾಜಕೀಯ ಅಧಿಕಾರದ ಲೆಕ್ಕಾಚಾರದ ಭಾಗವಾಗಿ ಇತರ ಜಾತಿ–ಪಕ್ಷಗಳೊಡನೆ ಮೈತ್ರಿಕೂಟ ರಚಿಸಿಕೊಳ್ಳುತ್ತವೆ ಅಥವಾ ಆ ಜಾತಿಗಳ ಬೆಂಬಲ ಗಳಿಸಿಕೊಳ್ಳಲು ಪ್ರಯತ್ನಿಸುತ್ತವೆ.

ಒಟ್ಟಾರೆಯಾಗಿ ಹೇಳುವುದಾದರೆ ಈಗ ಉತ್ತರ ಪ್ರದೇಶದ ರಾಜಕಾರಣ ಜಾತಿವಾರು ಸಮೀಕರಣದ ಲೆಕ್ಕಾಚಾರವಾಗಿದೆ ಎಂದು ಕೆಲವು ರಾಜಕೀಯ ವೀಕ್ಷಕರ ಅಂಬೋಣ. ಕಳೆದ 2–3 ದಶಕಗಳ ಚುನಾವಣಾ ರಾಜಕೀಯ ನೋಡಿದರೆ ಇದು ಭಾಗಶಃ ನಿಜ. 2017ರ ಚುನಾವಣೆಯಲ್ಲಿ ಬಿ.ಎಸ್.ಪಿ–ಎಸ್.ಪಿ ಗಳ ಮೈತ್ರಿಕೂಟದ ಪ್ರಬಲ ಸವಾಲು ಇದ್ದರೂ, ಬಿಜೆಪಿ ಅಗಾಧ ಬಹುಮತದಿಂದ ಗೆದ್ದಿದ್ದು, ಈ ಪಕ್ಷಗಳ ಜಾತಿ ಲೆಕ್ಕಾಚಾರಗಳನ್ನು ಮೈಕ್ರೋ ಸಾಮಾಜಿಕ ಇಂಜಿನೀಯರಿಂಗ್ ನಿಂದ ಎದುರಿಸಿದ್ದು ಕಾರಣವೆಂದು ಹೇಳಲಾಗುತ್ತದೆ.


ಹಿಂದೆ ಬಿ.ಎಸ್.ಪಿ ಮತ್ತು ಎಸ್.ಪಿ ಪ್ರತ್ಯೇಕವಾಗಿ ಸ್ಪರ್ಧಿಸಿದ್ದರಿಂದ ಬಹುಮತ ತಪ್ಪಿತ್ತು. ದಲಿತ (20%) – ಒಬಿಸಿ (44%) ಜಾತಿಗಳ ಬಹು ದೊಡ್ಡ ಭಾಗದೊಂದಿಗೆ ಮುಸ್ಲಿಮರ (20%) ದೊಡ್ಡ ಪಾಲು ತನಗೆ ಸಿಗುತ್ತದೆ ಎಂಬುದು ಬಿ.ಎಸ್.ಪಿ–ಎಸ್.ಪಿ ಮೈತ್ರಿಕೂಟದ ಲೆಕ್ಕಾಚಾರವಾಗಿತ್ತು. ಆದರೆ ಬಿಜೆಪಿಯು ಯಾದವೇತರ ಸಣ್ಣ ಒಬಿಸಿ (ಮೌರ್ಯ–5%, ಕೂರ್ಮಿ–5%, ನಿಶಾದ್ –5%, ಜಾಟ್/ಲೋಧಿ–2% ಇತ್ಯಾದಿ) ಮತ್ತು ಜಾತವೇತರ (ಪಾಸಿ–4%, ಇತರೆ–6%) ದಲಿತ ಜಾತಿಗಳ ನಾಯಕರ ಪಕ್ಷಗಳ ಕೂಟ ರಚಿಸಿ ಅವರ ಬೆಂಬಲ ಪಡೆಯುವಲ್ಲಿ ಯಶಸ್ವಿಯಾಯಿತು. ಉಚ್ಛ (ಬ್ರಾಹ್ಮಣ, ಠಾಕುರ್, ವೈಶ್ಯ ಇತ್ಯಾದಿ ಒಟ್ಟು ಶೇ.15) ಜಾತಿಗಳ ಬಹುಭಾಗ ಅದರ ಜೋಳಿಗೆಯಲ್ಲಿ ಹೇಗೂ ಇತ್ತು. ಮುಸ್ಲಿಮರ ಮತ ಬಿಜೆಪಿ ಸೇರಿದಂತೆ ಎಲ್ಲ ಪಕ್ಷಗಳ ನಡುವೆ ಹಂಚಿಹೋಗಿತ್ತು. ಎಸ್.ಪಿ ಯಾದವ ಮತಗಳಿಗೆ ಮತ್ತು ಬಿ.ಎಸ್.ಪಿ ಜಾತವ್ ಮತಗಳಿಗೆ ಬಹುಪಾಲು ಸೀಮಿತವಾಗಿತ್ತು. ಸಾಲದ್ದಕ್ಕೆ ಎಸ್.ಪಿ ಅಭ್ಯರ್ಥಿಗಳಿಗೆ ಬಿ.ಎಸ್.ಪಿ ಯ ದಲಿತ ಬೆಂಬಲಿಗರ ಮತ ಸಿಕ್ಕಿದರೂ, ಬಿ.ಎಸ್.ಪಿ ಅಭ್ಯರ್ಥಿಗಳಿಗೆ ಎಸ್.ಪಿ ಯ ಒಬಿಸಿ ಬೆಂಬಲಿಗರ ಮತಗಳು ಸಿಗಲಿಲ್ಲ.

ಸಾಮಾಜಿಕ ಇಂಜಿನೀಯರಿಂಗ್ ತಿರುಗುಬಾಣ?

ಇದು ನಿಜವೆಂದಿಟ್ಟುಕೊಂಡರೂ ಇದೇ ಅಂಶ ಈ ಬಾರಿ ಬಿಜೆಪಿಗೆ ಮುಳುವಾಗಲಿದೆ. ಬಿಜೆಪಿ ಪಡೆದ ಯಾದವೇತರ ಸಣ್ಣ ಒಬಿಸಿ ಮತ್ತು ಜಾತವೇತರ ಸಣ್ಣ ದಲಿತ ಜಾತಿಗಳ ಬೆಂಬಲವನ್ನು ಕಳೆದುಕೊಳ್ಳಲಿದೆ. ಈ ಜಾತಿಗಳಿಗೆ ರಾಜಕೀಯ ಆಡಳಿತದ ಸ್ಥಾನಗಳಲ್ಲಿ ಪ್ರಾತಿನಿಧ್ಯದಲ್ಲಿ ಮೋಸ ಮಾಡಲಾಯಿತು. ಉಚ್ಛ ಜಾತಿಯ ಠಾಕುರ್ ಬ್ರಾಹ್ಮಣ ಬನಿಯಾಗಳನ್ನು ಎಲ್ಲೆಡೆ ಅಧಿಕಾರದ ಸ್ಥಾನಗಳಲ್ಲಿ ಕೂರಿಸಲಾಯಿತು. ಚುನಾವಣೆಯ ಮೊದಲು ಪಕ್ಷದ ರಾಜ್ಯಾಧ್ಯಕ್ಷನಾಗಿದ್ದ ಕೆ.ಪಿ.ಮೌರ್ಯ ಬದಲು ಉಚ್ಛ ಜಾತಿಯಾದ ಠಾಕುರ್ ಜಾತಿಯ ಆದಿತ್ಯನಾಥ ಯೋಗಿ ಯನ್ನು ಮುಖ್ಯಮಂತ್ರಿ ಮಾಡಲಾಯಿತು. ಸಣ್ಣ ಒಬಿಸಿ ಮತ್ತು ದಲಿತ ಜಾತಿಗಳ ಅತೃಪ್ತಿ ಚುನಾವಣಾ ಸಮಯದ್ದು

ಪುಟ 10 ನೋಡಿ

80% ಅಥವ 20%? **93%! ಆದರೂ ಕೆಲಸವಿಲ್ಲ!**



ಉತ್ತರ ಪ್ರದೇಶದಲ್ಲಿ ವಿದ್ಯಾರ್ಥಿ ಪ್ರತಿಭಟನೆ: ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಬೋಗಿಗಳೆಲ್ಲ ಕಾಣೆಯಾಗಿ ಕೊನೆಗೆ ಡಬ್ಬಲ್ ಇಂಜಿನ್ ಮಾತ್ರ ಉಳಿಯುತ್ತದೆಯೇ?



ಬಿಜೆಪಿಗೆ ಹಲವು ಶಾಸಕರ ರಾಜೀನಾಮೆ: ವ್ಯಂಗ್ಯಚಿತ್ರ: ಇರ್ಫಾನ್, ನ್ಯೂಸ್‌ಕ್ಲಿಕ್

ಉತ್ತರ ಪ್ರದೇಶದಲ್ಲಿ ಏನಾಗುತ್ತಿದೆ?



ಪುಟ 9 ರಿಂದ

ಮಾತ್ರವಲ್ಲ. ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ 2 ವರ್ಷಗಳಲ್ಲೇ 100ಕ್ಕೂ ಹೆಚ್ಚು ಒಬಿಸಿ ದಲಿತ ಶಾಸಕರು ಈ ಅತೃಪ್ತಿಯನ್ನು ವಿಧಾನಸಭೆಯಲ್ಲೇ ವ್ಯಕ್ತ ಪಡಿಸಿದ್ದರು. ಇದು ಬರಿಯ ಭಾವನೆಯಲ್ಲ. ರಾಜ್ಯದ ವಿಧಾನಸಭೆಯ ಉಚ್ಚ ಜಾತಿಗಳ ಶಾಸಕರ ಪ್ರಮಾಣ 1980ರ ನಂತರ ಈ ವಿಧಾನಸಭೆಯಲ್ಲಿ ಅತಿ ಹೆಚ್ಚು ಅಂದರೆ ಶೇ. 44.3 ಮಟ್ಟ ಮುಟ್ಟಿತ್ತು. ಆಡಳಿತದಲ್ಲಿ, ಪೋಲಿಸ್ ವ್ಯವಸ್ಥೆಯಲ್ಲಿ ಥಾಕುರ್ ಪಾರಮ್ಯವು ತಾಂಡವವಾಡಿತ್ತು.

ಅಲ್ಲದೆ 2011ರ ಜಾತಿ (ಸಾಮಾಜಿಕ–ಆರ್ಥಿಕ) ಸಮೀಕ್ಷೆಯ ವರದಿಯನ್ನು ಪ್ರಕಟಿಸುವುದನ್ನು ಬಿಜೆಪಿ ಸರಕಾರ ಮುಂದೂಡುತ್ತಾ ಬಂದಿದೆ. ಮೀಸಲಾತಿ ಸಣ್ಣ ಜಾತಿಗಳಿಗೆ ಸಮಾನವಾಗಿ ಹಂಚಲು ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಕಮಿಶನ್ ನೇಮಿಸಲಾಗಿತ್ತು. 2018ರಲ್ಲಿ ಅದು ವರದಿ ಕೊಡಬೇಕಾಗಿತ್ತು. ವರದಿ ಕೊಡುವ ದಿನಾಂಕವನ್ನು 12ನೆಯ ಬಾರಿ ವಿಸ್ತರಿಸಲಾಗಿದೆ. ಇವೆಲ್ಲದರಿಂದಾಗಿ ಬಿಜೆಪಿ ವಿರುದ್ಧ ಈ ಆಕ್ರೋಶ ಒಬಿಸಿ ಮತ್ತು ದಲಿತ (ವಿಶೇಷವಾಗಿ ಸಣ್ಣ ಜಾತಿಗಳ) ಜನತೆಯಲ್ಲಿ ವ್ಯಾಪಕವಾಗಿ ಹಬ್ಬಿದ್ದು, ಇದನ್ನು ಗ್ರಹಿಸಿದ ಹಲವು ಪ್ರಮುಖ ಬಿಜೆಪಿ ಒಬಿಸಿ–ದಲಿತ ಮಂತ್ರಿಗಳು, ಶಾಸಕರು, ನಾಯಕರು ಬಿಜೆಪಿ ಬಿಟ್ಟು ಎಸ್.ಪಿ ಸೇರಲು ಕಾರಣವೆಂದು ಹೇಳಲಾಗಿದೆ. ಎಸ್.ಪಿ ಇದನ್ನು ಗ್ರಹಿಸಿ ಎಲ್ಲ ಸಣ್ಣ ಒಬಿಸಿ ದಲಿತ ಜಾತಿಗಳ ನಾಯಕರು, ಪಕ್ಷಗಳು, ಕಾರ್ಯಕರ್ತರು ಮತ್ತು ಜನತೆಯ ಬೆಂಬಲ ಗಳಿಸಿ ತನ್ನ ಮೈತ್ರಿಕೂಟದಲ್ಲಿ ಸೇರಿಸಲು ಪ್ರಯತ್ನಿಸಿದೆ. ಬಿ.ಎಸ್.ಪಿ ಈ ಚುನಾವಣೆಯಲ್ಲಿ ಇನ್ನೂ ಅಷ್ಟೇನೂ ಸಕ್ರಿಯವಾಗಿಲ್ಲದಿರುವುದು ಸಹ ಎಸ್.ಪಿ ಗೆ ನೆರವಾಗಲಿದೆ. ರಾಜ್ಯದ ಪಶ್ಚಿಮ ಭಾಗದಲ್ಲಿ ಮುಜಫ್ಫರ್‌ನಗರ ಕೋಮುದಂಗೆಗಳ ಮೂಲಕ ಬಿಜೆಪಿ ಕಳೆದ ಬಾರಿ ಜಾಟ್ ಮತ್ತು ಮುಸ್ಲಿಂ ಐಕ್ಯತೆಯನ್ನು ಮುರಿದದ್ದು ಸಹ ಈ ಬಾರಿ ಕೆಲಸ ಮಾಡುವುದಿಲ್ಲ. ದೇಶವ್ಯಾಪಿ ರೈತ ಚಳುವಳಿಯ ಫಲವಾಗಿ ಈ ಎರಡು ಸಮುದಾಯಗಳು ಬಿಜೆಪಿಯ ವಿರುದ್ಧ ಆಕ್ರೋಶಗೊಂಡಿದ್ದು, ಅವುಗಳಿಗೆ ತಮ್ಮ ತಪ್ಪಿನ ಅರಿವಾಗಿದೆ ಎಂದೂ ಹಲವು ವರದಿಗಳು ಹೇಳುತ್ತಿವೆ.

ಹುಸಿ ಯೋಜನೆಗಳು ಬಯಲಾಗುತ್ತಿವೆ

ಸಾಮಾಜಿಕ ಇಂಜಿನೀಯರಿಂಗ್, ಜಾತಿ ಸಮೀಕರಣ, ರಾಜಕೀಯ ಪ್ರಾತಿನಿಧ್ಯ ಮಾತ್ರ ಚುನಾವಣೆಯಲ್ಲಿ ಪಾತ್ರ ವಹಿಸುತ್ತದೆ ಎಂಬುದು ಯಾವತ್ತೂ ನಿಜವಲ್ಲ. ಸಾಮಾಜಿಕ ಆರ್ಥಿಕ ಪರಿಸ್ಥಿತಿಯನ್ನು ಸರಕಾರ ನಿರ್ವಹಿಸಿದ ರೀತಿ, ಸರಕಾರದ ಸಾಮಾನ್ಯ ಆಡಳಿತ ನಿರ್ವಹಣೆ, ಜನಪರ ಕಾರ್ಯಕ್ರಮಗಳ ಸಾಧನೆ ಇವೆಲ್ಲ ಸಹ ಯಾವಾಗಲೂ ಇದ್ದೇ ಇರುತ್ತವೆ. ಭಾವನಾತ್ಮಕ ಮತ್ತಿತರ ವಿಷಯಗಳು ಮುನ್ನೆಲೆಗೆ ಬಂದಾಗಲೂ ಇವು ಒಳಸುಳಿಯಾಗಿ ಇದ್ದೇ ಇರುತ್ತವೆ. ಬಿಜೆಪಿ ಹಲವು ಜಾತಿ–ವರ್ಗಗಳ ಬೆಂಬಲವನ್ನು ಗಳಿಸಿದ್ದು, ಮೋದಿಯ 'ಸಮರ್ಥ ನಾಯಕತ್ವ' ಮತ್ತು 'ಡಬ್ಬಲ್ ಇಂಜಿನ್' ಸವಲತ್ತಿನಿಂದ ಸಾಮಾಜಿಕ ಆರ್ಥಿಕ ಸಮಸ್ಯೆಗಳ ಪರಿಹಾರ, ಅಪರಾಧ–ಮುಕ್ತ ಭ್ರಷ್ಟಾಚಾರ–ಮುಕ್ತ ಉತ್ತಮ ಆಡಳಿತ, ಕಲ್ಯಾಣ ಯೋಜನೆಗಳ ಜಾರಿ ಮಾಡುವ ನಿರೀಕ್ಷೆಯಿಂದಾಗಿ ಸಹ. ಇವೆಲ್ಲದರಲ್ಲಿ ಯೋಗಿ ಸರಕಾರ ದಯನೀಯವಾಗಿ ವಿಫಲವಾಗಿದೆ. ಯೋಗಿ ಯು.ಪಿ ಯ ಹಿಂದಿನ (ಬಿಜೆಪಿ ಸರಕಾರ ಸೇರಿದಂತೆ) ಯಾವುದೇ ಸರಕಾರಕ್ಕಿಂತ ಕೆಟ್ಟ ಆಡಳಿತ ನೀಡಿದ್ದಾರೆ ಎಂಬುದು ಎಲ್ಲರಿಗೂ ಅರಿವಾಗಿದೆ.

ಬಿಜೆಪಿ ಸರಕಾರ ಉತ್ತಮ ಆಡಳಿತ ನೀಡಿದೆ, ಎಲ್ಲ ಆಶ್ವಾಸನೆಗಳನ್ನು ಪೂರೈಸಿದೆ. ಇನ್ನೂ ಸಮಸ್ಯೆಗಳಿದ್ದರೆ ಹಿಂದಿನ ವಿರೋಧ ಪಕ್ಷಗಳ ದುರಾಡಳಿತದ ಫಲ. ಅದನ್ನು ಮುಂದೆ ಸರಿಪಡಿಸಲಿದೆ ಎಂದು ಜನತೆಯನ್ನು ನಂಬಿಸುವುದು ಯೋಗಿ–ಮೋದಿ–ಶಾ ತ್ರಿವಳಿಗಳಿಗೆ ಕಷ್ಟವಾಗುತ್ತಿದೆ. ಉದಾಹರಣೆಗೆ ಮೋದಿ ಒಂದು ಬಟನ್ ಒತ್ತಿ 1 ಲಕ್ಷ ಹೆಣ್ಣುಮಕ್ಕಳಿಗೆ ತಲಾ ರೂ.2000 ಅಕೌಂಟಿಗೆ ಕಳಿಸುವ ನಾಟಕವಾಡಿದರು. ಇದು 2019ರಲ್ಲಿ ಹೆಣ್ಣುಮಕ್ಕಳ ಹುಟ್ಟಿನಿಂದ ಡಿಪ್ಲೊಮಾ ಓದಿನ ವರೆಗೆ 6 ಕಂತುಗಳಲ್ಲಿ ರೂ 15 ಸಾವಿರ ಕೊಡುವ 'ಮುಖ್ಯಮಂತ್ರಿ ಕನ್ಯಾ ಸುಮಂಗಲ ಯೋಜನ' ದ ಜಾರಿ! 2019ರಲ್ಲಿ ಘೋಷಿಸಲ್ಪಟ್ಟ ಈ ಯೋಜನೆಯ ನಿಯಮಗಳ ಪ್ರಕಾರವೇ ಫಲಾನುಭವಿಗಳ ಸಂಖ್ಯೆ ಕನಿಷ್ಟ 5 ಕೋಟಿ ಆಗುತ್ತದೆ. ಆದರೆ ಈ ವರೆಗೆ ಕೇವಲ 5.85 ಲಕ್ಷ ಹೆಣ್ಣುಮಕ್ಕಳಿಗೆ ಈ ಸವಲತ್ತು ಸಿಕ್ಕಿದೆ. ಈ ಯೋಜನೆಯ ಫಲಾನುಭವಿಗಳ ಕುಟುಂಬದಲ್ಲಿ ಎರಡಕ್ಕಿಂತ ಹೆಚ್ಚು ಮಕ್ಕಳಿರಬಾರದು ಎಂಬ ನಿಯಮಾವಳಿಯ ಮೂಲಕ ಹೆಚ್ಚಿನ ದಲಿತ, ಮುಸ್ಲಿಂ, ಬಡ ಕುಟುಂಬಗಳನ್ನು ಈ ಯೋಜನೆಯಿಂದ ಹೊರಗಿಡಲಾಗಿದೆ. ಮೋದಿ ಎರಡನೆಯ ಬಟನ್ ಒತ್ತಿ 5.6 ಲಕ್ಷ ಸ್ವಸಹಾಯ ಗುಂಪುಗಳಿಗೆ 1 ಸಾವಿರ ಕೋಟಿ ರೂ.(ಅಂದರೆ ಸರಾಸರಿ ಒಂದು ಗುಂಪಿಗೆ ರೂ. 17 ಸಾವಿರ) ಕಳಿಸುವ ಇನ್ನೊಂದು ನಾಟಕವಾಡಿದರು. ರೂ. 17 ಸಾವಿರದಿಂದ ಯಾವ ಆರ್ಥಿಕ ಚಟುವಟಿಕೆ ನಡೆಸಲು ಸಾಧ್ಯ? ಜಿ.ಎಸ್.ಟಿ, ಕೊವಿದ್ ಲಾಕ್ ಡೌನ್ ಮತ್ತು ಆರ್ಥಿಕ ಸ್ಥಗಿತತೆ, ಬೇಡಿಕೆಯ ಅಭಾವಗಳಿಂದ ಜೀವನೋಪಾಯ ಇಲ್ಲದೆ ಸಾಲದ ಹೊರೆಯಿಂದ ನರಳುತ್ತಿರುವ ಮಹಿಳೆಯರಿಗೆ ಸ್ವಸಹಾಯ ಗುಂಪುಗಳ ಮೂಲಕ ಆರ್ಥಿಕ ನೆರವು ಖಂಡಿತ ಬೇಕು. ಆದರೆ ಈ ಕ್ರೂರ ನಾಟಕ ಮಹಿಳೆಯರಿಗೆ ಅರ್ಥವಾಗದೆ?

ಬಹುಚರ್ಚಿತ 'ಉಜ್ವಲ' ಯೋಜನೆ ಬಗ್ಗೆ ಮೋದಿ ಇನ್ನೂ ಬೊಗಳೆ ಬಿಡುತ್ತಲೇ ಇದ್ದಾರೆ. ಯೋಜನೆ ಭಾಗಶಃ ಜಾರಿಯಾದದ್ದು ಸಹ ಪೂರ್ಣವಾಗಿ ಅರ್ಥಹೀನವಾಗಿದೆ. ಉಚಿತ ಮೊದಲ ಸಿಲಿಂಡರ್ ನಂತರ ದುಬಾರಿ ಬೆಲೆ ಇರುವ ಸಿಲಿಂಡರನ್ನು ಖರೀದಿಸಲು ಆಗದೆ 'ಉಜ್ವಲ' ನಂದಿಹೋಗಿದೆ ಅಂತ ಅವರ ಮಡಿಲ ಮಾಧ್ಯಮಗಳೂ ಒಪ್ಪಿಕೊಳ್ಳಬೇಕಾಗಿ ಬಂದಿದೆ. 'ಬೇಟಿ ಬಚಾವೊ' ಸಾಧಿತವಾಗಿದೆ ಎಂದು ಹೇಳುತ್ತಾರೆ. ಆದರೆ ಹಿಂದೆ ಮಹಿಳೆಯರ ಪ್ರಮಾಣ ಸಾವಿರಕ್ಕೆ 899 ಇದ್ದಿದ್ದು, 902ಕ್ಕೆ ಬಂದಿದೆಯಷ್ಟೇ. 21 ಜಿಲ್ಲೆಗಳಲ್ಲಿ ಅದು ಕೇವಲ 850. ಮಾತೃ ಮರಣ ಸಂಖ್ಯೆ 197 (ಕೇರಳದ್ದು 43) ಮತ್ತು ಮಕ್ಕಳ ಮರಣ ಸಂಖ್ಯೆ ಹತ್ತು ಸಾವಿರಕ್ಕೆ 47 (ಕೇರಳದ್ದು 7) ದೇಶದಲ್ಲೇ ಅತಿ ಹೆಚ್ಚು. ಆಸ್ಪತ್ರೆಗಳಲ್ಲಿ ಮಕ್ಕಳ ಜನನ ಪ್ರಮಾಣ ಶೇ. 67 (ಕೇರಳದ್ದು ಶೇ. 99). ದಲಿತ ಮಹಿಳೆಯರ ಮೇಲೆ ಅತ್ಯಾಚಾರಗಳ ಸಂಖ್ಯೆ 2013ರಿಂದ 2020ರಲ್ಲಿ ಶೇ. 40ರಷ್ಟು ಏರಿದೆ. ಇತ್ತೀಚೆಗೆ ಹಥರಸ್ ನಲ್ಲಿ ಅತ್ಯಾಚಾರಕ್ಕೊಳಗಾದ ದಲಿತ ಯುವತಿಗೆ ನ್ಯಾಯ ನಿರಾಕರಿಸುವಲ್ಲಿ ಸರಕಾರದ ಶಾಮೀಲು ಸ್ಪಷ್ಟವಿದೆ. ಕೊವಿದ್ ಲಾಕ್‌ಡೌನಿನಲ್ಲಿ ವಲಸೆ ಕಾರ್ಮಿಕರ ಪರಿಸ್ಥಿತಿಯ ನಿರ್ವಹಣೆ ಮತ್ತು ಎರಡನೆಯ ಅಲೆಯಲ್ಲಿ ಎಲ್ಲ ವೈದ್ಯಕೀಯ ಉಪಕರಣಗಳ ಅಭಾವ ಅವ್ಯವಸ್ಥೆ ಮತ್ತು ಅದರ ಪರಿಣಾಮವಾಗಿ ಗಂಗೆಯಲ್ಲಿ ಹೆಣಗಳ ಮೆರವಣಿಗೆ ಅಂತರ್ರಾಷ್ಟ್ರೀಯ ಸುದ್ದಿಯಾಗಿದ್ದು ಜನರಿಗೆ ತಿಳಿಯುವುದಿಲ್ಲವೇ? ಜಿ.ಎಸ್.ಟಿ ಮತ್ತು ಕೊವಿದ್ ರಾಜ್ಯದ ಆರ್ಥಿಕತೆಯ ಬೆನ್ನೆಲುಬಾದ ಅನೌಪಚಾರಿಕ ಕ್ಷೇತ್ರಕ್ಕೆ ಮಾರಣಾಂತಿಕ ಏಟು ಕೊಟ್ಟಿದೆ. ಇನ್ನು ಹೆಚ್ಚು ಕಡಿಮೆ ಪ್ರಮುಖ ಮಾನವ, ರಾಜ್ಯದ ಅಭಿವೃದ್ಧಿ ಸೂಚಕಗಳಲ್ಲಿ ಯು.ಪಿ ಯದ್ದು ಕೊನೆಯ ಸ್ಥಾನವಿದೆ. 'ಕೆಲವು ಉದಾಹರಣೆಗಳು : ಮಾನವ ಅಭಿವೃದ್ಧಿ ಸೂಚಕ 35/36 (35ನೆಯ ಸ್ಥಾನ 36 ರಾಜ್ಯಗಳಲ್ಲಿ), ಹುಟ್ಟಿನಲ್ಲಿ ಆಯುಷ್ಯದ ನಿರೀಕ್ಷೆ –21/22, ಪ್ರತಿ ವೈದ್ಯರು ನೋಡಬೇಕಾದ ಜನಸಂಖ್ಯೆ (32/35), ತಲಾ ರಾಜ್ಯ ಉತ್ಪನ್ನ (31/32), ಮಾತೃ ಮರಣ ದರ (18/19), ಮಕ್ಕಳ ಮರಣ ದರ (35/35).


ಸಾಮಾಜಿಕ ಆರ್ಥಿಕ ಪ್ರಶ್ನೆಗಳು ಮುನ್ನೆಲೆಗೆ

ಇನ್ನು ದೆಹಲಿ ಗಡಿಗಲ್ಲಿ ಮೂರು ಕರಾಳ ಕಾನೂನುಗಳ ವಿರುದ್ಧ ಒಂದು ವರ್ಷದ ರೈತ ಹೋರಾಟ, ಅದಕ್ಕೆ ವಿಶೇಷವಾಗಿ ಪಶ್ಚಿಮ ಯು.ಪಿ ಯಲ್ಲಿ ಮಹಾಪಂಚಾಯತ್ ಗಳಲ್ಲಿ ವ್ಯಕ್ತವಾದ ವ್ಯಾಪಕ ಬೆಂಬಲ, ಕೇಂದ್ರ ಸಚಿವನ ಪುತ್ರ ಲಖೀಮ್ ಪುರ ಖೇರಿ ಯಲ್ಲಿ ವಾಹನ ಹರಿಯಬಿಟ್ಟು ರೈತರ ಕೊಲೆಯಾದರೂ ಸಚಿವ ರಾಜೀನಾಮೆ ಕೊಡದಿರುವುದು, ಹೋರಾಟ ಹಿಂತೆಗೆಯುವಾಗ ಕನಿಷ್ಟ ಬೆಂಬಲ ಬೆಲೆ ಯ ಕುರಿತು ರೈತ ಸಂಘಟನೆಗಳಿಗೆ ಕೊಟ್ಟ ಆಶ್ವಾಸನೆ ಈಡೇರಿಸದಿರುವುದು, ಮೋದಿ–ಯೋಗಿ ಎದುರಿಸುತ್ತಿರುವ ಅತಿ ದೊಡ್ಡ ಸವಾಲು. ಮೋದಿ ಸರಕಾರ ರೈತ–ವಿರೋಧಿ ಬಡವರ–ವಿರೋಧಿ ಎಂದು ಜಾತಿ–ಧರ್ಮ ಬೇಧವಿಲ್ಲದೆ ಎಲ್ಲರಿಗೂ ಸ್ಪಷ್ಟ ಸಂದೇಶವನ್ನು ನೀಡಿದೆ. ದಲಿತರು, ಮುಸ್ಲಿಮರ ಮೇಲೆ ಗುಂಪು ದಾಳಿ ಕೊಲೆಗಳಲ್ಲಿ ಯೋಗಿ ಸರಕಾರ ಸಾಧಿಸಿದ ವಿಕ್ರಮವಂತೂ ಜಗಜ್ಜಾಹೀರಾಗಿದೆ. ಸರಣಿ ಎನ್ ಕೌಂಟರ್ ಸಾವುಗಳು ಸರಕಾರಿ ನೀತಿಯಾಗಿ ಹೆಚ್ಚು ಕಡಿಮೆ ಪೋಲಿಸ್ ರಾಜ್ಯವಾಗಿರುವಾಗ ಯೋಗಿ 'ಶಾಂತಿ–ಸುವ್ಯವಸ್ಥೆ' ರಾಜ್ಯಕ್ಕೆ ಮರಳಿದೆ. ಎಸ್.ಪಿ ಸರಕಾರ 'ಗೂಂಡಾ ರಾಜ್ಯದ ಕುರಿತು ಎಚ್ಚರಿಸುವುದು ಜೋಕಾಗಿಬಿಟ್ಟಿದೆ. ಈ ವಿಷಯಗಳ ಬಗ್ಗೆ ಮೋದಿ–ಶಾ–ಯೋಗಿ ತ್ರಿವಳಿಯ ಬಳಿ ಉತ್ತರಗಳಿಲ್ಲ. ಆದ್ದರಿಂದಲೇ ಅಯೋಧ್ಯೆ ಮಂದಿರ ಕಟ್ಟಲು ಆರಂಭಿಸಿದ್ದು, ಕಾಶಿ ವಿಶ್ವನಾಥ ಕಾರಿಡಾರ್, ಮಥುರಾ ಮಂದಿರದ ಸಾಧ್ಯತೆಯಂತಹ ಸಾಧನೆಗಳನ್ನು ಮಾತ್ರ ತೋರಿಸಬೇಕಾಗಿದೆ. ಯಥಾ ಪ್ರಕಾರ ಕೋಮು ಧ್ರುವೀಕರಣದ ಪ್ರಯತ್ನಗಳನ್ನು ಮಾಡಬೇಕಾಗಿದೆ.

ಇವೆಲ್ಲ ಚುನಾವಣಾ ಸಂಕಥನದ ಮೇಲೆ ಪರಿಣಾಮ ಬೀರುತ್ತಿವೆ. ಒಂದೆಡೆ ಬಡತನ, ನಿರುದ್ಯೋಗ, ಉದ್ಯೋಗಾವಕಾಶಗಳ ಸೃಷ್ಟಿಯ ಅಭಾವ, ಶಿಕ್ಷಣ–ಆರೋಗ್ಯ ಮತ್ತಿತರ ಗ್ರಾಮೀಣ ಮೂಲ ಸೌಕರ್ಯಗಳ ಅಭಿವೃದ್ಧಿ, ದಲಿತ–ಮುಸ್ಲಿಮ–ಮಹಿಳೆಯರ ಸುರಕ್ಷಿತತೆ –ಇತ್ಯಾದಿ ಸಾಮಾಜಿಕ ಆರ್ಥಿಕ ಪ್ರಶ್ನೆಗಳು ಮುನ್ನೆಲೆಗೆ ಬರುತ್ತಿವೆ. ದ್ವೇಷಪ್ರಚಾರದ ಕೋಮುವಾದಿ ಪ್ರಚಾರದ ಪರಿಣಾಕಾರಿತನ ಕಡಿಮೆಯಾಗುತ್ತಿದೆ. ಇವು ಸಾಂಪ್ರದಾಯಿಕ ಜಾತಿ ಲೆಕ್ಕಾಚಾರವನ್ನು ತಲೆ ಕೆಳಗು ಮಾಡುವ ವಿಷಯಗಳಾಗಿ ಹೊಮ್ಮುತ್ತಿವೆ. ರಾಜಕೀಯ ಮತ್ತಿತರ ಪ್ರಾತಿನಿಧ್ಯಕ್ಕಿಂತಲೂ ಸಾಮಾಜಿಕ ಆರ್ಥಿಕ ವಿಷಯಗಳ ಕುರಿತು ಆತಂಕ ಹೆಚ್ಚಾಗುತ್ತಿದೆ. ಈ ವರೆಗೆ ಎಲ್ಲ ಪಕ್ಷಗಳು ನಡೆಸಿಕೊಂಡು ಬರುತ್ತಿದ್ದ 'ಗುರುತಿನ ರಾಜಕೀಯ' (ಅಥವಾ ಐಡೆಂಟಿಟಿ ರಾಜಕೀಯ), ಸಾಮಾಜಿಕ ಇಂಜಿನೀಯರಿಂಗ್ ಬಹುಶಃ ಅದರ ತಾರ್ಕಿಕ ಅಂತ್ಯದ ಹತ್ತಿರ ಬರುತ್ತಿದೆ ಅಥವಾ ಅದರ ಮಿತಿ ಬಯಲಾಗುತ್ತಿದೆ. ಅಥವಾ ಕನಿಷ್ಟ ಅದು ದುರ್ಬಲವಾಗುತ್ತಿದೆ. ಬಿಜೆಪಿಗೆ ಇದು ಎಚ್ಚರಿಕೆಯ ಗಂಟೆಯಾದರೆ, ವಿರೋಧ ಪಕ್ಷಗಳೂ ಇದನ್ನು ಪೂರ್ಣವಾಗಿ ಗ್ರಹಿಸುತ್ತಿಲ್ಲ. ಇಂದಿನ ಯು.ಪಿ. ಯ ದುಸ್ಥಿತಿ ಗೆ ಕಳೆದ ಮೂರು ದಶಕಗಳಲ್ಲಿ ಹೆಚ್ಚು ಕಾಲ ಸರಕಾರ ನಡೆಸಿದ, ಸಾಮಾಜಿಕ ಆರ್ಥಿಕ ವಿಷಯಗಳನ್ನು ಬದಿಗೊತ್ತಿ ಐಡೆಂಟಿಟಿ ರಾಜಕೀಯ ನಡೆಸಿದ ಇಂದಿನ ವಿರೋಧ ಪಕ್ಷಗಳ ಜವಾಬ್ದಾರಿ ಕಡಿಮೆಯೇನಲ್ಲ. ಈಗಲೂ ಇವು ಜನತೆ ಉತ್ಸಾಹದಿಂದ ಬೆಂಬಲಿಸಬಹುದಾದ ಪ್ರಾಮಾಣಿಕವಾದ ಸಾಮಾಜಿಕ–ಆರ್ಥಿಕ ಬದಲಿ ಕಾರ್ಯಕ್ರಮ ಕೊಟ್ಟಿಲ್ಲ. ಬಿಜೆಪಿಯ ದುರಾಡಳಿತದ ವೈಫಲ್ಯಗಳ ಮತ್ತು ತಮ್ಮದೇ ಸಾಮಾಜಿಕ ಇಂಜಿನೀಯರಿಂಗ್ ಗಳ ಮೇಲೆ ಅವಲಂಬಿಸಿವೆ. ಅಲ್ಲದೆ ಪಕ್ಷಗಳ ನಡುವೆ ಯಾವುದೇ ಸಿದ್ಧಾಂತ, ಕಾರ್ಯಕ್ರಮ, ನೀತಿಗಳ ಆಧಾರವಿಲ್ಲದ ಶಾಸಕರ ನಾಯಕರ 'ಆಯಾ ರಾಂ, ಗಯಾ ರಾಂ' ಓಡಾಟ ಜನರಲ್ಲಿ ವಿಶ್ವಾಸ ತುಂಬಬಲ್ಲದೆ?

ಮುಂದೇನು?

ಬಿಜೆಪಿಯ ದುರಾಡಳಿತದ ವೈಫಲ್ಯ ಮತ್ತು ಸಾಮಾಜಿಕ ಇಂಜಿನೀಯರಿಂಗ್ ಬಯಲು ಮಾಡುವುದರಲ್ಲೂ, ತನ್ನದೇ ಸಾಮಾಜಿಕ ಇಂಜಿನೀಯರಿಂಗ್ ಆಧಾರಿತ ರಾಜಕೀಯ ಮೈತ್ರಿಕೂಟ ಕಟ್ಟುವುದರಲ್ಲೂ ಎಸ್,ಪಿ ಅದಕ್ಕೆ ಪ್ರಬಲ ಸವಾಲೆಸೆದು ನೇರ ಮತ್ತು ಪ್ರಮುಖ ಸ್ಪರ್ಧಿಯಾಗಿದೆ. ಮುಖ್ಯ ಪ್ರತಿಸ್ಪರ್ಧಿಯಾಗಿ ಇತರ ರಾಜಕೀಯ ಶಕ್ತಿಗಳನ್ನು ಆಕರ್ಷಿಸುತ್ತಿದೆ. ಆದರೆ ಇವೆಲ್ಲ ಎಷ್ಟರ ಮಟ್ಟಿಗೆ ಮತಗಳಾಗಿ ಬದಲಾಗುವುದು ಎಂದು ಹೇಳುವುದು ಕಷ್ಟ ಈಗ ಓಟದಲ್ಲಿ ಸಕ್ರಿಯವಾಗಿ ಇರದಂತೆ ಕಾಣುವ ಬಿ.ಎಸ್.ಪಿ ಮತ್ತು ಕಾಂಗ್ರೆಸ್ ಎಷ್ಟರ ಮಟ್ಟಿಗೆ ಅವುಗಳ ಸಾಂಪ್ರದಾಯಿಕ ಮತನೆಲೆಗಳನ್ನು ಉಳಿಸಿಕೊಳುತ್ತವೆ, ಪ್ರದೇಶವಾರು, ಕ್ಷೇತ್ರವಾರು ಅದರ ಮತಪ್ರಮಾಣ ಎಷ್ಟಿರುತ್ತದೆ ಎಂಬುದರ ಮೇಲೆ ಸಹ ಎಸ್.ಪಿ ಗೆ ಅದು ಎಷ್ಟು ಸಹಾಯಕಾರಿ ಅಥವಾ ಅಪಾಯಕಾರಿಯಾಗಬಹುದು ಎಂಬುದು ಅವಲಂಬಿಸಿರುತ್ತದೆ. ಮಹಿಳೆಯರಿಗೆ ಶೇ.40 ಸೀಟುಗಳನ್ನು ಕೊಡುವ ಮೂಲಕ ಮತ್ತು ಮಹಿಳಾ ವಿಷಯಗಳ ಮೇಲೆ ಒತ್ತು ಕೊಟ್ಟ ಪ್ರಣಾಳಿಕೆ ಬಿಡುಗಡೆ ಮಾಡಿರುವುದು, ಪ್ರಿಯಾಂಕ ಅವರ ರಭಸದ ಪ್ರಚಾರ ಕಾಂಗ್ರೆಸ್ ಮತಗಳಿಕೆಯ ಮೇಲೆ ಪ್ರಭಾವ ಬೀರದಿರಲಾರದು. ಎಸ್.ಪಿ ಗೆ ಭಾರೀ ಬಹುಮತ ಬಾರದಿದ್ದರೆ ಬಿಜೆಪಿಯನ್ನು ಸರಕಾರದಿಂದ ಉರುಳಿಸುವುದು ಸುಲಭವಾಗಲಿಕ್ಕಿಲ್ಲ. ಬಿಜೆಪಿ ತೀರಾ ಕಡಿಮೆ ಬಹಮತದೊಂದಿಗೆ ಮತ್ತೆ ಆಯ್ಕೆಯಾಗುವ ಸಾಧ್ಯತೆಯಿದ್ದೇ ಇದೆ. ಎಸ್.ಪಿ. ಗೆ ಅಲ್ಪ ಬಹುಮತ ಬಂದರೂ ಅಥವಾ ಅತಂತ್ರ ಸ್ಥಿತಿ ಬಂದರೆ ಬಿ.ಎಸ್.ಪಿ ಮತ್ತು ಇತರ ಸಣ್ಣ ಪಕ್ಷಗಳ ಬೆಂಬಲವನ್ನು ಪಡೆಯುವುದು ಹಾಗೂ 'ಆಪರೇಶನ್ ಕಮಲ', ಇತರ ಅಕ್ರಮಗಳ ಮೂಲಕ ಬಿಜೆಪಿ ಅಧಿಕಾರಕ್ಕೆ ಮತ್ತೆ ಬರುವುದು ಅಸಂಭವವೇನಲ್ಲ. ಆದರೆ ಇದು ಬಿಜೆಪಿಗೆ ಮುಳುವಾಗಬಹುದು. ಆದರೆ 'ಐಡೆಂಟಿಟಿ ರಾಜಕೀಯ'ದ ಸೀಮಿತತೆ ಬಯಲಾಗುವುದು ಅಥವಾ ಅದು ಕನಿಷ್ಟ ದುರ್ಬಲವಾಗುವುದು ಮತ್ತು ಸಾಮಾಜಿಕ ಆರ್ಥಿಕ ವಿಷಯಗಳು ಮುನ್ನೆಲೆಗೆ ಬರುವ ಸೂಚನೆಯನ್ನು ಯುಪಿ ಚುನಾವಣೆ ಕೊಟ್ಟರೆ ಅದೂ ರಾಷ್ಟ್ರೀಯ ರಾಜಕಾರಣವನ್ನು ಸಕಾರಾತ್ಮಕ ದಿಕ್ಕಿನಲ್ಲಿ ಬದಲಾಯಿಸುವ ಸಾಧ್ಯತೆಯಂತೂ ಇದೆ.



ನೀತಿ ಆಯೋಗದ ಆರೋಗ್ಯ ಸೂಚ್ಯಂಕ: ಉತ್ತರ ಪ್ರದೇಶ ಅತೀ ಕೆಳಗೆ: ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಜನರ ಹಿತಾಸಕ್ತಿಗಳಿಗೆ ವಿಶ್ವಾಸದ್ರೋಹ

ಪುಟ 8 ರಿಂದ

ಮೇಲ್ನೋಟಕ್ಕೆ ತುಸು ಹೆಚ್ಚಳವನ್ನು ತೋರಿಸುತ್ತದೆ ಆದರೆ ಹಣದುಬ್ಬರವನ್ನು ಪರಿಗಣನೆಗೆ ತಗೊಂಡರೆ ನಿಜ ಮೌಲ್ಯದಲ್ಲಿ ಕಡಿಮೆಯಾಗಿದೆ. ಅದೇ ರೀತಿ, ಮಧ್ಯಾಹ್ನದ ಊಟದ ಯೋಜನೆಯನ್ನು ಪಿಎಂ ಪೋಶನ್ ಎಂದು ಮರುನಾಮಕರಣ ಮಾಡುವುದರಿಂದ ಬಜೆಟ್ ಹಂಚಿಕೆ ರೂ.10,234 ಕೋಟಿಗಿಂತ ಹೆಚ್ಚೇನೂ ಆಗಿಲ್ಲ. ಕಳೆದ ವರ್ಷದಲ್ಲಿ ಶೇಕಡಾ 35 ರಷ್ಟು ಮಕ್ಕಳು ಮಧ್ಯಾಹ್ನದ ಊಟವನ್ನು ಪಡೆಯಲಿಲ್ಲ. ನಾರಿಶಕ್ತಿ 2 ಲಕ್ಷ ಅಂಗನವಾಡಿಗಳನ್ನು ಮೇಲ್ದರ್ಜೆಗೇರಿಸುವುದಾಗಿ ಹೇಳಿದ ಹಣಕಾಸು ಸಚಿವರು, ಅದಕ್ಕೆ ಹಂಚಿಕೆಯನ್ನು ಮಾತ್ರ ಕಳೆದ ಪರಿಷ್ಕೃತ ಅಂದಾಜಿನ 20,000 ಕೋಟಿ ರೂ.ಗಳಲ್ಲೇ ಸ್ಥಗಿತಗೊಳಿಸಿದ್ದಾರೆ..

ಕಳೆದ ಎರಡು ವರ್ಷಗಳಿಂದ ಎಲ್‌ಪಿಜಿ ಸಬ್ಸಿಡಿಯಲ್ಲಿ ಭಾರಿ ಕಡಿತ ಮಾಡಲಾಗಿದೆ. ಕಳೆದ ವರ್ಷ, ಹಂಚಿಕೆಯನ್ನು 60 ಪ್ರತಿಶತದಷ್ಟು ಕಡಿತಗೊಳಿಸಲಾಯಿತು ಮತ್ತು 2022–23 ರ ಬಜೆಟ್‌ನಲ್ಲಿ ಮತ್ತೆ ಶೇಕಡಾ 60 ರಷ್ಟು ಕಡಿತವನ್ನು ವಿಧಿಸಲಾಗಿದೆ. ಇ–ಶ್ರಮ್ ಪೋರ್ಟಲ್‌ಗಳ ಮೂಲಕ ನೋಂದಾಯಿಸಲ್ಪಟ್ಟ ಅಸಂಘಟಿತ ಕಾರ್ಮಿಕರಿಗೆ ಯಾವುದೇ ಹೊಸ ಬಜೆಟ್ ಹಂಚಿಕೆಯನ್ನು ಮಾಡಲಾಗಿಲ್ಲ.

ಕಳೆದ ಎರಡು ವರ್ಷಗಳ ಮಹಾಸೋಂಕಿನ ಸಮಯದಲ್ಲಿ, ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಿದ್ದಾರೆ. ಆಕ್ಸ್‌ಫ್ಯಾಮ್ ಪ್ರಕಾರ, ಭಾರತದ ಶ್ರೀಮಂತ ಕುಟುಂಬಗಳ ಸಂಪತ್ತು 2021 ರಲ್ಲಿ ದಾಖಲೆಯ ಎತ್ತರವನ್ನು ತಲುಪಿದೆ. ಭಾರತದಲ್ಲಿ ಅಗ್ರ ಹತ್ತು ಮಂದಿ ಸಂಪತ್ತಿನ ಶೇಕಡಾ 57 ರಷ್ಟು ಹೊಂದಿದ್ದಾರೆ. ಆದರೂ, ಈ ಸೂಪರ್ ಲಾಭಗಳ ಮೇಲೆ ತೆರಿಗೆ ವಿಧಿಸುವ ಮತ್ತು ಈ ಸಂಪನ್ಮೂಲಗಳನ್ನು ಬಹುಪಾಲು ಬಳಲುತ್ತಿರುವ ಜನರಿಗೆ ಪರಿಹಾರವನ್ನು ಒದಗಿಸಲು ಬಳಸುವ ಯಾವುದೇ ಪ್ರಸ್ತಾಪವಿಲ್ಲ.

ಆದ್ದರಿಂದ, 2022–23 ರ ಬಜೆಟ್ ಸಾಮಾನ್ಯ ಜನರಿಗೆ ಪರಿಹಾರವನ್ನು ಒದಗಿಸುವ ಆದ್ಯತೆಗಳನ್ನು ಗುರುತಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇದೊಂದು ವಿಶ್ವಾಸದ್ರೋಹ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ.

ಗ್ರಾಮೀಣ ಭಾರತದ ಬುಡಮಟ್ಟದ ವಾಸ್ತವತೆಯನ್ನು ನಿರ್ಲಕ್ಷಿಸಿರುವ ಬಜೆಟ್–ಎಐಎಡಬ್ಲ್ಯುಯು

ಹಣಕಾಸು ಸಚಿವರು ಮಂಡಿಸಿದ ಕೇಂದ್ರ ಬಜೆಟ್‌ನಿಂದ ಗ್ರಾಮೀಣ ಬಡವರು, ದಲಿತರು, ಆದಿವಾಸಿಗಳು ಮತ್ತು ಮಹಿಳೆಯರು ಸಂಪೂರ್ಣವಾಗಿ ನಾಪತ್ತೆಯಾಗಿದ್ದಾರೆ ಎಂದು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ (ಎಐಎಡಬ್ಲ್ಯುಯು)ದ ಕೇಂದ್ರ ಕಾರ್ಯಕಾರಿ ಸಮಿತಿಯು ಖೇದ ವ್ಯಕ್ತಪಡಿಸಿದೆ. ಇದು ನಿರುದ್ಯೋಗದ ದೊಡ್ಡ ಸಮಸ್ಯೆಯನ್ನು ನಿರ್ಲಕ್ಷಿಸಿರುವ ಮತ್ತು ಕಾರ್ಪೊರೇಟ್‌ಗಳಿಗೆ ಹೆಚ್ಚಿನ ರಿಯಾಯಿತಿಗಳನ್ನು ನೀಡುತ್ತಿರುವ ಜನ ವಿರೋಧಿ ಮತ್ತು ಕಾರ್ಪೊರೇಟ್‌ಗಳ ಪರವಾದ ಬಜೆಟ್‌ಎಂದು ಅದು ವರ್ಣಿಸಿದೆ.

2022–23 ರ ಪ್ರಸ್ತುತ ಬಜೆಟ್ ಸಮಾಜದ ಬಡ ವರ್ಗಗಳ ಆದಾಯಗಳು ಮತ್ತು ಜೀವನಾಧಾರಗಳಲ್ಲಿ ಮತ್ತಷ್ಟು ಕಡಿತ ತರುವ ಇನ್ನೊಂದು ಹೆಜ್ಜೆಯಾಗಿದೆ. ಏಕೆಂದರೆ ಬಜೆಟ್‌ನಲ್ಲಿ ಮನರೇಗಕ್ಕಾಗಿ ಹಂಚಿಕೆಯಲ್ಲಿ 25.5% ರಷ್ಟು ಕಡಿತ ಮಾಡಲಾಗಿದೆ. ಇದು ರೂ. 73000 ಕೋಟಿಯಲ್ಲೇ ನಿಂತಿದೆ. ಕಳೆದ ವರ್ಷ ಇದು 2020–21ರಲ್ಲಿ ಸಾಂಕ್ರಾಮಿಕ ರೋಗದ ಮೊದಲ ಅಲೆಯ ಸಮಯದಲ್ಲಿ ನೀಡಿದ್ದಕ್ಕಿಂತ 41% ಕಡಿಮೆ.

ಇದರ ಪರಿಣಾಮವು ಕೆಳಕಂಡಂತಿದೆ:

ಈ ಬಜೆಟ್ ವೆಚ್ಚದ 20% ಹಿಂದಿನ ವರ್ಷದ ಬಾಕಿಗಳನ್ನು ತೀರಿಸಲಿಕ್ಕೇ ಹೋಗುತ್ತದೆ. ಏಕೆಂದರೆ ಇತ್ತೀಚಿನ ಅಧ್ಯಯನದ ಪ್ರಕಾರ 2021–22 ರ ನಿರೀಕ್ಷಿತ ಕೊರತೆಯು ರೂ 21000 ಕೋಟಿಗಳಿಗಿಂತ ಕಡಿಮೆಯಿಲ್ಲ. ಇದನ್ನು ಗಮನಕ್ಕೆ ತಗೊಂಡರೆ 2.64 ಲಕ್ಷ ಕೋಟಿಗಳಿಗಿಂತ ಕಡಿಮೆಯಿಲ್ಲದಂತೆ ಬಜೆಟ್ ಹಂಚಿಕೆ ಇರಬೇಕಾಗಿತ್ತು. ಅಂದರೆ ಸುಮಾರು 2 ಲಕ್ಷ ಕೋಟಿ ರೂ.ಗಳ ಬೃಹತ್ ಕೊರತೆ. ಕಳೆದ ಅಕ್ಟೋಬರ್‌ನಲ್ಲಿ ದೇಶದ ಹಲವು ರಾಜ್ಯಗಳಲ್ಲಿ ಮನರೇಗ ಸ್ಥಗಿತಗೊಂಡಾಗ ಎಂತಹ ದುಷ್ಪರಿಣಾಮಗಳಾಗುತ್ತವೆ ಎಂಬುದನ್ನು ದೇಶ ಈಗಾಗಲೇ ನೋಡಿದೆ.

ನಿಧಿಯ ಕೊರತೆಯಿಂದಾಗಿ ಈ ವರ್ಷ ಮನರೇಗಕ್ಕೆ ಹಣಕಾಸು ಇನ್ನಷ್ಟು ತ್ವರಿತವಾಗಿ ಖಾಲಿಯಾಗಲಿದೆ. ನಿರುದ್ಯೋಗವು ಗ್ರಾಮೀಣ ಪ್ರದೇಶಗಳನ್ನು ಹಿಂದೆಂದಿಗಿಂತಲೂ ಅಪ್ಪಳಿಸುತ್ತದೆ ಎಂಬುದು ಇದರಿಂದ ಸ್ಪಷ್ಟ.

ಆಹಾರ ಸಬ್ಸಿಡಿಯನ್ನು 2021–22 ನೇ ಸಾಲಿನ ಪರಿಷ್ಕೃತ ಬಜೆಟ್ ನ ರೂ.286269 ಕೋಟಿಯಿಂದ ಪ್ರಸ್ತುತ ಬಜೆಟ್‌ನಲ್ಲಿ ರೂ.206831 ಕೋಟಿಗೆ ಇಳಿಸಿರುವುದರಿಂದ, ಅಂದರೆ 27% ರಷ್ಟು ಕಡಿಮೆಗೊಳಿಸಿರುವುದರಿಂದ ಆಹಾರ ಸೇವನೆಯ ಮೇಲೆ ಇದರ ಪರಿಣಾಮವು ಬಹಳ ತೀಕ್ಷ್ಣವಾಗಿರುತ್ತದೆ. ಭಾರತವು ಈಗಾಗಲೇ ಹಸಿವಿನ ಸೂಚ್ಯಂಕದಲ್ಲಿ 101 ನೇ ಸ್ಥಾನದಲ್ಲಿದೆ. ಈ ಬಜೆಟ್ ಹಂಚಿಕೆಯನ್ನು ದ್ವಿಗುಣಗೊಳಿಸದಿದ್ದರೆ ಅಥವಾ ಸರ್ಕಾರವು ಕನಿಷ್ಠ ವೆಚ್ಚವನ್ನು ದ್ವಿಗುಣಗೊಳಿಸದ ಹೊರತು ಹಸಿವು ಕೆಲವೇ ತಿಂಗಳುಗಳಲ್ಲಿ ನಮ್ಮ ಹಳ್ಳಿಗಳನ್ನು ಕಾಡಲಿದೆ. ಈಗಾಗಲೇ 20% ಅತೀಬಡವಿಭಾಗದ ಜನಗಳ ಆದಾಯಗಳಲ್ಲಿ 53% ಇಳಿಕೆಯಾಗಿದೆ. ಆದ್ದರಿಂದ ಯಾವುದೇ ಕಾರಣವಿಲ್ಲದೆ ಎಫ್‌ಸಿಐ ಗೆ ಹೊರೆಯಾಗುವ ಸಬ್ಸಿಡಿಗಳ ವೆಚ್ಚವನ್ನು ಕಡಿಮೆ ಮಾಡಲು ಸರ್ಕಾರವು ಬೃಹತ್ ಪ್ರಮಾಣದಲ್ಲಿ ಕೂಡಿಟ್ಟಿರುವ ಧಾನ್ಯಗಳು ಮತ್ತು ಆಹಾರ ದಾಸ್ತಾನುಗಳನ್ನು ಬಿಡುಗಡೆ ಮಾಡದೇ ಇದ್ದರೆ ನಿರುದ್ಯೋಗ ಮತ್ತು ಬೆಂಬಿಡದ ಹಸಿವು ಬುಡಮಟ್ಟದಲ್ಲಿ ಆಹಾರಧಾನ್ಯಗಳನ್ನು ಮತ್ತು ಸಂಪತ್ತನ್ನು ಉತ್ಪಾದಿಸುವವರ ಮೇಲೆ ಎರಗಲಿದೆ.

ಬಜೆಟ್‌ನ ಇತರ ಜನವಿರೋಧಿ ಅಂಶಗಳಲ್ಲದೆ, ಲಾಕ್‌ಡೌನ್ ನಂತರ ಗ್ರಾಮೀಣ ಭಾರತದಲ್ಲಿ ಕಾಣಬರುತ್ತಿರುವ ಬಡಮಟ್ಟದ ವಾಸ್ತವತೆಯನ್ನು ಅದು ನಿರ್ಲಕ್ಷಿಸಿದೆ. ಆರೋಗ್ಯ ಮತ್ತು ಸಮಾಜ ಕಲ್ಯಾಣ ಯೋಜನೆಗಳಿಗೆ ಮತ್ತು ಉದ್ಯೋಗಗಳನ್ನು ಒದಗಿಸುವುದಕ್ಕೆ ಹೆಚ್ಚು ಹಣ ಖರ್ಚು ಮಾಡುವುದು ಬಹಳ ಅಗತ್ಯವಿತ್ತು

ಕೇಂದ್ರ ಸರ್ಕಾರದ ಆದ್ಯತೆಯೇನೆಂಬುದು ಈ ಬಜೆಟಿನಿಂದ ಸ್ಪಷ್ಟವಾಗುತ್ತದೆ. ಒಂದು ಕಡೆ ಕಾರ್ಪೊರೇಟ್‌ಗಳಿಗೆ ರಿಯಾಯ್ತಿಗಳನ್ನು ಒದಗಿಸುವುದು ಮತ್ತು ಮನರೇಗ, ಆಹಾರ ಸಬ್ಸಿಡಿ, ಸಮಾಜ ಕಲ್ಯಾಣ ಯೋಜನೆಗಳು, ಶಿಕ್ಷಣ ಮತ್ತು ಆರೋಗ್ಯವಕ್ಕೆ ಹಣ ಹಂಚಿಕೆಗಳನ್ನು ಕಡಿತ ಮಾಡುವುದು.

ಕೇಂದ್ರ ಬಜೆಟ್ ಅಸಮಾನತೆ, ಬಡತನ, ನಿರುದ್ಯೋಗ ಮತ್ತು ಹಸಿವನ್ನು ಉಲ್ಬಣಗೊಳಿಸುತ್ತದೆ. ಈ ಬಜೆಟ್ ಅನ್ನು ವಿರೋಧಿಸಲು ಮತ್ತು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಸಂಪೂರ್ಣ ನಿರಾಸಕ್ತಿಯ ವಿರುದ್ಧ ಪ್ರತಿಭಟನಾ ಪ್ರದರ್ಶನವನ್ನು ಆಯೋಜಿಸಲು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯು ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ರೈತರ ಪ್ರತಿಭಟನೆಗೆ ಮೋದಿ ಸರ್ಕಾರದ ಪ್ರತೀಕಾರ–ಎಐಕೆಎಸ್

ಪುಟ 8 ರಿಂದ

ಹಂಚಿಕೆಯಲ್ಲಿ ಶೇ 25ರಷ್ಟು ಕಡಿತ ಮಾಡಲಾಗಿದೆ. ಈಗಾಗಲೇ ರಸಗೊಬ್ಬರದ ಬೆಲೆಗಳು ಏರುತ್ತಿರುವಾಗ, ಇದು ಉತ್ಪಾದಕತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಎಐಕೆಎಸ್ ಎಚ್ಚರಿಸಿದೆ.

ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಗೆ ಕಳೆದ ಬಜೆಟ್‌ನಲ್ಲಿ ರೂ.16,000 ಕೋಟಿಗಳಷ್ಟಿದ್ದ ಹಂಚಿಕೆಯನ್ನು ರೂ.15,500 ಕೋಟಿಗಳಿಗೆ ಇಳಿಸಲಾಗಿದೆ. ಪಿಎಂ–ಕಿಸಾನ್ ಗಾಗಿ ಹಂಚಿಕೆಯು ಮೂಲತಃ 2019 ರಲ್ಲಿ ಅದರ ಪ್ರಾರಂಭದಲ್ಲಿ ಘೋಷಿಸಿದ್ದಕ್ಕಿಂತ 9% ಕಡಿಮೆಯಾಗಿದೆ. 14 ಕೋಟಿ ರೈತ ಕುಟುಂಬಗಳು ಪ್ರಯೋಜನ ಪಡೆಯುತ್ತವೆ ಎಂದು ಹಿಂದೆ ಹೇಳಿದ್ದರೂ, ಅದನ್ನೀಗ 12.5 ಕೋಟಿ ಕುಟುಂಬಗಳಿಗೆ ಇಳಿಸಲಾಗಿದೆ. ತಲಾ ರೂ.6000 ಕೊಡಲು ರೂ.75000 ಕೋಟಿ ಬೇಕಾಗಿದ್ದರೆ, ನಿಗದಿಪಡಿಸಿರುವ ಹಂಚಿಕೆ ರೂ.68,000 ಕೋಟಿ. ಬೆಳೆ ಸಾಕಾಣಿಕೆಗೆ ಹಂಚಿಕೆಯನ್ನು ರೂ.26,000 ಕೋಟಿಗಳಷ್ಟು (18%); ಆಹಾರ ಸಂಗ್ರಹಣೆ ಮತ್ತು ಉಗ್ರಾಣಕ್ಕಾಗಿ ರೂ.84,000 ಕೋಟಿಗಳಷ್ಟು (28%) ಕಡಿತಗೊಳಿಸಲಾಗಿದೆ. ಪ್ರತಿ ಕೃಷಿಕ ಕುಟುಂಬದ ಸರಾಸರಿ ಮಾಸಿಕ ಆದಾಯ ಕೇವಲ ರೂ.10,218/– ಎಂದು ಆರ್ಥಿಕ ಸಮೀಕ್ಷೆಯು ಗಮನ ಸೆಳೆದಿತ್ತು. ಆದರೆ, ಒಬ್ಬ ವ್ಯಕ್ತಿಗೆ ಒಂದು ದಿನದ ಕೃಷಿಯಿಂದ ಬರುವ ಸರಾಸರಿ ಆದಾಯ ಕೇವಲ ರೂ.27/–. 7 ವರ್ಷಗಳ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ರೈತರ ಆದಾಯವನ್ನು ದ್ವಿಗುಣಗೊಳಿಸುವ ಬದಲು ಕುಗ್ಗಿಸಿದೆ.

ಮಹಾಸೋಂಕಿನ ಸಮಯದಲ್ಲಿ ಉದ್ಯೋಗಾವಕಾಶಗಳು ಕುಗ್ಗಿದಾಗ, ಒಉಓಖಇಉಂ ಮನರೇಗಾಕ್ಕೆ ಹಂಚಿಕೆಯನ್ನು ವಾಸ್ತವವಾಗಿ ಹೆಚ್ಚಿಸುವ ಬದಲು ಕಡಿತಗೊಳಿಸಲಾಗಿದೆ. 2021–22ರ ಪರಿಷ್ಕೃತ ಅಂದಾಜುಗಳು ರೂ.98,000 ಕೋಟಿಗಳಾಗಿದ್ದರೆ, ಈ ಬಜೆಟ್ ರೂ.73,000 ಕೋಟಿಗಳನ್ನು ಮಾತ್ರ ಮೀಸಲಿಟ್ಟಿದೆ. ಮನರೇಗ ಅಡಿಯಲ್ಲಿ ಪ್ರತಿಮನೆಗೆ 100 ದಿನಗಳ ಉದ್ಯೋಗ ಖಾತ್ರಿ ನೀಡಲು ಮತ್ತು ಸುಮಾರು ರೂ.21,000 ಕೋಟಿಗಳ ಬಾಕಿಯನ್ನು ತೆರವುಗೊಳಿಸಲು ಸೇರಿದಂತೆ ಸುಮಾರು ರೂ.2.64 ಲಕ್ಷ ಕೋಟಿಗಳ ಅಗತ್ಯವಿದೆ ಎಂದು ಇತ್ತೀಚಿನ ಅಧ್ಯಯನವು ಅಂದಾಜಿಸಿದೆ. ಆದರೆ ಬಿಜೆಪಿ ಸರ್ಕಾರಕ್ಕೆ ಬಡ ಕೃಷಿ ಕಾರ್ಮಿಕರು ಆದ್ಯತೆ ಅಲ್ಲ ಎಂಬುದು ಸ್ಪಷ್ಟ.

ಕೇಂದ್ರ ಬಜೆಟ್ ಅಸಮಾನತೆಗಳನ್ನು ಇನ್ನಷ್ಟು ವಿಸ್ತರಿಸುತ್ತದೆ, ಬಡತನ, ನಿರುದ್ಯೋಗ ಮತ್ತು ಹಸಿವನ್ನು ಹೆಚ್ಚಿಸುತ್ತದೆ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ ತನ್ನ ಎಲ್ಲಾ ಘಟಕಗಳಿಗೆ ಸಾಧ್ಯವಾದಷ್ಟು ವಿಶಾಲವಾದ ವಿಭಾಗಗಳೊಂದಿಗೆ ಒಗ್ಗೂಡಿ ಸಂವೇದನಾಹೀನ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ಪ್ರತಿಭಟಿಸಲು ಕರೆ ನೀಡಿದೆ

ಜಿಎಸ್‌ಟಿ ಸಂಗ್ರಹ ಬಹಳ ಚೆನ್ನಾಗಿ ಆಗಿದೆ ಎಂದು ಸಚಿವೆ ತನ್ನ ಭಾಷಣದಲ್ಲಿ ಹೇಳಿಕೊಂಡರೂ ಸಾಮಾಜಿಕ ವೆಚ್ಚದಲ್ಲಿ ಮಾಡಿರುವ ಏರಿಕೆ ಕೇವಲ 1%.

"ನೀವು ನಮಗೆ ತೆರಿಗೆ ಕೊಡಿ–ನಾವು ನಿಮಗೆ ಥ್ಯಾಂಕ್ಸ್ ಕೊಡುತ್ತೇವೆ"!



ವ್ಯಂಗ್ಯಚಿತ್ರ: ಮಂಜುಲ್, ನ್ಯೂಸ್ 9


ಕಾರ್ಪೊರೇಟ್ ಯಜಮಾನರುಗಳಿಗೆ ರಿಯಾಯ್ತಿಗಳ ಸುರಿಮಳೆಗಾಗಿ ತೆರಿಗೆ ಆಡಳಿತವನ್ನು ಸರಳೀಕರಿಸುವುದಾಗಿ ಹೇಳಿ ತೆರಿಗೆ ವಂಚನೆಗೆ ಪ್ರೋತ್ಸಾಹವನ್ನೇ ಕೊಡುತ್ತಿದೆ. ತೆರಿಗೆಗಳನ್ನು ಬಾಕಿ ಇಟ್ಟುಕೊಂಡಿರುವ ದೊಡ್ಡ ಬಂಡವಳಿಗರನ್ನು ಈ ಅಪರಾಧಕ್ಕಾಗಿ ಶಿಕ್ಷಿಸುವ ಬದಲು, ಮತ್ತೆ ಪ್ರೋತ್ಸಾಹಕಗಳೆಂದು 72041 ಕೋಟಿ ರೂ.ಗಳ ಭಾರೀ ರಿಯಾಯ್ತಿಗಳನ್ನು ಕೊಡಮಾಡಿದೆ.

ತಗೊಳ್ಳಿ ನೀರು..ನೀವು ಸುಸ್ತಾಗಿರಬಹುದು....




ವ್ಯಂಗ್ಯಚಿತ್ರ: ಕಪ್ತಾನ್, ಫೇಸ್‌ಬುಕ್

ಹಿಂಡಿರುವುದು ಕೇವಲ ಕೇಂದ್ರ ಸರ್ಕಾರದ ವೆಚ್ಚಗಳನ್ನಷ್ಟೇ ಅಲ್ಲ. ರಾಜ್ಯಗಳಿಗೆ ಸಂಪನ್ಮೂಲಗಳ ವರ್ಗಾವಣೆಯನ್ನು ಕೂಡ ಹಿಸುಕುವ ಮೂಲಕ, ರಾಜ್ಯ ಸರ್ಕಾರಗಳನ್ನು ಸಹ ಅದೇ ರೀತಿ ಮಾಡಲು ಒತ್ತಾಯಿಸಲಾಗುತ್ತಿದೆ. ಈ ವರ್ಗಾವಣೆಗಳು 2021–22 ರ ಪರಿಷ್ಕೃತ ಅಂದಾಜಿನಲ್ಲಿ ಜಿಡಿಪಿಯ 6.91% ಇದ್ದರೆ, 2022–23 ರ ಬಜೆಟಿನಲ್ಲಿ 6.25%ಕ್ಕೆ ಇಳಿಯುತ್ತವೆ.



ವ್ಯಂಗ್ಯಚಿತ್ರ:: ಪಿ.ಮಹಮ್ಮದ್, ವಾರ್ತಾಭಾರತಿ

ಮಂತ್ರಕ್ಕೆ ಮಾವಿನಕಾಯಿ ಉದುರಿಸುವ ಮಂತ್ರಿಣಿ ಇದು ಯಾರಿಗೆ ಅಮೃತಕಾಲವಮ್ಮಾ?



ಅಮೃತ ಕಾಲಕ್ಕೆ ಕಾಯಬೇಕಪ್ಪಾ! ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಈ ಬಜೆಟ್ ಈಗ ಸಾಯುತ್ತಿರುವವರಿಗೆ ನೀರೂ ಕೊಡಲು ತಯಾರಿಲ್ಲದೇ 25 ವರ್ಷಗಳ ನಂತರದ ಮುನ್ನೋಟದ ತುಪ್ಪ ಮೂಗಿಗೆ ಸವರಿ ಅಮೃತ ಕಾಲವೆಂದು ಕರೆದಿದೆ. ಅವರ ಈ ಸುಳ್ಳು ಇದು ಅನ್ಯತಕಾಲವೆಂದು ಸಾಬೀತು ಪಡಿಸಿದೆ.

– ಕೆ.ಎಸ್.ವಿಮಲ

ಸಾಮಾನ್ಯ ಜ್ಞಾನದಂತೆ ಆಯವ್ಯಯ ಎಂದರೆ ಮುಂದಿನ ಒಂದು ವರ್ಷದಲ್ಲಿ ಸರಕಾರವೊಂದು ನಿರೀಕ್ಷಿಸುವ ಆದಾಯ ಮತ್ತು ನಿಭಾಯಿಸಬೇಕಾದ ಖರ್ಚುಗಳು. ಖರ್ಚುಗಳನ್ನು ವಿವಿಧ ವಲಯ, ವಿಭಾಗಗಳಿಗೆ ಆದ್ಯತೆಯ ಮೇರೆಗೆ ಹಂಚುವ ಮತ್ತು ಹಾಗೆ ಹಂಚಲು ಬೇಕಾದ ಆದಾಯ ಅಥವಾ ರೆವಿನ್ಯೂ ಸಂಗ್ರಹಕ್ಕೆ ಮಾರ್ಗೋಪಾಯಗಳನ್ನು ಸೂಚಿಸುವ ಒಂದು ಸಾಂವಿಧಾನಿಕ ಕ್ರಿಯೆ. ಇತ್ತೀಚಿನ ವರ್ಷಗಳಲ್ಲಿ ಇದೊಂದು ಕಣ್ಕಟ್ಟಿನಂತೆ ನಡೆದು ಹೋಗುತ್ತಿದೆ. ಹಾಗಿದ್ದೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಜೆಟ್ ತನ್ನದೇ ಮಹತ್ವ ಹೊಂದಿದೆ.

ಕೊವಿಡ್ ಸಂಕಷ್ಟವನ್ನು ಮರೆತ ಅರ್ಥಮಂತ್ರಿಗಳು:

ಕಳೆದ ಎರಡು ವರ್ಷಗಳಿಂದ ದೇಶದ ದುಡಿದು ತಿನ್ನುವ ಜನ ಕೊವಿಡ್ ಸಂಕಷ್ಟದಲ್ಲಿ ಕಂಗಾಲಾಗಿದ್ದಾರೆ. ನಿರುದ್ಯೋಗ, ಬಡತನ ದಾರಿದ್ರ್ಯಗಳು ಈ ಮೊದಲೇ ಜನರನ್ನು ಸಂಕಷ್ಟಕ್ಕೆ ದೂಡಿದ್ದು ಗಾಯದ ಮೇಲೆ ಉಪ್ಪು ಸುರಿದಂತೆ ಕೊವಿಡ್ ಬಂದೆರಗಿತು. ಆದರೆ ಕಳೆದ ವರ್ಷವಾಗಲೀ ಈ ವರ್ಷವಾಗಲೀ ಕೇಂದ್ರ ಒಕ್ಕೂಟ ಸರಕಾರಕ್ಕೆ ಇದರ ಬಗ್ಗೆ ಕನಿಷ್ಟ ಕಾಳಜಿ ತೋರಿಸುವ ಮನಸ್ಸೂ ಇಲ್ಲ ಎಂಬುದನ್ನು ತಮ್ಮ ಪ್ರತಿ ನಡವಳಿಕೆಯಲ್ಲಿ ತೋರಿಸಿಕೊಟ್ಟರು. ಈ ಬಾರಿಯ ಬಜೆಟ್ ಮತ್ತೊಮ್ಮೆ ಅದನ್ನು ಸಾಬೀತು ಪಡಿಸಿದೆ.

ಮೂಲಸೌಕರ್ಯಗಳ ಅಭಿವೃದ್ದಿ, ಪ್ರಧಾನಮಂತ್ರಿ ಗತಿಶಕ್ತಿ ಎಂಬಿತ್ಯಾದಿ ನಾಮಕರಣ ಮಾಡಿ ಜನರ ಬದುಕುವ ಶಕ್ತಿಗೆ ಬೇಕಾದ ಪೂರಕ ಸೌಲಭ್ಯಗಳನ್ನು ವಂಚಿಸಿದ ಬಜೆಟ್ ಇದು ಎಂದು ಬಹುತೇಕ ಜನಮುಖೀ ಆಲೋಚನೆ ಮಾಡುವ ಎಲ್ಲರೂ ಹೇಳುತ್ತಿದ್ದಾರೆ. ಉದಾಹರಣೆಗೆ.. ಕಳೆದ ಸಾಲಿನ ಬಜೆಟ್ ನ ಪರಿಷ್ಕೃತ ಮೊತ್ತ ಜಿ.ಡಿ.ಪಿ.ಯ 16% ಇದ್ದುದನ್ನು ಈ ಬಾರಿಯ ಅಂದಾಜು ವೆಚ್ಚವನ್ನು ಮಂಡಿಸುವಾಗ 15.2%ಕ್ಕೆ ಇಳಿಸಲಾಗಿದೆ. ಸರಕಾರ ತನ್ನ ಅಂದಾಜು ವೆಚ್ಚದ ಪ್ರಸ್ತಾಪ ಮಂಡಿಸುವಾಗ ಕಳೆದ ವರ್ಷದ ಪರಿಷ್ಕೃತ ವೆಚ್ಚದ ಆಧಾರದಲ್ಲಿ ಮತ್ತು ದೇಶವಾಸಿಗಳ ಬದುಕಿನ ಅಗತ್ಯ ಮತ್ತು ವಾಸ್ತವ ಸನ್ನಿವೇಶವನ್ನು ಪರಿಗಣಿಸಿ ಅಂದಾಜು ಮಾಡಬೇಕಿತ್ತಲ್ಲವೇ?

ಹಸಿದವರಿಗೆ ಅನ್ನ ನೀಡದ ಬಜೆಟ್:

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತ ದಯನೀಯ ಸ್ಥಿತಿಗೆ ಕುಸಿದಿದೆ. ಅದನ್ನು ಸರಿಪಡಿಸಬೇಕೆಂದರೆ ಜನರ ಜೀವನಾಗತ್ಯ ವಸ್ತುಗಳನ್ನು ಸಕಾಲದಲ್ಲಿ ಸಮರ್ಪಕವಾಗಿ ಪೂರೈಸಬೇಕಲ್ಲದೇ ಅನ್ಯ ಮಾರ್ಗವೇ ಇಲ್ಲ. ಆದರೆ ಕಾಲ್ಪನಿಕ ಅಮೃತಕಾಲದಲ್ಲಿ ವಿಹರಿಸುತ್ತಿರುವ ಸರಕಾರ ಆಹಾರ ಪದಾರ್ಥಗಳ ಮೇಲಿನ ಸಬ್ಸಿಡಿಯನ್ನು 16% ಕಡಿತಗೊಳಿಸಿದೆ.

ದೇಶದ ಜನರ ಸ್ಥಿತಿ ಕೊವಿಡ್ ದುರವಸ್ಥೆಯಿಂದ ಇನ್ನೂ ಉತ್ತಮಗೊಂಡಿಲ್ಲ. ಸಣ್ಣ ಉದ್ಯಮಗಳು ನೆಲ ಕಚ್ಚಿದ್ದು ಅದನ್ನೇ ಅವಲಂಭಿಸಿರುವ ಲಕ್ಷಾಂತರ ಜನ ಬೀದಿಪಾಲಾಗಿದ್ದಾರೆ. ಈ ಅವಧಿಯಲ್ಲಿ ಜನರ ಕನಿಷ್ಟ ಆಹಾರದ ಅಗತ್ಯವನ್ನು ಪೂರೈಸುವ ಮಾನವೀಯತೆಯನ್ನೂ ಮರೆತ ವಿತ್ತ ಮಂತ್ರಿಗಳು ಈ ಹಿಂದಿನ ಬಜೆಟ್ ಗೆ ಹೋಲಿಸಿದರೆ 80000 ಕೋಟಿ ರೂ. ಕಡಿತ ಮಾಡಿದ್ದಾರೆ. ನಿಜವೆಂದರೆ ಬಡವರಿಗೆ ಕನಿಷ್ಟ ಗಂಜಿ ಒದಗಿಸುವಲ್ಲಿ ಸಹಕಾರಿಯಾಗಿದ್ದ ಉಚಿತ ಪಡಿತರ ವಿತರಣೆಯ ವಿಭಾಗವನ್ನು ವಿಸ್ತರಿಸಿ ಅದಕ್ಕಿನ್ನಷ್ಟು ಅಗತ್ಯ ವಸ್ತುಗಳನ್ನು ಸೇರಿಸಿ ಪೂರೈಸಲು ಹೆಚ್ಚುವರಿ ಹಣ ನೀಡಬೇಕಾಗಿತ್ತು. ಈಗ ಕೊಟ್ಟಿರುವ 2.06 ಲಕ್ಷ ಕೋಟಿಗಳು ಆಹಾರ ಸುರಕ್ಷಾ ಕಾನೂನಿನ ಅಡಿಯಲ್ಲಿ ಬರುವ ಕುಟುಂಬಗಳ ಅಗತ್ಯಕ್ಕಷ್ಟೇ ಸಾಕಾಗಲಿದೆ. ಎಂದರೆ ಮಾರ್ಚ 2022ಕ್ಕೆ ಅಂತ್ಯಗೊಳ್ಳುವ ಗರೀಬ್ ಕಲ್ಯಾಣ ಅನ್ನ ಯೋಜನೆ ಮತ್ತೆ ಮುಂದುವರೆಯಲಾರದು. ಇದು ಸಚಿವೆ ನಿರ್ಮಲಾ ಸೀತಾರಾಮನ್ ರವರ ಅಮೃತಕಾಲ.

ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನು:

ಇದು ಕೇವಲ ಮರುವಲಸಿಗ ಅಥವಾ ಹಳ್ಳಿಗಾಡಿನ ಜನರಿಗೆ ಬದುಕು ಕೊಟ್ಟಿದ್ದು ಮಾತ್ರವಲ್ಲ ಬದಲಿಗೆ ಗ್ರಾಮೀಣ ಪ್ರದೇಶದಲ್ಲಿ ಸಾರ್ವಜನಿಕ ಸ್ವತ್ತುಗಳ ನಿರ್ಮಾಣಕ್ಕೆ ಸಹಾಯವಾಯಿತು. ಯಾವುದೇ ಜೀವಪರ ಸರಕಾರವಿದ್ದರೆ ಅದು ಈ ಯೋಜನೆಯನ್ನು ಬಜೆಟ್ ಮೂಲಕ ಇನ್ನಷ್ಟು ಬಲ ಪಡಿಸಿ ಗ್ರಾಮಭಾರತದ ನಿಜವಾದ ಅಭಿವೃದ್ದಿಗೆ ತನ್ನ ಕೊಡುಗೆ ನೀಡುತ್ತಿತ್ತು. ಮತ್ತು ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತಂದು ನಗರಗಳ ಬಡವರ ಬದುಕಿಗೆ ಬಲ ಕೊಡುತ್ತಿತ್ತು. ಮತ್ತು ನಗರಾಭಿವೃದ್ದಿಯ ಕೆಲಸಗಳನ್ನು, ತ್ವರಿತಗೊಳಿಸಲು ಉಪಯೋಗಿಸುತ್ತಿತ್ತು. ಆದರೆ ಈ ಸರಕಾರ ಕಳೆದ ಸಾಲಿಗಿಂತ 25000 ಕೋಟಿ ಕಡಿತ ಮಾಡಿದೆ. ಕಳೆದ ಬಾರಿ ಬಜೆಟ್ ನಲ್ಲಿ 78000 ಕೋಟಿ ಇಟ್ಟು ನಂತರದ ಅಗತ್ಯಕ್ಕಾಗಿ ಮತ್ತೆ 25000 ಕೋಟಿಯನ್ನು ಬಿಡುಗಡೆ ಮಾಡಿ, ಒಟ್ಟಾರೆಯಾಗಿ 93000 ಕೋಟಿ ನೀಡಲಾಗಿತ್ತು. ಕೆಲವು ವಿಶ್ಲೇಷಕರ ಪ್ರಕಾರ ಇದು 1.1ಲಕ್ಷ ಕೋಟಿಯನ್ನು ಮೀರಿತ್ತು ಎನ್ನಲಾಗಿದೆ. ಅಲ್ಲದೆಯೇ ಈ ಮೊತ್ತದಲ್ಲಿ ಕಳೆದ ವರ್ಷದ ಸಾಮಗ್ರಿಗಳ ಬಾಕಿ ಮತ್ತು ಕೂಲಿ ಪಾವತಿಯ ಬಾಕಿಗಳಿಗೇ ಸಾಕಷ್ಟು ಹಣ ವೆಚ್ಚವಾಗಲಿದೆ. ಸುಮಾರು 21000 ಕೋಟಿ ಹಿಂದಿನ ವರ್ಷದ ಬಾಕಿ ಪಾವತಿ ಮಾಡಲಿದೆ ಎನ್ನುತ್ತವೆ ದಾಖಲೆಗಳು. ಇದಕ್ಕೆ ಕಳೆದ ವರ್ಷದ ಬಜೆಟ್ ನಲ್ಲಿ ಕೂಡ ಅಗತ್ಯಕ್ಕಿಂತ 40% ಕಡಿತ ಮಾಡಿದ್ದೇ ಕಾರಣ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿ ಬಹುತೇಕ ಕೆಲಸ ಮಾಡುತ್ತಿರುವವರು ಮಹಿಳೆಯರು. ಮತ್ತು ಕುಟುಂಬದ ಆದಾಯ ಸೊರಗಿದ ತಕ್ಷಣ ಅದರ ನೇರ ಪರಿಣಾಮವನ್ನು ಮೊದಲು ಎದುರಿಸುವವರೂ ಮಹಿಳೆಯರು. ವಿತ್ತ ಮಂತ್ರಿಣಿಗೆ ಈ ಯಾವ ವಾಸ್ತವದ ಅರಿವೇ ಇಲ್ಲದೇ ಅಮೃತಕಾಲವೆಂದು ವರ್ಣಿಸಿಕೊಳ್ಳುತ್ತಿರುವುದೇ ಅವರೆಷ್ಟು ಜೀವವಿರೋಧಿಗಳು ಎಂಬುದನ್ನು ತೋರಿಸುತ್ತದೆ.

ಕುಸಿದ ರಾಷ್ಟ್ರೀಯ ಸಾಮಾಜಿಕ ಸುರಕ್ಷಾ ಯೋಜನೆಗಳ ವೆಚ್ಚ:

ಎಸ್.ಸಿ/ಎಸ್.ಟಿ, ಅಲ್ಪ ಸಂಖ್ಯಾತರು ಮತ್ತು ಅಂಚಿನ ಸಮುದಾಯಗಳ ಕಲ್ಯಾಣ ಯೋಜನೆಗಳಿಗೆ 2021–22ರಲ್ಲಿ ಕೊಟ್ಟ ಮೊತ್ತವನ್ನೂ ಕಡಿತಗೊಳಿಸಲಾಗಿದೆ. ಕಳೆದ ಬಾರಿಯ ಪರಿಷ್ಕೃತ ಮೊತ್ತವಾಗಿದ್ದ 3.2% ನಿಂದ 2.5%ಗೆ ಕಡಿತ ಮಾಡಲಾಗಿದೆ.

ಮಧ್ಯಾಹ್ನದ ಬಿಸಿಯೂಟದ ಯೋಜನೆಯನ್ನು ಪಿ.ಎಂ.ಪೋಷಣ್ ಅಭಿಯಾನ್ ಎಂದು ಮರು ನಾಮಕರಣ ಮಾಡಿದ್ದಷ್ಟೇ ಲಾಭವೇ ಹೊರತೂ ಅದಕ್ಕೆ ಅಗತ್ಯವಾದ ಪೂರಕ ಬಜೆಟ್ ಹೆಚ್ಚಳ ಮಾಡಿಲ್ಲ. ಹಾಗೆಯೇ ಸಕ್ಷಮ ಪೋಷಣ್2.0 ನಾಮಾಂಕಿತ ಯೋಜನೆ ಕೂಡ ಎಲ್ಲಿದೆಯೋ ಅಲ್ಲೇ ಉಳಿದಿದೆ.

ಹೊಸ ಹೊಸ ನಾಮಕರಣ ಮಾಡುವ ಈ ಯಾವ ಯೋಜನೆಗಳೂ ಅದರ ಫಲಾನುಭವಿಗಳು ಅಲ್ಲಿ ಶ್ರಮ ವಹಿಸಿ ದುಡಿಯುವ ಅಂಗನವಾಡಿ ನೌಕರರ ಏಳ್ಗೆಗಾಗಲಿ, ಅಥವಾ ಅಂಗನವಾಡಿ ಮಕ್ಕಳಿಗೆ ಒದಗಿಸುವ ಆಹಾರದ ಪ್ರಮಾಣ ಮತ್ತು ಗುಣಮಟ್ಟ ಹೆಚ್ಚಿಸಲಾಗಲಿ ಬಳಕೆಯಾಗುತ್ತಿಲ್ಲ. ಬದಲಿಗೆ 2 ಲಕ್ಷ ಹೈ ಟೆಕ್ ಅಂಗನವಾಡಿಗಳನ್ನು ಮಾಡುವರಂತೆ. ಹೊಟ್ಟೆಗೆ ಹಿಟ್ಟಿಲ್ಲದವರ ಜುಟ್ಟಿಗೆ ಮಲ್ಲಿಗೆ ಮುಡಿಸಿ ಅಣಕಿಸುವ ಈ ಪರಿಯನ್ನೇ ಅಮೃತಕಾಲವೆನ್ನೋಣವೇ?

ನೆಲೆ ಕಳೆದುಕೊಳ್ಳುತ್ತಿರುವ ಜೆಂಡರ್ ಬಜೆಟ್:

ಹಲವು ವರ್ಷಗಳ ನಿರಂತರ ಒತ್ತಡದ ಮೂಲಕ ಜಾರಿಗೆ ಬಂದ ಜೆಂಡರ್ ಬಜೆಟ್ ಎನ್ನುವ ಕಲ್ಪನೆಗೂ ಕೂಡ ಕೊಡಲಿ ಪೆಟ್ಟು ನೀಡಲಾಗುತ್ತಿದೆ. ಕಳೆದ ಸಾಲಿನಲ್ಲಿ ಜೆಂಡರ್ ಬಜೆಟಿಂಗ್ ನ ಪರಿಷ್ಕೃತ ಮೊತ್ತವು ಜಿ.ಡಿ.ಪಿಯ 0.71% ಆಗಿತ್ತು. ಅದರ ಆಧಾರದಲ್ಲಿ ಇನ್ನಷ್ಟು ಹೆಚ್ಚು ಮಾಡುವ ಬದಲು ಅದನ್ನು 0.66% ಗೆ ಇಳಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಸಚಿವಾಲಯಕ್ಕೆ 2022–23 ರ ಒಟ್ಟು ವೆಚ್ಚದ 0.10% ಒಳಗೇ ಸೀಮಿತಗೊಳಿಸಲಾಗಿದೆ. ಹೆಚ್ಚುತ್ತಿರುವ ಬಡತನ, ಉದ್ಯೋಗ ಕಡಿತ ಮತ್ತು ಆದಾಯ ಕುಸಿತದಿಂದ ನೇರ ಬಾಧೆಗೆ ಒಳಗಾಗುವ ಮಹಿಳೆಯರ ಕಲ್ಯಾಣಕ್ಕೆ ಮಹಿಳಾ ವಿತ್ತ ಮಂತ್ರಿಗಳಿಗೆ ಗಮನವಿದೆ ಎಂದು ಭಾವಿಸೋಣವೇ? ಮಿಷನ್ ಶಕ್ತಿ, ಸಾಮರ್ಥ್ಯ, ವಾತ್ಸಲ್ಯ ಮುಂತಾದ ಹೆಸರಿನ ಕಣ್ಕಟ್ಟುಗಳು ಪೂರಕ ಹಣಕಾಸಿನ ನೆರವಿಲ್ಲದೆಯೇ ಕಾರ್ಯನಿರ್ವಹಿಸಲಾರವು. ಮಹಿಳೆಯರ ಮೇಲೆ ನಡೆಯುತ್ತಿರುವ ಅನಿಯಂತ್ರಿತ ದೌರ್ಜನ್ಯಗಳೆದುರು, ಆದಾಯ ಕುಸಿತದಿಂದ ಜನರ ಆಹಾರ ಬಳಕೆಯಲ್ಲಿ ಗಣನೀಯ ಕುಸಿತವಾಗಿದ್ದು ರಕ್ತ ಹೀನತೆ, ಅಪೌಷ್ಟಿಕತೆಯಿಂದ ಬಳಲುತ್ತಿರುವಾಗ ಕೇವಲ ಮಂತ್ರಕ್ಕೆ ಮಾವಿನಕಾಯಿ ಉದುರಿಸುವ ಮಂತ್ರಿಣಿ ಇದು ಯಾರಿಗೆ ಅಮೃತಕಾಲವಮ್ಮಾ?

ಜಾಹಿರಾತಿಗೆ ಲಕ್ಷಾಂತರ ಜನರ ತೆರಿಗೆ ಹಣ ಲೂಟಿ:

ಮಹಿಳೆಯರ ಬದುಕು ಬಂಗಾರ ಮಾಡುವ ಉಜ್ವಲಾ ಯೋಜನೆಯ ಪ್ರಚಾರಕ್ಕೆ ಜನರ ತೆರಿಗೆ ಹಣವನ್ನು ಪೋಲು ಮಾಡಲಾಯಿತು. ಆದರೀಗ ಅದೇ ಎಲ್.ಪಿ.ಜಿ ಸಿಲಿಂಡರ್ ಸಬ್ಸಿಡಿಯನ್ನು ಯಾವ ದಯಾ ದಾಕ್ಷಿಣ್ಯ ಇಲ್ಲದೆಯೇ ಕಡಿತ ಮಾಡಲಾಗುತ್ತಿದೆ. ಕಳೆದ ಒಂದು ವರ್ಷದಲ್ಲಿ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಸುಮಾರು 200 ರೂಪಾಯಿಗಳಷ್ಟು ಏರಿಸಲಾಯಿತು. ಗ್ಯಾಸ್ ಸಬ್ಸಿಡಿಯನ್ನು ಈಗ ಮತ್ತಷ್ಟು ಕಡಿಮೆ ಮಾಡುವ ಪ್ರಸ್ತಾಪವಿದೆ. ಎಂದರೆ ಕ್ರಮೇಣ ಗ್ಯಾಸ್ ಸಬ್ಸಿಡಿಯನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಮನೆಯ ಬಜೆಟ್ ಹೊಂದಿಸಿಕೊಳ್ಳುವ ಗೃಹಿಣಿಗೆ ಇದು ಸುಡು ಬೆಂಕಿಯಾಗಿ ಸುಡಲಿದೆ.


ಆನ್‌ಲೈನ್ ಶಿಕ್ಷಣವೆಂಬ ಹಿಂಸೆ:

ಸಾಂಕ್ರಾಮಿಕದ ಕಾರಣದಿಂದ, ಅದನ್ನು ನಿಭಾಯಿಸುವಲ್ಲಿ ವೈಜ್ಞಾನಿಕ ಮತ್ತು ಸಮತೋಲಿತ ಮಾರ್ಗಗಳನ್ನು ಹುಡುಕದೇ, ಸಕಾಲಕ್ಕೆ ಸಮರ್ಪಕ

ಪುಟ 15 ನೋಡಿ



ಆದಾಯ ತೆರಿಗೆಯಲ್ಲಿ ಯಾವುದೇ ಬದಲಾವಣೆ ಇಲ್ಲ
ನಮಗೂ ಸ್ವಲ್ಪ ಅಮೃತ ಸಿಗಬಹುದೇ?
ವ್ಯಂಗ್ಯಚಿತ್ರ: ಇರ್ಫಾನ್, ನ್ಯೂಸ್‌ಕ್ಲಿಕ್



ವ್ಯಂಗ್ಯಚಿತ್ರ: ಪಿ. ಮಹಮ್ಮದ್, ವಾರ್ತಾಭಾರತಿ

ಬಜೆಟ್ 2022-23: ಇಬ್ಬರು ಅರ್ಥಶಾಸ್ತ್ರಜ್ಞರು ಕಂಡಂತೆ



ಜನರ ಯೋಗಕ್ಷೇಮ ಮತ್ತು ಜೀವನೋಪಾಯಕ್ಕೆ ನಿರ್ಣಾಯಕವಾಗುವ ಮತ್ತು ಅದರ ಮುಂದುವರಿಕೆಯ ಭಾಗವಾಗಿ, ಒಟ್ಟು ಬೇಡಿಕೆಯನ್ನು ಉನ್ನತಗೊಳಿಸುವ ಕೆಲವು ನಿರ್ಣಾಯಕ ವಲಯಗಳು ಈ ವರ್ಷದ ಬಜೆಟಿನಲ್ಲಿ ಮೊದಲಿಗಿಂತ ಕಡಿಮೆ ಹಣ–ಹಂಚಿಕೆ ಪಡೆದಿವೆ. ಜನಸಂಖ್ಯೆಯ ಬಹು ದೊಡ್ಡ ವಿಭಾಗವು ಕೊರೊನಾ ಉಂಟುಮಾಡಿದ ದುಷ್ಪರಿಣಾಮಗಳಿಂದ ಇನ್ನೂ ತತ್ತರಿಸುತ್ತಿದ್ದರೂ ಸಹ, ಬಜೆಟ್‌ನಲ್ಲಿ ಮಾಡಿರುವ ಈ ರೀತಿಯ ಹಂಚಿಕೆಗಳಲ್ಲಿನ ಇಳಿಕೆಗಳಿಂದಾಗಿ, ಕೋವಿಡ್–೧೯ರಿಂದ ಉದ್ಭವಿಸಿದ ಬಿಕ್ಕಟ್ಟನ್ನು ಪರಿಹರಿಸಲು ವಿಶೇಷ ಅಥವಾ ಹೆಚ್ಚುವರಿ ಖರ್ಚುವೆಚ್ಚಗಳು ಇನ್ನು ಮುಂದೆ ಅಗತ್ಯವಿಲ್ಲ ಎಂದು ಸರ್ಕಾರ ನಿರ್ಧರಿಸಿದಂತೆ ತೋರುತ್ತದೆ.**ಇದು ಈ ಸರಕಾರ ಅಜ್ಞಾನದಲ್ಲಿ ತೇಲುತ್ತಿದೆ ಎಂಬುದನ್ನು ತೋರಿಸುತ್ತದೆ ಎಂದು ಒಬ್ಬ ಪ್ರಸಿದ್ಧ ಅರ್ಥಶಾಸ್ತ್ರಜ್ಞೆ ಪ್ರೊ. ಜಯತಿ ಘೋಷ್** ಹೇಳಿದರೆ, **ಹಣಕಾಸು ನೀತಿ ಮತ್ತು ಬಜೆಟ್, ತನ್ನ ರಾಜಕೀಯ ಭವಿಷ್ಯವನ್ನು ಉತ್ತಮಗೊಳಿಸುವ ಸಾಧನಗಳಲ್ಲ ಎಂಬ ಸಂದೇಶವನ್ನು ಈ ಸರಕಾರ ಕೊಡುತ್ತಿರುವಂತೆ ಕಾಣುತ್ತದೆ ಎನ್ನುತ್ತಾರೆ ಇನ್ನೊಬ್ಬ ಪ್ರಸಿದ್ಧ ಅರ್ಥಶಾಸ್ತ್ರಜ್ಞರಾಧ ಡಾ. ಸಿ.ಪಿ. ಚಂದ್ರಶೇಖರ್** ಈ ವರ್ಷದ ಬಜೆಟ್ ಕುರಿತಂತೆ ಈ ಇಬ್ಬರು ಪರಿಣಿತರ ಲೇಖನಗಳ ಸಂಗ್ರಹಾನುವಾದವನ್ನು ಇಲ್ಲಿ ಕೊಡುತ್ತಿದ್ದೇವೆ.

ಅನುವಾದ: ಕೆ.ಎಂ.ನಾಗರಾಜ್

ಶುದ್ಧ ಅಜ್ಞಾನದ ಪ್ರದರ್ಶನ



ಪ್ರೊ. ಜಯತಿ ಘೋಷ್

ಅತ್ಯಂತ ವಿಕೃತ ಪ್ರಜಾಪ್ರಭುತ್ವಗಳನ್ನು ಬಿಟ್ಟರೆ, ಹರಕ್ಕೆ ಬಿದ್ದು ಮುಂದುವರಿಯುವ ಇಂತಹ ಒಂದು ವಿತ್ತೀಯ ಕಾರ್ಯತಂತ್ರವು ಯಾವುದೇ ಪ್ರಜಾಪ್ರಭುತ್ವವಾದಿ ದೇಶದಲ್ಲಿ ಇರಲುಂಟು ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಮಧ್ಯಮಾವಧಿಯಲ್ಲಿ ಇಂತಹ ಒಂದು ಲಜ್ಜೆಗೆಟ್ಟ ಅಸಮಾನ ವಿತ್ತ ನೀತಿಯು ಎಷ್ಟರಮಟ್ಟಿಗೆ ಕಾರ್ಯಸಾಧ್ಯ ಎಂಬುದನ್ನು ನೋಡಬೇಕಾಗಿದೆ.

ಹಣಕಾಸು ಮಂತ್ರಿಗಳು ಮತ್ತು ಅವರ ಸಚಿವಾಲಯ ಭಾರತದ ಅರ್ಥವ್ಯವಸ್ಥೆಯ ಬಗ್ಗೆಯಾಗಲಿ ಅಥವಾ ಇಂದಿನ ಭಾರತದ ಬಹಳಷ್ಟು ಮಂದಿ ಎಂತಹ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ ಎಂಬುದರ ಬಗ್ಗೆಯಾಗಲಿ ತಮಗೆ ತಿಳುವಳಿಕೆ ಇಲ್ಲವೆಂಬುದನ್ನು ಮತ್ತೊಮ್ಮೆ ಜಾಹೀರುಪಡಿಸಿದ್ದಾರೆ. ಅರ್ಥವ್ಯವಸ್ಥೆ ಚೇತರಿಸಿಕೊಳ್ಳುತ್ತಿದೆ ಎಂದು ಹೇಳುತ್ತಾರಾದರೂ, ಪರಿಸ್ಥಿತಿ ದುರ್ಬಲವಾಗಿದೆ ಮತ್ತು ಜನರು ಹೆಚ್ಚಿನ ಸಂಕಷ್ಟದಲ್ಲಿದ್ದಾರೆ.


ಭಾರತದಲ್ಲಿ ಬಡವರ ಮತ್ತು ಹಸಿದವರ ಸಂಖ್ಯೆಯು ಇತ್ತೀಚಿನ ವರ್ಷಗಳಲ್ಲಿ ಬಹು ದೊಡ್ಡ ಹೆಚ್ಚಳವನ್ನು ಕಂಡಿದೆ. ಜನಸಂಖ್ಯೆ ಹೆಚ್ಚಳದ ಲಾಭ ಪಡೆಯುವುದೆಂದು ಭಾವಿಸಿದ್ದ ದೇಶದ ಉದ್ಯೋಗ ಪರಿಸ್ಥಿತಿ ಭಯಾನಕವಾಗಿದೆ. ದೊಡ್ಡ ಕಾರ್ಪೊರೇಟ್‌ಗಳಿಗೆ ಭಾರೀ ಪ್ರೋತ್ಸಾಹಕಗಳನ್ನು ನೀಡಿದ್ದರ ಹೊರತಾಗಿಯೂ ಖಾಸಗಿ ಹೂಡಿಕೆಯು ನಿರಾಶಾದಾಯಕವಾಗಿಯೇ ಇದೆ. ಜನರ ಅಗತ್ಯಗಳಿಗಾಗಿ ಕೊರೊನಾ ಸಮಯದಲ್ಲಿಯೂ ಕೈಬಿಗಿ ಹಿಡಿದು ಮಾಡಿದ ಖರ್ಚುಗಳು ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆ ಎನ್ನುವಷ್ಟು ಅಸಮರ್ಪಕವಾಗಿವೆ. ಹಾಗಾಗಿ, ಈ ವಿಷಯದಲ್ಲಿ, ಮಧ್ಯಮ–ಆದಾಯ ದೇಶಗಳ ನಡುವೆಯೂ ಭಾರತವು ಹೊರಗುಳಿಯುತ್ತದೆ. ಪರಿಣಾಮವಾಗಿ, ಬಹುತೇಕ ಭಾರತೀಯರು, ಆರೋಗ್ಯ ಬಿಕ್ಕಟ್ಟಿನ ಮತ್ತು ಹದಗೆಟ್ಟ ಆರ್ಥಿಕ ಪರಿಸ್ಥಿತಿಯ ಅವಧಿಯಲ್ಲಿ ತಮ್ಮ ಮೂಲಭೂತ ಸಾಮಾಜಿಕ–ಆರ್ಥಿಕ ಹಕ್ಕುಗಳಿಂದ ಮತ್ತು ಅಗತ್ಯ ಸಾರ್ವಜನಿಕ ಸೇವೆಗಳಿಂದ ವಂಚಿತರಾದರು.

ಈ ಪರಿಸ್ಥಿತಿಗೆ ಕಾರಣವೆಂದರೆ, ಬೇಡಿಕೆಯ ಕೊರತೆಯೇ. ಈ ಎಲ್ಲ ಸಮಸ್ಯೆಗಳ ಮೂಲದಲ್ಲಿರುವುದು ಬೇಡಿಕೆಯ ಕೊರತೆಯೇ. ಕೊರೊನಾ ಹರಡುವ ಮುನ್ನವೇ ಜನರ ಬಳಕೆಯ ಪ್ರಮಾಣ ಕುಸಿದಿತ್ತು. ಬೇಡಿಕೆ ಕೊರತೆಯ ಈ ಮೂಲ ಸಮಸ್ಯೆಯು, ಉದ್ಯೋಗದ ಮತ್ತು ಜೀವನೋಪಾಯದ ಪರಿಸ್ಥಿತಿಗಳನ್ನು ಪ್ರತಿಬಿಂಬಿಸುತ್ತದೆ. ಭಾರತದ ಶ್ರಮಿಕ ಪಡೆಯ ಬಹು ದೊಡ್ಡ ಭಾಗವನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು ಕುಸಿಯುತ್ತಿವೆ. ಕೃಷಿಕರ ಸಂಕಷ್ಟಗಳು ಮುಂದುವರಿಯುತ್ತಿವೆ. ತಮ್ಮ ಭವಿಷ್ಯವನ್ನು ಉತ್ತಮಗೊಳಿಸುವ ಆಕಾಂಕ್ಷೆಯಿಂದ ಕಾಲೇಜು ಶಿಕ್ಷಣ ಪಡೆದ ಲಕ್ಷಾಂತರ ಯುವಜನರಿಗೆ ಉದ್ಯೋಗ ಸೃಷ್ಟಿಯಾಗುತ್ತಿಲ್ಲ. ಏತನ್ಮಧ್ಯೆ, ಜಜ್ಜಿ ಬಜ್ಜಿಯಾಗಿರುವ ಸಾರ್ವಜನಿಕ ಆರೋಗ್ಯ ಮತ್ತು ಶಿಕ್ಷಣ ಈ ಎರಡೂ ಸೇವೆಗಳ ಭವಿಷ್ಯದ ದಿಕ್ಪಥವು ಆತಂಕ ಮೂಡಿಸುತ್ತದೆ.

ಈ ಎಲ್ಲ ಸಮಸ್ಯೆಗಳ ಬಗ್ಗೆ ಹಣಕಾಸು ಸಚಿವರು ಅಸ್ಥೆ ವಹಿಸಿದ್ದರೆ, ನಾವು ಒಂದು ವಿಭಿನ್ನ ಬಜೆಟ್‌ಅನ್ನು ನೋಡುತ್ತಿದ್ದೆವು. ಈ ಬಜೆಟ್, ಎಂಎಸ್‌ಎಂಇ(ಅತಿ ಸಣ್ಣ, ಸಣ್ಣ ಮತ್ತು ಮಧ್ಯಗಾತ್ರದ ಉದ್ದಿಮೆ)ಗಳ ಪುನರುಜ್ಜೀವನ, ರೈತರ ಸಮಸ್ಯೆಗಳಿಗೆ ಪರಿಹಾರ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಗಮನಾರ್ಹ ವಿಸ್ತರಣೆ ಮತ್ತು ಅದೇ ಮಾದರಿಯಲ್ಲಿ ಒಂದ ಹೊಸದಾದ ನಗರ ಉದ್ಯೋಗ ಖಾತ್ರಿ ಯೋಜನೆಯ ಆರಂಭ, ವರ್ಷಗಟ್ಟಲೆ ತೀವ್ರ ನಿರ್ಲಕ್ಷ್ಯಕ್ಕೊಳಗಾದ ಜನರ ಸಾಮಾಜಿಕ ಚೇತರಿಕೆಗೆ ನೆರವಾಗುವಂತೆ ಆರೋಗ್ಯ ಮತ್ತು ಶಿಕ್ಷಣ ಇವುಗಳ ಬಗ್ಗೆ ಗಮನ ಹರಿಸುತ್ತಿತ್ತು. ಈ ವರ್ಷದ ಬಜೆಟ್‌ನಲ್ಲಿ ಇದಾವುದೂ ಇಲ್ಲ. ಜನರ ಯೋಗಕ್ಷೇಮ ಮತ್ತು ಜೀವನೋಪಾಯಕ್ಕೆ ನಿರ್ಣಾಯಕವಾಗುವ ಮತ್ತು ಅದರ ಮುಂದುವರಿಕೆಯ ಭಾಗವಾಗಿ, ಒಟ್ಟು ಬೇಡಿಕೆಯನ್ನು ಉನ್ನತಗೊಳಿಸುವ ಕೆಲವು ನಿರ್ಣಾಯಕ ವಲಯಗಳು ಮೊದಲಿಗಿಂತ ಕಡಿಮೆ ಹಣ–ಹಂಚಿಕೆ ಪಡೆದಿವೆ.

ಈ ಒಂದು ಘೋರ ಮತ್ತು ಭಯಾನಕ ನಿರ್ಲಕ್ಷದ ಸೂಚನೆಯೆಂದರೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ನಿಗದಿಪಡಿಸಿದ ಹಂಚಿಕೆಯ ಕಡಿತವೇ. ಕಾನೂನಿನ ಪ್ರಕಾರ ಇದೊಂದು ಬೇಡಿಕೆ–ಚಾಲಿತ ಯೋಜನೆಯಾಗಿದ್ದು, ಬೇಡಿಕೆಗೆ ತಕ್ಕಂತೆ ಹಣ ಒದಗಿಸುವುದು ಕೇಂದ್ರ ಸರ್ಕಾರದ ಕಾನೂನುಬದ್ಧ ಕರ್ತವ್ಯವಾಗುತ್ತದೆ. ಮುಂದುವರಿದ ಕೊರೊನಾ ಹಾವಳಿ ಮತ್ತು ಆದಾಯ ಗಳಿಸುವಲ್ಲಿ ಜನರಿಗೆ ಅನ್ಯ ಮಾರ್ಗಗವಿಲ್ಲದಿರುವಾಗ ಕೇಂದ್ರವು ಈ ಯೋಜನೆಗೆ ಒದಗಿಸುವ ಹಣವನ್ನು ಕಡಿತಗೊಳಿಸುವ ಮೂಲಕ ಈ ಯೋಜನೆಯನ್ನು ಮತ್ತು ಆ ಮೂಲಕ ಜನರನ್ನು ನಿತ್ರಾಣಗೊಳಿಸಿದೆ. ಪ್ರತಿ ವರ್ಷವೂ, ಬಜೆಟ್‌ನಲ್ಲಿ ಹಂಚಿಕೆಯಾದ ಹಣವು, ಈಗಾಗಲೇ ರಾಜ್ಯಗಳು ಮುಂಗಡವಾಗಿ ಮಾಡಿರುವ ಖರ್ಚನ್ನು

ಪುಟ 14 ನೋಡಿ



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಅಲ್ಲಿಯೂ ಸಲ್ಲದು ಇಲ್ಲಿಯೂ ಸಲ್ಲದು

ಡಾ. ಸಿ.ಪಿ. ಚಂದ್ರಶೇಖರ್



ಒಂದು ಅಸಾಧಾರಣ ಸನ್ನಿವೇಶದಲ್ಲಿ ಈ ಬಜೆಟ್ ಮಂಡನೆಯಾಗಿದೆ. ಎರಡು ವರ್ಷಗಳಿಂದ ಕಾಡುತ್ತಿರುವ ಕೊರೊನಾ ಹಿನ್ನೆಲೆಯಲ್ಲಿ ಮತ್ತು ವಿಶೇಷವಾಗಿ 2021ರ ಮಧ್ಯಭಾಗದಲ್ಲಿ ಅನಾವರಣಗೊಂಡ ಅದರ ಅಪಾಯಕಾರಿ ಅವತಾರದ ಉಪಟಳಗಳನ್ನು ಅನುಭವಿಸಿದ ನಂತರ ಉಂಟಾದ ಆರ್ಥಿಕ ನಷ್ಟವನ್ನು ಸರಿಪಡಿಸಿಕೊಳ್ಳುವ ಮತ್ತು ಲಾಕ್‌ಡೌನ್‌ಗಳಿಂದಾಗಿ ಅಪಾರ ಹಾನಿಗೊಳಗಾದವರಿಗೆ ತಮ್ಮ ಕಾಲ ಮೇಲೆ ತಾವು ನಿಲ್ಲುವಂತೆ ಸಹಾಯ ಮಾಡಬೇಕಾದ ಸಮಯವಿದು.

ಈಗ ದೇಶವನ್ನು ಕಾಡುತ್ತಿರುವ ಎರಡು ಗಂಭೀರ ಸಮಸ್ಯೆಗಳಾದ ನಿರುದ್ಯೋಗ ಮತ್ತು ಬಿಕ್ಕಟ್ಟಿಗೊಳಗಾದ ಕೃಷಿ ಮತ್ತು ಅನೌಪಚಾರಿಕ ವಲಯಗಳ ಮೇಲೆ ಸರ್ಕಾರವು ಗಮನ ಹರಿಸಬೇಕಿದೆ.

ತೊಂದರೆಗೀಡಾದ ಬಹುಸಂಖ್ಯಾತ ನಾಗರಿಕರ ನೆರವಿಗೆ ಹಣಕಾಸು ಮಧ್ಯಪ್ರವೇಶದ ಕ್ರಮಗಳು ನಿರ್ಣಾಯಕವಾಗುತ್ತವೆ ಎಂಬುದು ಈ ಸರಕಾರಕ್ಕೆ ಬೇಕಿಲ್ಲ. ಬೆರಳೆಣಿಕೆಯ ಮೇಲ್ವರ್ಗಗಳವರಿಗೆ ಅನುಕೂಲಗಳು ಮತ್ತು ಸಂಪತ್ತು-ವರಮಾನಗಳ ಅಸಮತೆಗಳ ಸೃಷ್ಟಿಯಿಂದಾಗಿ ಹದಗೆಡುತ್ತಿರುವ ಆರ್ಥಿಕ ಸಂಕಷ್ಟಗಳ ಬಗ್ಗೆ ನಿರ್ದಯ ನಿರ್ಲಕ್ಷ್ಯದಿಂದಾಗಿ ಜನರಲ್ಲಿ ಉಂಟಾಗುವ ಭಾವನೆಗಳ ಪರಿಣಾಮವನ್ನು ತಟಸ್ಥಗೊಳಿಸಲು ಒಂದು ಧ್ರುವೀಕರಣದ ಅಜೆಂಡಾ ಮಾತ್ರವೇ ಸಾಕಾಗುತ್ತದೆಯೇ ಎಂಬುದನ್ನು ನೋಡಬೇಕಾಗಿದೆ.



ವ್ಯಂಗ್ಯಚಿತ್ರ: ಮಂಜುಲ್

ಆದರೆ, ಈ ಉದ್ದೇಶಕ್ಕೆ ಅಗತ್ಯವಾದ ವಿತ್ತೀಯ ನೀತಿಯನ್ನು ಸರ್ಕಾರ ಕಡೆಗಣಿಸುತ್ತಿದೆ ಎಂಬುದನ್ನು ಅದರ ಖರ್ಚು–ವೆಚ್ಚಗಳಿಗೆ ಸಂಬಂಧಿಸಿದ ಅಂಕಿಸಂಖ್ಯೆಗಳು ಹೇಳುತ್ತವೆ.

2022–23ರಲ್ಲಿ ಸರ್ಕಾರದ ಒಟ್ಟು ವೆಚ್ಚವು (ಇಂದಿನ ಬೆಲೆಗಳ ಮಟ್ಟದಲ್ಲಿ) ಶೇ.4.6ರಷ್ಟು ಹೆಚ್ಚಳವಾಗಿ 39, 44,909 ಕೋಟಿ ರೂ.ಗಳಿಗೆ ಏರಲಿದೆ ಎಂದು ಅಂದಾಜಿಸಲಾಗಿದೆ. ಹಣದುಬ್ಬರಕ್ಕೆ ಹೊಂದಿಸಿದಾಗ ಇದು ಬಹುತೇಕ ಸ್ಥಗಿತತೆಯನ್ನು ಸೂಚಿಸುತ್ತದೆ.

ತಮ್ಮ ತಮ್ಮ ಊರುಗಳಿಗೆ ಮರಳಿದ ಲಕ್ಷ ಲಕ್ಷ ವಲಸೆ ಕಾರ್ಮಿಕರ ಜೀವ ಉಳಿಸಿದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ನಿಗದಿಪಡಿಸಿದ ಮೊತ್ತವನ್ನು ತೀವ್ರವಾಗಿ ಕಡಿತಗೊಳಿಸಲಾಗಿದೆ. 2022–23ರಲ್ಲಿ ಅದನ್ನು 73,000 ಕೋಟಿ ರೂಗಳಿಗೆ ಇಳಿಸಲಾಗಿದೆ. 2021–22 ರಲ್ಲಿ 98,000 ಕೋಟಿ ರೂ. ಮತ್ತು 2020–21 ರಲ್ಲಿ 1, 11,170 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿತ್ತು. ಹಾಗಾಗಿ, ನಿರುದ್ಯೋಗವು ವ್ಯಾಪಕವಾಗಿರುವ ಇಂದಿನ ಸಂದರ್ಭದಲ್ಲಿ, ಈ ಬಾಬ್ತು ನಿಗದಿಪಡಿಸಿರುವ ಮೊತ್ತವು ಅತ್ಯಲ್ಪವೇ.

ಆಹಾರ ಸಬ್ಸಿಡಿಗಳನ್ನೂ ಕಡಿತಮಾಡಲಾಗಿದೆ. 2020–21ರಲ್ಲಿ 4, 62,789 ಕೋಟಿ ರೂ.ಗಳಿದ್ದ ಆಹಾರ ಸಬ್ಸಿಡಿಗಳು 2022–23ರಲ್ಲಿ 1, 45,920 ಕೋಟಿ ರೂ.ಗಳಿಗೆ ತೀವ್ರವಾಗಿ ಇಳಿದಿವೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿಯಲ್ಲಿ ರಾಜ್ಯಗಳ ವಿಕೇಂದ್ರೀಕೃತ ಸಂಗ್ರಹಣೆಗಾಗಿ ಒದಗಿಸುವ ಸಬ್ಸಿಡಿಗಳನ್ನು ವರ್ಷದಿಂದ ವರ್ಷಕ್ಕೆ ಇಳಿಕೆ ಮಾಡಲಾಗುತ್ತಿದೆ – 2020–21ರಲ್ಲಿ 78,338 ಕೋಟಿ ರೂ.ಗಳಿಂದ 2021–22ರಲ್ಲಿ 75,290 ಕೋಟಿ ರೂ. ಗಳಿಗೆ ಮತ್ತು ಈಗ ಅದನ್ನು ಮತ್ತಷ್ಟು ಕಡಿತಗೊಳಿಸಿ 2022–23ನೇ ವರ್ಷದಲ್ಲಿ 60,651 ಕೋಟಿ ರೂ. ಗಳಿಗೆ ಇಳಿಸಲಾಗಿದೆ.

ಕೊರೊನಾ ಇನ್ನೂ ತೊಲಗಿಲ್ಲವಾದರೂ, ಜನರ ಆರೋಗ್ಯ ರಕ್ಷಣೆಗೆ ಅವಶ್ಯವಾದ ಆರೋಗ್ಯ ವಲಯದ ಮೇಲಿನ ವೆಚ್ಚವನ್ನು 2021–22ರ ವರ್ಷಕ್ಕೆ ಪರಿಷ್ಕೃತ ಅಂದಾಜು ಪ್ರಕಾರ ನಿಗದಿಪಡಿಸಿದ 1,24,345 ಕೋಟಿ ರೂ.ಗಳಿಂದ ಅದನ್ನು 2022–23ರ ಸಾಲಿಗೆ 1,13,458 ಕೋಟಿ ರೂ.ಗಳಿಗೆ ಇಳಿಸಲಾಗಿದೆ.

ಜನಸಂಖ್ಯೆಯ ಬಹು ದೊಡ್ಡ ವಿಭಾಗವು ಕೊರೊನಾ ಉಂಟುಮಾಡಿದ ದುಷ್ಪರಿಣಾಮಗಳಿಂದ ಇನ್ನೂ ತತ್ತರಿಸುತ್ತಿದ್ದರೂ ಸಹ, ಬಜೆಟ್‌ನಲ್ಲಿ ಮಾಡಿರುವ ಈ ರೀತಿಯ ಹಂಚಿಕೆಗಳಲ್ಲಿನ ಇಳಿಕೆಗಳಿಂದಾಗಿ, ಕೋವಿಡ್–19ರಿಂದ ಉದ್ಭವಿಸಿದ ಬಿಕ್ಕಟ್ಟನ್ನು ಪರಿಹರಿಸಲು ವಿಶೇಷ ಅಥವಾ ಹೆಚ್ಚುವರಿ ಖರ್ಚುವೆಚ್ಚಗಳು ಇನ್ನು ಮುಂದೆ ಅಗತ್ಯವಿಲ್ಲ ಎಂದು ಸರ್ಕಾರ ನಿರ್ಧರಿಸಿದಂತೆ ತೋರುತ್ತದೆ.

ಕೊರೊನಾದ ಪರಿಣಾಮಗಳನ್ನು ಎದುರಿಸಲು

ಪುಟ 14 ನೋಡಿ

ಚುನಾವಣೆಗಳಲ್ಲಿ ಬಿಜೆಪಿಯನ್ನು ಶಿಕ್ಷಿಸಿ–ಮತದಾರರಿಗೆ ಎಸ್‌ಕೆಎಂ ಅಪೀಲು

ಕಳೆದ ಡಿಸೆಂಬರಿನಲ್ಲಿ ರೈತರು ತಮ್ಮ ಚಳುವಳಿಯನ್ನು ಸ್ಥಗಿತಗೊಳಿಸಿದಾಗ ಕೇಂದ್ರ ಸರಕಾರ ನೀಡಿದ ಆಶ್ವಾಸನೆಗಳಲ್ಲಿ ಯಾವುದನ್ನೂ ಕೂಡ ಇನ್ನೂ ಈಡೇರಿಸಿಲ್ಲವಾದ್ದರಿಂದ ಈ ಚಳುವಳಿಗೆ ನೇತೃತ್ವ ನೀಡಿರುವ ಸಂಯುಕ್ತ ಕಿಸಾನ್ ಮೋರ್ಚಾ ರೈತ–ವಿರೋಧಿ ಬಿಜೆಪಿಗೆ ಮತ ನೀಡಬೇಡಿ ಎಂದು ಸದ್ಯದಲ್ಲೇ ವಿಧಾನಸಭಾ ಚುನಾವಣೆಗಳಿಗೆ ಮತದಾನ ನಡೆಲಿರುವ ರಾಜ್ಯಗಳ ಮತದಾರರಿಗೆ ಮನವಿ ಮಾಡಿಕೊಂಡಿದೆ.



ಫೆಬ್ರುವರಿ 3 ರಂದು ನವದೆಹಲಿಯಲ್ಲಿ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ಎಸ್‌ಕೆಎಂನ ಮುಖಂಡರು ಮನವಿ ಪತ್ರವನ್ನು ಬಿಡುಗಡೆ ಮಾಡುತ್ತ ಈ ವಿಷಯವನ್ನು ತಿಳಿಸಿದರು. ಕಳೆದ ವರ್ಷ ಜುಲೈನಲ್ಲಿ ಆರಂಭಿಸಿದ್ದ 'ಮಿಷನ್ ಉತ್ತರಪ್ರದೇಶ' ಕಾರ್ಯಕ್ರಮವನ್ನು ಮತ್ತೆ ಮುಂದುವರೆಸುತ್ತಿರುವುದಾಗಿ ಎಸ್‌ಕೆಎಂ ಮುಖಂಡರು ಹೇಳಿದರು. ಜನವರಿ 31ರಂದು ದೇಶಾದ್ಯಂತ 'ವಿಶ್ವಾಸಘಾತ ದಿನ'ದ ಪ್ರತಿಭಟನೆಗಳ ನಂತರ ಎಸ್‌ಕೆಎಂ ಈ ಕಾರ್ಯಕ್ರಮವನ್ನು ಪ್ರಕಟಿಸಿದೆ.

ವಿಧಾನಸಭಾ ಚುನಾವಣೆಗಳು ನಡೆಯಲಿರುವ 5 ರಾಜ್ಯಗಳಲ್ಲಿ ಉತ್ತರಪ್ರದೇಶ ಮತ್ತು ಪಂಜಾಬಿನ ರೈತರು ಚಳುವಳಿಯಲ್ಲಿ ದೊಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು ಎಂಬುದನ್ನು ನೆನಪಿಸಿಕೊಳ್ಳಬಹುದು.

ಎಸ್‌ಕೆಎಂಗೆ ಸೇರಿದ 57 ರೈತರ ಸಂಘಟನೆಗಳು ಪ್ರತಿ ಬ್ಲಾಕಿನಲ್ಲಿ, ಗ್ರಾಮದಲ್ಲಿ ಮತ್ತು ಜಿಲ್ಲೆಯಲ್ಲಿ ರೈತ ಸಂಘಟನೆಗಳು ಪ್ರಚಾರ ನಡೆಸುತ್ತವೆ, ಎಂದು ಎಸ್‌ಕೆಎಂ ಮುಖಂಡರು ಹೇಳಿದ್ದಾರೆ.

ಎಸ್‌ಕೆಎಂ ಈ ಹಳದಿ ಬಣ್ಣದ ಕರಪತ್ರವನ್ನು ಹಂಚಲಿದ್ದು ಅದರ ಶೀರ್ಷಿಕೆ **"ಈ ಚುನಾವಣೆಯಲ್ಲಿ ರೈತ–ವಿರೋಧಿ ಬಿಜೆಪಿಯನ್ನು ಶಿಕ್ಷಿಸಿ, ಸೋಲಿಸಿ"** ಎಂದಿರುತ್ತದೆ. ಚಳುವಳಿಯಲ್ಲಿ 700 ರೈತರ ಸಾವಿನಿಂದ ಹಿಡಿದು ಲಖಿಂ ಖೇರಿ ಹತ್ಯಾಕಾಂಡದ ವರೆಗೆ ಹಲವು ವಿಷಯಗಳನ್ನು ಪ್ರಸ್ತಾಪಿಸಲಾಗಿದೆ, ಜತೆಗೆ ಉತ್ತರಪ್ರದೇಶದ ರೈತರ ಸ್ಥಳೀಯ ಆಗ್ರಹಗಳ ಬಗ್ಗೆಯೂ ಇದೆ.

"ಬಿಜೆಪಿ ಸರಕಾರಕ್ಕೆ ಸತ್ಯ ಮತ್ತು ಸುಳ್ಳಿನ ಭಾಷೆ ಅರ್ಥವಾಗುವುದಿಲ್ಲ, ಒಳಿತು ಮತ್ತು ಕೆಡುಕಿನ ವ್ಯತ್ಯಾಸ ಅರ್ಥವಾಗುವುದಿಲ್ಲ. ಸಂವಿಧಾನಿಕ ಮತ್ತು ಅಸಂವಿಧಾನಿಕದ ನಡುವಿನ ವ್ಯತ್ಯಾಸ ತಿಳಿಯುವುದಿಲ್ಲ. ಈ ಪಕ್ಷಕ್ಕೆ ಒಂದೇ ಭಾಷೆ ಗೊತ್ತಿರುವುದು–ವೋಟು, ಸೀಟು ಮತ್ತು ಅಧಿಕಾರ" ಎಂದು ಈ ಕರಪತ್ರ ಹೇಳುತ್ತದೆ. ಚುನಾವಣೆಗಳ ಮೊದಲು ರೈತರ ಬೇಡಿಕೆಗಳನ್ನು ಆಗ್ರಹ ಪಡಿಸಲು ಒಂದು ದೊಡ್ಡ ಸಭೆಯನ್ನು ಎಸ್‌ಕೆಎಂ ನಡೆಸಲಿದೆ ಎಂದು ಮುಖಂಡರು ಹೇಳಿದರು.

ಹನ್ನನ್ ವೊಲ್ಲ, ದರ್ಶನ್‌ಪಾಲ್, ರಾಕೇಶ್ ಟಿಕಾಯ್ತ್, ಯೋಗೇಂದ್ರ ಯಾದವ್, ಜೊಗಿಂದರ್‌ಸಿಂಗ್ ಉಗ್ರಹಾನ್, ಶಿವಕುಮಾರ್ ಕಕ್ಕಾಜಿ ಮತ್ತು ಜಗಜಿತ್ ಸಿಂಗ್ ದಲ್ಲೇವಾಲ್ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದರು.

"ಇಂದು ನಾವು ಒಂದು ಪ್ರಶ್ನಾಪಟ್ಟಿಯನ್ನು ಬಿಡುಗಡೆ ಮಾಡುತ್ತಿದ್ದೇವೆ. ಉತ್ತರಪ್ರದೇಶದ ಮತದಾರರು ತಮ್ಮ ಬಳಿ ಮತಕೇಳಲು ಬಂದವರೆಲ್ಲರನ್ನೂ ಈ ಪ್ರಶ್ನೆಗಳನ್ನು ಕೇಳಿ ಉತ್ತರಪಡೆಯಬೇಕು" ಎಂದು ರಾಕೇಶ್ ಟಿಕಾಯ್ತ್ ಹೇಳಿದರು.

ಮುಂದಿನ ವಾರಗಳಲ್ಲಿ ಇಂತಹ ಪತ್ರಿಕಾಗೋಷ್ಠಿಯನ್ನು ಉತ್ತರಪ್ರದೇಶದ 9 ಸ್ಥಳಗಳಲ್ಲಿ, ಮೇರಠ್, ಮೊರಾದಾಬಾದ್, ಲಕ್ನೌ, ಕಾನ್ಪುರ್, ಝಾನ್ಸಿ, ಅಲಹಾಬಾದ್, ಸಿದ್ಧಾರ್ಥನಗರ, ಬನಾರಸ್ ಮತ್ತು ಗೊರಖ್ಪುರ್ ನಲ್ಲಿ ನಡೆಸಲಾಗುವುದು ಎಂದು ಎಸ್‌ಕೆಎಂ ಮುಖಂಡರು ಹೇಳಿದರು.

ಪುಟ 13 ರಿಂದ

ಶುದ್ಧ ಅಜ್ಞಾನದ ಪ್ರದರ್ಶನ

ಸರಿದೂಗಿವಷ್ಟೂ ಆಗುವುದಿಲ್ಲ ಮತ್ತು ಈ ಯೋಜನೆಗೆ ಒದಗಿಸುವ ಹಣವು ಪ್ರತಿ ವರ್ಷವೂ ಅಗತ್ಯಕ್ಕಿಂತ ಕಡಿಮೆಯೇ ಇರುತ್ತದೆ. ಲಾಕ್‌ಡೌನ್ ಪ್ರೇರಿತ ಬಿಕ್ಕಟ್ಟಿನ ತೀವ್ರತೆಯಿಂದಾಗಿ 2020–21ರ ಹಂಚಿಕೆಯಲ್ಲಿ ಸ್ವಲ್ಪ ಹೆಚ್ಚಳವಿತ್ತು, ನಿಜ. ಆದರೆ, ಅಗತ್ಯಕ್ಕೆ ಹೋಲಿಸಿದರೆ ಅದೂ ಅಸಮರ್ಪಕವೇ.

ಆಘಾತಕಾರಿ ಸಂಗತಿಯೆಂದರೆ, ಪ್ರಸಕ್ತ ಹಣಕಾಸು ವರ್ಷದಲ್ಲಿ, ರಾಜ್ಯಗಳ ಅಗತ್ಯವನ್ನು ಪೂರೈಸಲು ಕನಿಷ್ಠ 1,20,000 ಕೋಟಿ ರೂ.ಗಳ ಅಗತ್ಯವಿದೆ ಎಂಬ ಸ್ಪಷ್ಟ ಸೂಚನೆಗಳ ಹೊರತಾಗಿಯೂ ಸರ್ಕಾರವು ಈ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಮಾಡಿರುವ ಹಂಚಿಕೆಯನ್ನು 73,000 ಕೋಟಿ ರೂ.ಗಳಿಗೆ ಇಳಿಸಿದೆ. ಈ ಹಣದಲ್ಲಿ, ಹಿಂದಿನ ವರ್ಷದ ಬಾಕಿಯನ್ನು ತೀರಿಸಲು ಕನಿಷ್ಠ 20,000 ಕೋಟಿ ರೂ.ಗನ್ನು ತೆಗೆದಿಡಬೇಕಾಗುತ್ತದೆ. ಹಾಗಾಗಿ, ಉಳಿದ ಹಣದಲ್ಲಿ, ಪ್ರಸ್ತುತ ದರದಲ್ಲಿ, ಪ್ರತಿ ಮನೆಗೆ 20 ದಿನಗಳಿಗಿಂತ ಕಡಿಮೆ ಕೆಲಸ ಒದಗಿಸಬಹುದಷ್ಟೆ. ಈ ಕ್ರಮದ ಪರಿಣಾಮಗಳು ಯೋಜನೆಯ ಆಚೆಗೂ ಹೋಗುತ್ತವೆ: ಸ್ಥಳೀಯ ಸೂಕ್ಷ್ಮ ಉದ್ಯಮಗಳಿಗೆ ಕಿರುದೆರೆಗಳನ್ನು ಸೃಷ್ಟಿಸುವ ಪರಿಣಾಮಗಳನ್ನು ಹೊಂದಿರುವ ಈ ಯೋಜನೆಯು ಒಟ್ಟು ಬೇಡಿಕೆಯನ್ನು ಪುನರುಜ್ಜೀವನಗೊಳಿಸುವ ಒಂದು ಪ್ರಮುಖ ಮೂಲವಾಗಬಹುದು.

ಅದೇ ರೀತಿಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ವೆಚ್ಚಗಳಿಗೂ ಹೆಚ್ಚಳವಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಈ ವಿಷಯವು ಹೊಂದಿರುವ ಪ್ರಾಮುಖ್ಯತೆಯನ್ನು ಒಂದು ಅತ್ಯಂತ ಸಿನಿಕತನದ ಸರ್ಕಾರವೂ ಅರ್ಥಮಾಡಿಕೊಳ್ಳುತ್ತಿತ್ತು. ಕೊರೊನಾ ಸಮಯದಲ್ಲಿ ಕಲಿಕೆಯ ನಷ್ಟವನ್ನು ಸರಿದೂಗಿಸಲು ವಿಶ್ವದಾದ್ಯಂತ ಹೆಚ್ಚಿನ ದೇಶಗಳು ತಮ್ಮ ಶಿಕ್ಷಣ ವೆಚ್ಚವನ್ನು ಗಮನಾರ್ಹವಾಗಿ ಹೆಚ್ಚಿಸಿವೆ. ಭಾರತದಲ್ಲಿ ಶಾಲಾ ಕಾಲೇಜುಗಳನ್ನು ಹಠಾತ್ ಮತ್ತು ದೀರ್ಘಕಾಲದ ವರೆಗೆ ಮುಚ್ಚಿರುವುದು ವಿನಾಶಕಾರಿ ಪರಿಣಾಮ ಬೀರಿದೆ. ಆದರೂ, ಕೇಂದ್ರ ಸರ್ಕಾರವು ಕೊರೊನಾ ಸಮಯದಲ್ಲಿ ಶಿಕ್ಷಣ ವೆಚ್ಚವನ್ನು ಕಡಿತಗೊಳಿಸಿದೆ. ಈ ವರ್ಷದ ಬಜೆಟ್‌ನಲ್ಲಿ ಮಾಡಿರುವ ಅತ್ಯಲ್ಪ ಹೆಚ್ಚಳವು, ಅಗತ್ಯವನ್ನು ಪೂರೈಸುವಷ್ಟು ಹತ್ತಿರದಲ್ಲಿಲ್ಲ. ಬದಲಾಗಿ, ಬಜೆಟ್ ಭಾಷಣವು ಉತ್ತಮ ತರಬೇತಿ ಪಡೆದ ಸಾಕಷ್ಟು ಶಿಕ್ಷಕರೊಂದಿಗೆ ಕಾರ್ಯನಿರ್ವಹಿಸುವ ಶಾಲೆಗಳಿಗೆ ಬದಲಿಯಾಗಿ ಟಿವಿ ಚಾನೆಲ್‌ಗಳನ್ನು ಉತ್ತೇಜಿಸುತ್ತದೆ. ಹೆಚ್ಚಿನ ಜನರಿಗೆ ಬಹಳ ಅಗತ್ಯವಾದ ಮತ್ತು ನಿರ್ಣಾಯಕವಾದ ಈ ಕ್ಷೇತ್ರಗಳ ಬದಲಿಗೆ, ಈ ಬಜೆಟ್‌ನಲ್ಲಿ ಅಧಿಕ ಬಂಡವಾಳ ಹೂಡಿಕೆಯ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸಲಾಗಿದೆ ಎಂದು ಭಾವಿಸಲಾಗಿದೆ. ಇಂತಹ ಹೂಡಿಕೆಗಳು ಅಗತ್ಯವೆಂಬುದನ್ನು ಒಪ್ಪೋಣ. ಆದರೆ, ಈ ದೊಡ್ಡ ದೊಡ್ಡ ಮೂಲಸೌಕರ್ಯ ಯೋಜನೆಗಳೂ ಸಹ, ಗುತ್ತಿಗೆ ಪಡೆಯುವ ಸಾಮರ್ಥ್ಯವುಳ್ಳ ಕಂಪನಿಗಳಿಗೆ ಮಾತ್ರವೇ ತಕ್ಷಣ ಪ್ರಯೋಜನ ಕೊಡುತ್ತವೆ. ಈ ಗುತ್ತಿಗೆ ಪಡೆಯುವ ಸಂಭಾವನೆಯೂ ಇತ್ತೀಚಿನ ವರ್ಷಗಳಲ್ಲಿ ಸಾರ್ವಜನಿಕ ನೀತಿಗಳ ಮೂಲಕ ಈಗಾಗಲೇ ಮೇಲುಗೈ ಪಡೆದವರಿಗೆ ಮಾತ್ರವೇ.

ರಾಷ್ಟ್ರೀಯ ದುರಂತದ ಈ ಅವಧಿಯಲ್ಲೂ ಸಹ, ಬೆರಳೆಣಿಕೆಯಷ್ಟು ಮಂದಿ ಸಾಕಷ್ಟು ಸಂಪತ್ತು ಗಳಿಸಿದ್ದಾರೆ ಎಂಬುದನ್ನು ಮರೆಯುವಂತಿಲ್ಲ. ವಿಶ್ವ ಅಸಮಾನತೆ ವರದಿ 2022 ಮತ್ತು ಆಕ್ಸ್‌ಫಾಮ್‌ನ ಅಸಮಾನತೆ ವರದಿ 2022 ಈ ಎರಡು ಅಂದಾಜುಗಳ ಪ್ರಕಾರವೂ ಇತ್ತೀಚಿನ ವರ್ಷಗಳಲ್ಲಿ ವರಮಾನ ಮತ್ತು ಸಂಪತ್ತುಗಳ ಅಸಮಾನತೆಯಲ್ಲಿ ಭಾರತವು ಅತಿ ದೊಡ್ಡ ಹೆಚ್ಚಳವನ್ನು ಕಂಡಿದೆ. ಉದ್ಯೋಗ ಮತ್ತು ಒಟ್ಟು ಬಳಕೆಯಲ್ಲಿ ಕುಸಿತವಾಗಿರುವ ಒಂದು ಅರ್ಥವ್ಯವಸ್ಥೆಯಲ್ಲಿ, ಬೇಡಿಕೆಯ ಹೊಸ ಮೂಲಗಳನ್ನು ಕಂಡುಕೊಳ್ಳದ ಹೊರತು ಸವಲತ್ತುಗಳುಳ್ಳವರೂ ಸಹ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಮತ್ತು, ಈ ಪರಿಸ್ಥಿತಿಯಲ್ಲಿ, ಚುನಾವಣಾ ಬಾಂಡ್‌ಗಳ ಖರೀದಿದಾರರಿಗೆ ಲಾಭ ತರುವ ಒಂದು ತಕ್ಷಣದ ಮಾರ್ಗವನ್ನು ಸೃಷ್ಟಿಸಬಹುದಾದರೆ ಅದು ಹೆಚ್ಚಿನ ಮಟ್ಟದ ಬಂಡವಾಳ ಹೂಡಿಕೆಯಲ್ಲೇ.

ಅತ್ಯಂತ ವಿಕೃತ ಪ್ರಜಾಪ್ರಭುತ್ವಗಳನ್ನು ಬಿಟ್ಟರೆ, ಹಠಕ್ಕೆ ಬಿದ್ದು ಮುಂದುವರಿಯುವ ಇಂತಹ ಒಂದು ವಿತ್ತೀಯ ಕಾರ್ಯತಂತ್ರವು ಯಾವುದೇ ಪ್ರಜಾಪ್ರಭುತ್ವವಾದಿ ದೇಶದಲ್ಲಿ ಇರಲುಂಟು ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಮಧ್ಯಮಾವಧಿಯಲ್ಲಿ ಇಂತಹ ಒಂದು ಲಜ್ಜೆಗೆಟ್ಟ ಅಸಮಾನ ವಿತ್ತ ನೀತಿಯು ಎಷ್ಟರಮಟ್ಟಿಗೆ ಕಾರ್ಯಸಾಧ್ಯ ಎಂಬುದನ್ನು ನೋಡಬೇಕಾಗಿದೆ.



ಅಲ್ಲಿಯೂ ಸಲ್ಲದು ಇಲ್ಲಿಯೂ ಸಲ್ಲದು

ಪುಟ 13 ರಿಂದ

ಕೈಗೊಂಡ ಕೆಲವು ಸೀಮಿತ ಪ್ರಯತ್ನಗಳಿಂದಲೂ ಸರ್ಕಾರವು ಹಿಂದೆ ಸರಿಯುವ ಈ ಹುಡುಗಾಟಿಕೆಯು ಇಂತಹ ಉದ್ದೇಶಗಳಿಗೂ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವ ಮನಸ್ಸು ಅದಕ್ಕಿಲ್ಲ ಎಂಬುದನ್ನು ಬಯಲು ಮಾಡುತ್ತದೆ. ಕಾರ್ಪೊರೇಟ್ ತೆರಿಗೆಗಳನ್ನು ಹೆಚ್ಚಿಸಬಹುದಿತ್ತು. ಆದರೆ, ಕೊನೆಯ ಪಕ್ಷ, ಇತ್ತೀಚಿನ ವರ್ಷಗಳಲ್ಲಿ ಕಾರ್ಪೊರೇಟ್ ವಲಯಕ್ಕೆ ನೀಡಲಾದ ಅನೇಕ ನೇರ ತೆರಿಗೆ ರಿಯಾಯಿತಿಗಳನ್ನು ಈ ಉದ್ದೇಶಕ್ಕಾದರೂ ಹಿಂಪಡೆಯಲಾರದ ಈ ಸರ್ಕಾರವು ಇನ್ನು ಕಾರ್ಪೊರೇಟ್ ತೆರಿಗೆಗಳನ್ನು ಹೆಚ್ಚಿಸುವುದುಂಟೆ?

ಸಾರ್ವಜನಿಕ ಆಸ್ತಿಗಳ ಮಾರಾಟದಿಂದ 2021–22ರಲ್ಲಿ 1,75,000 ಕೋಟಿ ರೂ.ಗಳನ್ನು ಹಿಂಪಡೆಯುವ (ಬಜೆಟ್ ಸ್ವೀಕೃತಿಗಳು) ಬಜೆಟ್ ಅಂದಾಜಿಗೆ ಹೋಲಿಸಿದರೆ, ಪರಿಷ್ಕೃತ ಅಂದಾಜುಗಳು ಅದನ್ನು 78,000 ಕೋಟಿ ರೂ.ಗಳೆಂದು ಹೇಳುತ್ತವೆ. ಹಾಗಾಗಿ, ಈ ಬಾಬ್ತು ಸುಮಾರು 1,00,000 ಕೋಟಿ ರೂ.ಗಳ ಕೊರತೆಯಾಗುತ್ತದೆ.

ಈ ಕಠಿಣ ಪರಿಸ್ಥಿತಿಯಿಂದ ಬಚಾವಾಗಲು, ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಶೇಷ ಸುಂಕಗಳು ಮತ್ತು ಸೆಸ್‌ಗಳನ್ನು ಹೇರುತ್ತದೆ. ಅವುಗಳನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳುವುದಿಲ್ಲ.

ಬಂಡವಾಳ ವೆಚ್ಚಗಳ ಬಗ್ಗೆ ದೊಡ್ಡದಾಗಿ ಹೇಳಿಕೊಳ್ಳುವ ಹಣಕಾಸು ಸಚಿವರು ಅದರ ಸಂಗ್ರಹಣೆಯ ಒಂದು ದೊಡ್ಡ ಭಾಗವನ್ನೂ ಸಹ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯ ಮೂಲಕವೇ ಹೊಂದಿಸಿಕೊಳ್ಳುತ್ತಾರೆ. ಇದು ಜನ ಸಾಮಾನ್ಯರಿಗೆ ಹೊರಲಾರದ ಭಾರ ಮಾತ್ರವಲ್ಲ, ಹಣದುಬ್ಬರವನ್ನು ತೀವ್ರಗೊಳಿಸುತ್ತದೆ.

ಹಣ ಹೊಂದಿಸಿಕೊಳ್ಳಲು ಪೆಟ್ರೋಲ್ ಮತ್ತು ಡೀಸೆಲ್ ಮಾರ್ಗದ ಪರೋಕ್ಷ ತೆರಿಗೆಗಳ ಮೇಲಿನ ಈ ಅವಲಂಬನೆಯು ಬೆಳವಣಿಗೆಯ ವೇಗ ಮತ್ತು ಮಾದರಿಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಇತ್ತೀಚೆಗೆ ಮಾಡಿರುವ ಅಂದಾಜುಗಳ ಪ್ರಕಾರ, ಖಾಸಗಿ ಬಳಕೆ–ವೆಚ್ಚವು ಈಗಾಗಲೇ ತಗ್ಗಿದೆ. ಪೆಟ್ರೋಲಿಯಂ ಉತ್ಪನ್ನಗಳ ತೆರಿಗೆಗಳ ಏರಿಕೆಯು ಹಣದುಬ್ಬರವನ್ನು ಉತ್ತೇಜಿಸುವುದು ಮಾತ್ರವಲ್ಲ, ಜನರ ಬಳಕೆ–ವೆಚ್ಚಗಳು ಮತ್ತಷ್ಟು ಸಂಕುಚಿತಗೊಳಿಸುತ್ತದೆ.

ಈ ರೀತಿಯಲ್ಲಿ ತಗ್ಗಿದ ಬಳಕೆಯ ವೆಚ್ಚಗಳು ಮತ್ತು ಅದರೊಟ್ಟಿಗೇ ತಗ್ಗಿದ ಕೇಂದ್ರ ಸರ್ಕಾರದ ಒಟ್ಟು ನಿಜ ವೆಚ್ಚಗಳೂ ಒಟ್ಟಾಗುವ ಪರಿಣಾಮವಾಗಿ ಬರುವ ವರ್ಷದಲ್ಲಿ ಸಾಂಕ್ರಾಮಿಕ–ಪೂರ್ವ ಆರ್ಥಿಕ ಬೆಳವಣಿಗೆಯ ಮಟ್ಟ ತಲುಪುವುದು ಸಾಧ್ಯವಾಗುವುದಿಲ್ಲ ಮತ್ತು ಅದು ಸ್ಥಗಿತತೆಗೂ ಕಾರಣವಾಗುತ್ತದೆ. ಹಣದುಬ್ಬರ–ಮೂಲ ತೆರಿಗೆಗಳಿಂದ ಖಚಿತವಾಗಿ ಉಲ್ಬಣಗೊಳ್ಳಲಿರುವ ಹಣದುಬ್ಬರ ಸನ್ನಿವೇಶದಲ್ಲಿ, ಈ ಬಜೆಟ್ ಸ್ಥಗಿತತೆ ಆವರಿಸಿದ ಹಣದುಬ್ಬರಕ್ಕೆ (ಸ್ಟ್ಯಾಗ್‌ಫ್ಲೇಶನ್'ಗೆ) ದಾರಿ ಮಾಡಿಕೊಡುತ್ತದೆ.

ಚುನಾವಣಾ ವರ್ಷದಲ್ಲಿ, ಸರ್ಕಾರವು ಈ ತಿರೋಗಾಮಿ ಮತ್ತು ಸಂಪ್ರದಾಯಶರಣ ವಿತ್ತ ನಿಲುವಿಗೆ ಅಂಟಿಕೊಳ್ಳುವ ಆಯ್ಕೆಯನ್ನು ಮಾಡಿಕೊಂಡಿರುವುದು ಒಂದು ಸ್ಪಷ್ಟ ಸಂದೇಶವನ್ನು ಕೊಡುತ್ತಿದೆ. ಈ ಸರಕಾರಕ್ಕೆ ಹಣಕಾಸು ನೀತಿ ಮತ್ತು ಬಜೆಟ್, ತನ್ನ ರಾಜಕೀಯ ಭವಿಷ್ಯವನ್ನು ಉತ್ತಮಗೊಳಿಸುವ ಸಾಧನಗಳಲ್ಲ ಎಂಬ ಸಂದೇಶವದು. ಬದಲಿಗೆ, ತನ್ನ 'ನವ ಭಾರತ'ಕ್ಕೆ ಸೂಕ್ತವಾದ ರಾಷ್ಟ್ರೀಯವಾದ ಎಂಬ ವೇಷಧರಿಸಿದ, ಕೋಮು–ಧ್ರುವೀಕರಣದ ಕಾರ್ಯಸೂಚಿಯೊಂದಿಗೆ ಸಾಧ್ಯವಿರುವ ಎಲ್ಲ ಪಟ್ಟುಗಳನ್ನೂ ಹಾಕಲಾಗುವುದು!

ಇದರ ಫಲಿತಾಂಶವೆಂದರೆ, ತೊಂದರೆಗೀಡಾದ ಬಹುಸಂಖ್ಯಾತ ನಾಗರಿಕರ ನೆರವಿಗೆ ಹಣಕಾಸು ಮಧ್ಯಪ್ರವೇಶದ ಕ್ರಮಗಳು ನಿರ್ಣಾಯಕವಾಗುತ್ತವೆ ಎಂಬುದು ಈ ಸರಕಾರಕ್ಕೆ ಬೇಕಿಲ್ಲ. ಬೆರಳೆಣಿಕೆಯ ಮೇಲ್ವರ್ಗಗಳವರಿಗೆ ಅನುಕೂಲಗಳು ಮತ್ತು ಸಂಪತ್ತು–ವರಮಾನಗಳ ಅಸಮತೆಗಳ ಸೃಷ್ಟಿಯಿಂದಾಗಿ ಹದಗೆಡುತ್ತಿರುವ ಆರ್ಥಿಕ ಸಂಕಷ್ಟಗಳ ಬಗ್ಗೆ ನಿರ್ದಯ ನಿರ್ಲಕ್ಷ್ಯದಿಂದಾಗಿ ಜನರಲ್ಲಿ ಉಂಟಾಗುವ ಭಾವನೆಗಳ ಪರಿಣಾಮವನ್ನು ತಟಸ್ಥಗೊಳಿಸಲು ಒಂದು ಧ್ರುವೀಕರಣದ ಅಜೆಂಡಾ ಮಾತ್ರವೇ ಸಾಕಾಗುತ್ತದೆಯೇ ಎಂಬುದನ್ನು ನೋಡಬೇಕಾಗಿದೆ.

ದುಡಿಯುವ ಜನಗಳ ಸಂಕಟಗಳಿಗೆ ಸ್ಪಂದಿಸದ ಬಜೆಟ್......

ಪುಟ 8 ರಿಂದ

ರಿಯಾಯ್ತಿಗಳನ್ನು ಸುರಿಸುತ್ತಿದೆ, ಅದಕ್ಕಾಗಿ ತೆರಿಗೆ ಆಡಳಿತವನ್ನು ಸರಳೀಕರಿಸುವುದಾಗಿ ಹೇಳಿದೆ, ಈ ಮೂಲಕ ತೆರಿಗೆ ವಂಚನೆಗೆ ಪ್ರೋತ್ಸಾಹವನ್ನೇ ಕೊಡುತ್ತಿದೆ. ಬಜೆಟ್‌ನೊಂದಿಗೆ ಹಂಚಿರುವ ದಸ್ತಾವೇಜುಗಳ ಪ್ರಕಾರ, ಈಗಾಗಲೇ 4.05ಲಕ್ಷ ಕೋಟಿರೂ. ತೆರಿಗೆಗಳನ್ನು ಬಾಕಿ ಇಟ್ಟುಕೊಂಡಿರುವ ದೊಡ್ಡ ಬಂಡವಳಿಗರನ್ನು ಈ ಅಪರಾಧಕ್ಕಾಗಿ ಶಿಕ್ಷಿಸುವ ಬದಲು ,ಮತ್ತೆ ಪ್ರೋತ್ಸಾಹಕಗಳೆಂದು 72041 ಕೋಟಿ ರೂ.ಗಳ ಭಾರೀ ರಿಯಾಯ್ತಿಗಳನ್ನು ಕೊಡಮಾಡಿದೆ. ಆದಾಯಗಳು ಹೆಚ್ಚಿದರೂ ಜನರಿಗಾಗಿ ವೆಚ್ಚಗಳಲ್ಲಿ ಏರಿಕೆ ಇಲ್ಲ

ಮೂಲಸೌಕರ್ಯ, ಉತ್ಪಾದನೆ ಮತ್ತು ಖನಿಜ ಕ್ಷೇತ್ರಗಳನ್ನು ಸಂಪೂರ್ಣವಾಗಿ ಆವರಿಸಿರುವ ಹತಾಶ ಮತ್ತು ವಿನಾಶಕಾರಿ ಖಾಸಗೀಕರಣದ ಧಾವಂತದ ಮೂಲಕ ರಾಷ್ಟ್ರೀಯ ಖಜಾನೆಯಿಂದ ದೇಶೀಯ ಮತ್ತು ವಿದೇಶಿ ಖಾಸಗಿ ಕೈಗಳಿಗೆ ಸಂಪನ್ಮೂಲಗಳನ್ನು ವರ್ಗಾಯಿಸಲು ಅನುಕೂಲ ಕಲ್ಪಿಸುತ್ತಿರುವ ಒಟ್ಟಾರೆ ಹಿನ್ನೆಲೆಯಲ್ಲಿ ಬಜೆಟ್ ಅನ್ನು ಪ್ರಸ್ತುತಪಡಿಸಲಾಗಿದೆ. ಹಣಕಾಸು ಸಚಿವರು ತಮ್ಮ ಬಜೆಟ್ ಭಾಷಣದ ಆರಂಭದಲ್ಲಿಯೇ ಟಾಟಾಗಳಿಗೆ ರಾಷ್ಟ್ರೀಯ ವಾಹಕ ವಿಮಾನ ಏರ್ ಇಂಡಿಯಾ ಮತ್ತು ನೀಲಾಚಲ್ ಇಸ್ಪಾತ್ ನ ಬಕ್ಷೀಷನ್ನು ನೀಡಿರುವುದು ತಮ್ಮ ಯಶಸ್ಸು ಎಂದು ತನ್ನ ಬೆನ್ನು ತಾನೇ ತಟ್ಟಿಕೊಂಡರು. ಮತ್ತು ಸರ್ಕಾರಿ ಸ್ವಾಮ್ಯದ ಬಂಡವಾಳ ಆಸ್ತಿಗಳನ್ನು ದೇಶೀಯ ಮತ್ತು ವಿದೇಶಿ ಖಾಸಗಿ ವಲಯಕ್ಕೆ ಮತ್ತಷ್ಟು ವರ್ಗಾವಣೆ ಮಾಡುವ ಸರ್ಕಾರದ ಸಂಕಲ್ಪವನ್ನು ಪುನರುಚ್ಚರಿಸಿದರು. ವಾಸ್ತವವಾಗಿ, ಮೋದಿ ಆಡಳಿತದಲ್ಲಿ, ಆರ್ಥಿಕ ನೀತಿ ರಚನೆಯನ್ನು ಸಂಸತ್ತಿನ ಪ್ರಕ್ರಿಯೆಯ ವ್ಯಾಪ್ತಿಯಿಂದ ಕ್ರಮೇಣ ಹೈಜಾಕ್ ಮಾಡಲಾಗುತ್ತಿದೆ ಮತ್ತು ಪ್ರಸ್ತುತ ಬಜೆಟ್ ಅದೇ ಸರ್ವಾಧಿಕಾರಿ ಮತ್ತು ಜನವಿರೋಧಿ ವಿಧ್ವಂಸಕ ಪ್ರವೃತ್ತಿಯನ್ನು ಬಹಿರಂಗಪಡಿಸುತ್ತದೆ, ಇದು ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹಾನಿಕಾರಕ.

ಆ ಹಿನ್ನೆಲೆಯಲ್ಲಿ, ಉತ್ಪಾದಕ ಉದ್ಯೋಗ ಸೃಷ್ಟಿಗಾಗಿ ಬಂಡವಾಳ ವೆಚ್ಚಗಳನ್ನು ಬಹಳಷ್ಟು ಹೆಚ್ಚಿಸಲಾಗಿದೆ ಎಂಬ ಸಚಿವರ ದೊಡ್ಡ-ದೊಡ್ಡ ಮಾತುಗಳಿಗೆ ಅವರು ಸಲ್ಲಿಸಿರುವ ಅಂಕಿಅಂಶಗಳು ಹೊಂದಿಕೆಯಾಗುವುದಿಲ್ಲ. 2022-23ರಲ್ಲಿ ಬಜೆಟ್ ನಲ್ಲಿ ನಮೂದಿಸಿರುವ ಬಂಡವಾಳ ವೆಚ್ಚವು 1.06 ಲಕ್ಷ ಕೋಟಿ ರೂ.ಗಳಾಗಿದ್ದು, ಇದು 2021-22ರಲ್ಲಿ ಅದೇ ಬಾಬ್ತಿನಲ್ಲಿ ಮಾಡಿರುವ ನಿಜವಾದ ವೆಚ್ಚಕ್ಕೆ ಹೋಲಿಸಿದರೆ ಅತ್ಯಲ್ಪ ಏರಿಕೆಯನ್ನು ತೋರಿಸುತ್ತದೆ, ಹಣದುಬ್ಬರವನ್ನು ಪರಿಗಣಿಸಿದರೆ ಏನೇನೂ ಏರಿಕೆಯಿಲ್ಲ. ವಾಸ್ತವವಾಗಿ, 2022-23ರ ಬಂಡವಾಳ ವೆಚ್ಚವು ಹಿಂದಿನ ವರ್ಷದ ನಿಜವಾದ ಬಂಡವಾಳ ಸ್ವೀಕೃತಿ(ಆದಾಯ)ಗಿಂತ ಸುಮಾರು 63000 ಕೋಟಿ ರೂ.ಗಳಷ್ಟು ಕಡಿಮೆಯಾಗಿದೆ. ಮತ್ತು ಮೂಲಸೌಕರ್ಯ ಮತ್ತು ಸಾಗಾಣಿಕೆ ಅಭಿವೃದ್ಧಿಗಾಗಿ ರಾಷ್ಟ್ರೀಯ ಖಜಾನೆಯಿಂದ ತೆಗೆದುಕೊಳ್ಳಲಾಗುವ ಈ ಬಜೆಟ್ ಬಂಡವಾಳ ವೆಚ್ಚವನ್ನು ಹೆಚ್ಚಾಗಿ ಖಾಸಗಿ ಕಾರ್ಪೊರೇಟ್‌ಗಳಿಗೆ ಈ ಹೆಸರಿನಲ್ಲಿ ಕೊಡಲಾಗುತ್ತದೆ. ಇದನ್ನು ಹಣಕಾಸು ಸಚಿವರು ತನ್ನ ಭಾಷಣದಲ್ಲಿ ಪದೇ ಪದೇ ಪ್ರತಿಪಾದಿಸಿದ್ದಾರೆ. ಈಗಾಗಲೇ ಘೋಷಿಸಲಾದ ರಾಷ್ಟ್ರೀಯ ನಗದೀಕರಣ ಪೈಪ್‌ಲೈನ್ ಯೋಜನೆಯು ಖಾಸಗಿ ಕಾರ್ಪೊರೇಟ್‌ಗಳ ಬಳಕೆಗೆ ಸಾರ್ವಜನಿಕ ನಿಧಿ ಮತ್ತು ಆಸ್ತಿಗಳ ಇಂತಹ ವ್ಯವಸ್ಥಿತವಾಗಿ ಹರಿಸುವ ಸರಕಾರದ ಕಾರ್ಯಕ್ರಮದ ಮೇಲೆ ಬೆಳಕು ಚೆಲ್ಲಿದೆ ಎಂಬುದನ್ನು ತಪನ್ ಸೇನ್ ತಮ್ಮ ಹೇಳಿಕೆಯಲ್ಲಿ ನೆನಪಿಸುತ್ತಾರೆ.

ಅರ್ಥವ್ಯವಸ್ಥೆಯಲ್ಲಿ ಬಳಕೆಯ ವೆಚ್ಚದಲ್ಲಿ ತೀವ್ರ ಕುಸಿತದ ಹಿನ್ನೆಲೆಯಲ್ಲಿ, ಮತ್ತು ಇದು ಬಹುಪಾಲು ಶ್ರಮಜೀವಿಗಳು ಸಂಪೂರ್ಣ ಸಂಕಷ್ಟದಲ್ಲಿ ಬಳಲುತ್ತಿರುವುದರಿಂದಾಗಿ ಆಗಿರುವುದರಿಂದ, ಒಟ್ಟು ಬೇಡಿಕೆಯನ್ನು ಹೆಚ್ಚಿಸಲು, ಕಲ್ಯಾಣ ಮತ್ತು ಸಾಮಾಜಿಕ ಬಾಬ್ತುಗಳಲ್ಲಿ ಮತ್ತು ಉದ್ಯೋಗಾವಕಾಶ ನಿರ್ಮಾಣಕ್ಕೆ ತೀವ್ರ ಗಮನ ಕೇಂದ್ರೀಕರಿಸಬೇಕಾಗಿತ್ತು. ಆದರೆ, ತನ್ನ ವರ್ಗ ಸ್ವರೂಪ ಮತ್ತು ದೊಡ್ಡ-ಉದ್ಯಮಿಗಳ ಪ್ರತಿಯಾದ ಸೇವಾ ದೃಷ್ಟಿಕೋನಕ್ಕೆ ತಕ್ಕಂತೆ ಸರ್ಕಾರವು ಕೇವಲ ತದ್ವಿರುದ್ಧ ದಿಕ್ಕಿನಲ್ಲೇ ಸಾಗಿದೆ. ಐದು ವರ್ಷಗಳಲ್ಲಿ 60 ಲಕ್ಷ ಹೆಚ್ಚುವರಿ ಉದ್ಯೋಗ ಸೃಷ್ಟಿಯಾಗುತ್ತದೆ ಎಂಬುದು ಒಂದು ತಮಾಷೆಯಲ್ಲದೆ ಬೇರೇನೂ ಅಲ್ಲ.

ಬಜೆಟ್ ಎಲ್ಲಾ ದೃಷ್ಟಿಯಿಂದಲೂ ಸರಕಾರದ ನಿರ್ಲಜ್ಜ ಜನವಿರೋಧಿ ಕಡಿತಗಳ ಚಾರಿತ್ರ್ಯವನ್ನು ತೋರ್ಪಡಿಸಿದೆ. 2022-23ರಲ್ಲಿ ಬಜೆಟ್ ಮಾಡಲಾದ ಪ್ರಧಾನ ಮಂತ್ರಿಗಳ ಹೆಸರಿನಲ್ಲಿರುವ ಹಲವಾರು ಕಲ್ಯಾಣ ಕ್ರಮಗಳೂ ಸೇರಿದಂತೆ ಈ ಬಾಬ್ತಿನಲ್ಲಿ ಲೆಕ್ಕಹಾಕಿದ ರೆವಿನ್ಯೂ ವೆಚ್ಚ ರೂ. 3.19 ಲಕ್ಷ ಕೋಟಿ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಕೇವಲ 1% ಹೆಚ್ಚಳ. ಜಿಎಸ್‌ಟಿ ಸಂಗ್ರಹ ಬಹಳ ಚೆನ್ನಾಗಿ ಆಗಿದೆ ಎಂದು ಸಚಿವೆ ತನ್ನ ಭಾಷಣದಲ್ಲಿ ಹೇಳಿಕೊಂಡರೂ ಸಾಮಾಜಿಕ ವೆಚ್ಚದಲ್ಲಿ ಮಾಡಿರುವ ಏರಿಕೆ ಕೇವಲ 1%. ನಿರ್ದಿಷ್ಟವಾಗಿ ಹೇಳಬೇಕೆಂದರೆ, ಮನರೇಗ ಮೇಲಿನ ಹಂಚಿಕೆಯನ್ನು ಹಿಂದಿನ ವರ್ಷ ರೂ 98000 ಕೋಟಿಯಿಂದ ರೂ 73000 ಕೋಟಿಗೆ ಇಳಿಸಲಾಗಿದೆ; ವ್ಯಾಪಕವಾದ ತೀವ್ರ ಹಸಿವಿನ ಹಿನ್ನೆಲೆಯಲ್ಲಿಯೂ, ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆಯಡಿಯಲ್ಲಿ ಆಹಾರ ಸಬ್ಸಿಡಿಯನ್ನು 30% ರಷ್ಟು ಕಡಿತಗೊಳಿಸಲಾಗಿದೆ; ಗಗನಕ್ಕೇರುತ್ತಿರುವ ಇಂಧನ ಬೆಲೆಯ ಹಿನ್ನೆಲೆಯಲ್ಲೂ ರಸಗೊಬ್ಬರ ಸಬ್ಸಿಡಿಯನ್ನು 25% ಮತ್ತು ಪೆಟ್ರೋಲಿಯಂ ಸಬ್ಸಿಡಿಯನ್ನು 11% ರಷ್ಟು ಕಡಿತಗೊಳಿಸಲಾಗಿದೆ. ಮಧ್ಯಾಹ್ನದ ಊಟದ ಯೋಜನೆಗೆ (ಈಗ ಪಿಎಂ-ಪೋಶನ್ ಎಂದು ಮರುನಾಮಕರಣ ಮಾಡಲಾಗಿದೆ) ಹಂಚಿಕೆ ಕೂಡ 1267 ಕೋಟಿ ರೂ.ಗಳಷ್ಟು ತೀವ್ರ ಕಡಿತವನ್ನು ಎದುರಿಸಿದೆ.



ದೂರದೃಷ್ಟಿಯ ಬಜೆಟ್!
-ವ್ಯಂಗ್ಯಚಿತ್ರ: ಮಾಧವ ಜೋಷಿ

ಅದೇ ರೀತಿ, ಭತ್ತ ಮತ್ತು ಗೋಧಿಗೆ ಕನಿಷ್ಠ ಬೆಂಬಲ ಬೆಲೆಗಳಿಗೆ ಹಂಚಿಕೆಗಳಲ್ಲಿ 11000 ಕೋಟಿ ರೂ ಕಡಿತ ಮಾಡಲಾಗಿದೆ; ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ, ಪಿಎಂ-ಕಿಸಾನ್ ಯೋಜನೆ, ಬೆಳೆ ಪಾಲನೆ ಇತ್ಯಾದಿಗಳ ಹಂಚಿಕೆಗಳು ತೀವ್ರ ಕಡಿತವನ್ನು ಎದುರಿಸುತ್ತಿವೆ. ರಾಷ್ಟ್ರೀಯ ಆರೋಗ್ಯ ಮಿಷನ್, ಮತ್ತು ಅಂಗನವಾಡಿ (ICDS) ಗಾಗಿ, ಹಣದುಬ್ಬರವನ್ನು ಗಣನೆಗೆ ತೆಗೆದುಕೊಂಡರೆ, ಹಂಚಿಕೆಗಳಲ್ಲಿ ಯಾವುದೇ ಹೆಚ್ಚಳವಿಲ್ಲ. ಇಂತಹ ಅನೇಕ ಉದಾಹರಣೆಗಳಿವೆ.

ಈ ಬಜೆಟ್ ಸಂಪೂರ್ಣವಾಗಿ ಜನ-ವಿರೋಧಿ ಮತ್ತು ರಾಷ್ಟ್ರೀಯ ಅರ್ಥವ್ಯವಸ್ಥೆಯನ್ನು ನಾಶಪಡಿಸುವಂತದ್ದೆಂದು ಹೇಳಿರುವ ಸಿಐಟಿಯು ಇದನ್ನು ಒಟ್ಟಾಗಿ ಪ್ರತಿರೋಧಿಸುವಂತೆ ಕರೆ ನೀಡಿದೆ, ಹಾಗೂ ಈ ವಿನಾಶಕಾರೀ ಧೋರಣೆಯ ಆಳ್ವಿಕೆಯ ವಿರುದ್ಧ 28-29 ಮಾರ್ಚ್‌ನ ಎರಡು ದಿನಗಳ ಸಾರ್ವತ್ರಿಕ ಮುಷ್ಕರದತ್ತ ಸಾಗಬೇಕು ಎಂದು ಹೇಳಿದೆ.

ಇದು ಯಾರಿಗೆ ಅಮೃತಕಾಲವಮ್ಮಾ?

ಪುಟ 12 ರಿಂದ

ಕಾರ್ಯವಿಧಾನಗಳನ್ನೂ ಅಳವಡಿಸದೇ ತೆಗೆದುಕೊಂಡ ಕ್ರಮಗಳಿಂದಾಗಿ ಬಹಳ ಅವ್ಯವಸ್ಥೆಗೆ ಒಳಗಾಗಿದ್ದರಲ್ಲಿ ಶಿಕ್ಷಣ ಕ್ಷೇತ್ರವೂ ಕೂಡ ಒಂದು. ಅಲ್ಲಿ ಆನ್ ಲೈನ್ ತರಗತಿಗಳು ಎಂಬ ಒಂದು ಹೊಸ ಆವಿಷ್ಕಾರ ಅನಿವಾರ್ಯವೂ ಇದ್ದಿರಬಹುದು. ಆದರೆ ಅಲ್ಲಿ ಬಹುತೇಕ ಹುಡುಗಿಯರು ಬಹಳಷ್ಟು ತೊಂದರೆಗೆ ಒಳಗಾದರು. ಎರಡು ವರ್ಷಗಳ ಅನುಭವದ ನಂತರದ ಈ ಬಜೆಟ್ ಸ್ವಲ್ಪವಾದರೂ ಮುನ್ನೋಟವಿದ್ದ ಸರಕಾರವಾಗಿದ್ದಲ್ಲಿ ದೇಶದ ಭವಿಷ್ಯವಾದ ವಿದ್ಯಾರ್ಥಿಗಳು ಮತ್ತು ಅವರ ಭವಿಷ್ಯಕ್ಕಾಗಿ ಸಮರ್ಪಕ ಶಿಕ್ಷಣ ವ್ಯವಸ್ಥೆಗಾಗಿ ಹಿಂದಿಗಿಂತ ಹೆಚ್ಚು ಅನುದಾನ ಮೂಲಸೌಕರ್ಯಗಳಿಗಾಗಿ ಮೀಸಲಿಟ್ಟು ವಿಶೇಷ ಕ್ರಮಗಳನ್ನು ಜಾರಿಗೆ ತರಬಹುದಿತ್ತು. ಆದರೆ ಅದರ ಬದಲು ಮಹಿಳಾ ವಿರೋಧೀ ನೂತನ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಹೊರಟಿದೆ. ಜೊತೆಗೆ ಇನ್ನಷ್ಟು ಆನ್ ಲೈನ್ ಮತ್ತು ವರ್ಚುಯಲ್ ವೇದಿಕೆಗಳಿಗೆ ಪ್ರಾಶಸ್ತ್ಯ ನೀಡಿದೆ. ಟೀವಿ. ಮೂಲಕ ಶಿಕ್ಷಣ, ಇ-ವಿದ್ಯಾ ಯೋಜನೆ ಮತ್ತು ಡಿಜಿಟಲ್ ಯುನಿವರ್ಸಿಟಿಗಳಿಗೆ ಹಣ ಕಾಯ್ದಿರಿಸಿದೆ. ಶಿಕ್ಷಣಕ್ಕಾಗಿ ಮೀಸಲಿರಿಸುವ ಹಣವನ್ನು ವರ್ಷದಿಂದ ವರ್ಷಕ್ಕೇ ಏರಿಸುವ ಬದಲು ಅಗತ್ಯಕ್ಕಿಂತ ಅತೀ ಕಡಿಮೆ ಕೊಡಲಾಗುತ್ತಿರುವುದೇ ಆಕ್ಷೇಪಾರ್ಹ, ಅದರಲ್ಲಿ ಈಗ ವರ್ಚುಯಲ್ ವೇದಿಕೆಗೆ ಆದ್ಯತೆ ಕೊಡುವ ಮೂಲಕ ಹುಡುಗಿಯರ ಶಿಕ್ಷಣದ ಅವಕಾಶವನ್ನು ಕಸಿಯುವುದೇ ಆಗಿದೆ. ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಷಿಪ್ ಮುಂತಾಗಿ ಪ್ರೋತ್ಸಾಹಕರ ಕ್ರಮಗಳ ಬದಲು ಆನ್‌ಲೈನ್ ಶಿಕ್ಷಣದ ಅಗತ್ಯಗಳಿಗೆ ಸೌಲಭ್ಯ ಪೂರೈಕೆಗೆ ಗಮನ ಹರಿಯಲಿದೆ.



ಅಚ್ಚೇ ದಿನ್ ಬರಲಿದೆ — 2019ರ ವೇಳೆಗೆ — ನ್ಯೂಇಂಡಿಯ 2022ರ ವೇಳೆಗೆ — 25 ವರ್ಷಗಳ ನೀಲನಕ್ಷೆ

ವ್ಯಂಗ್ಯಚಿತ್ರ: ಸತೀಶ ಆಚಾರ್ಯ

ಉಳ್ಳವರಿಗೆ ಪಾಯಸ-ದುಡಿದು ದೇಶ ಕಟ್ಟುವವರಿಗೆ ವಿಷ:


ಎಲ್ಲ ಕಾರ್ಪೊರೇಟ್ ತೆರಿಗೆದಾರರಿಗೆ 3% ತೆರಿಗೆ ರಿಯಾಯಿತಿ ಘೋಷಣೆಯಾಗಿದೆ. ಆದರೆ ಅದೇ ವೇಳೆಗೆ ಮಧ್ಯಮ ವರ್ಗದ ನೌಕರರ ತೆರಿಗೆ ವಿಧಾನದಲ್ಲಿ ದುಡಿಯುವ ಮಹಿಳೆಯರ ತೆರಿಗೆಯಲ್ಲಿ ಯಾವುದೇ ರಿಯಾಯಿತಿ ಕೊಟ್ಟಿಲ್ಲ. ಇದಲ್ಲದೇ ಕಳೆದ ಎರಡು ವರ್ಷಗಳಲ್ಲಿ ಮೇಲ್ ಸ್ತರದ ಶ್ರೀಮಂತರ ಆದಾಯದಲ್ಲಿ ಮಿತಿಮೀರಿ ಹೆಚ್ಚಳವಾಗಿದೆ. ಕೇವಲ 10% ಅತಿ ಶ್ರೀಮಂತರು 75% ಸಂಪತ್ತಿನ ಒಡೆತನ ಹೊಂದಿದ್ದಾರೆ. ಕೆಳಗಿನ 60% ಜನರು 5% ಗಿಂತ ಕಡಿಮೆ ಸಂಪತ್ತನ್ನು ಹಂಚಿಕೊಂಡಿದ್ದಾರೆ. ಈ ಅಸಮಾನತೆಯ ಪ್ರಮಾಣವನ್ನು ಕಡಿಮೆ ಮಾಡಲು ಸಂಪತ್ತಿನ ಮೇಲೆ ತೆರಿಗೆ ಹಾಕುವ ಮತ್ತು ಅದರ ಮೂಲಕ ದುಡಿದು ಬದುಕುವ, ದೇಶ ಕಟ್ಟುವ ಜನರಿಗೆ ಒಂದಿಷ್ಟಾದರೂ ಸಹನೀಯ ಬದುಕು ಕೊಡಬಹುದಿತ್ತು. ದುಡಿಯುವ ಜನ ಸಮುದಾಯ ಮತ್ತವರ ಕುಟುಂಬಗಳು ಜನಸಂಖ್ಯೆಯ ಸುಮಾರು 80% ಇದ್ದು ಅವರ ಮೇಲೆ ಪರೋಕ್ಷ ತೆರಿಗೆಯ ಹೊರೆ ಹೊರಿಸಲಾಗಿದೆ.

ಹೆಚ್ಚಿದ ನಿರುದ್ಯೋಗ ನೆಲ ಕಚ್ಚಿದ ಬದುಕು:

ನಿರುದ್ಯೋಗ ದ ಪ್ರಮಾಣ ದೇಶದಲ್ಲಿ ಈ ಹಿಂದಿನ ಎಲ್ಲ ದಾಖಲೆಗಳನ್ನು ಮುರಿದಿದೆ. ಮಹಿಳಾ ನಿರುದ್ಯೋಗ ಪ್ರಮಾಣ ನಗರ ಪ್ರದೇಶಗಳಲ್ಲಿ 19.9%ಗೆ ಮತ್ತು ಗ್ರಾಮೀಣ ಪ್ರದೇಶದಲ್ಲಿ 12.8% ಗೆ ಡಿಸೆಂಬರ್ 2021ರಲ್ಲಿ ದಾಖಲೆಯಾಗಿದೆ. ಸಾಲದ ಶೂಲಕ್ಕೆ ಈ ವಿಭಾಗ ಸಿಕ್ಕಿ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಹಸಿವಿನಿಂದ ನರಳುತ್ತಿರುವ ಕುಟುಂಬಗಳ ಆಕ್ರಂದನಕ್ಕೆ ಕಿವಿಗೊಡದ ಸರಕಾರ ಈ ಕಾಲವನ್ನು ಅಮೃತಕಾಲವೆಂದು ಕರೆದುಕೊಳ್ಳುತ್ತಿದೆ.

ಗ್ರಾಮೀಣ ಅಭಿವೃದ್ದಿಯ ಹೆಸರು ರೈತರಿಗೆ ಕೆಸರು:

ಈ ಬಜೆಟ್ ರೈತ ಮತ್ತು ಕೃಷಿ ವಿರೋಧೀ ಧೋರಣೆಯನ್ನೇ ಪ್ರಕಟಪಡಿಸಿದೆ. ಹೋರಾಟದ ಕಣದಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಪಾಲ್ಗೊಂಡ ಮಹಿಳೆಯರಿಗೆ ಅಮೃತಕಾಲ ಒದಗಿ ಬರಲಿಲ್ಲ. ಗ್ರಾಮೀಣಾಭಿವೃದ್ದಿಯ ಪಾಲಿನಲ್ಲಿಯೂ 5.59% ನಿಂದ 5.23% ಗೆ ಇಳಿಸಲಾಗಿದೆ. ಕನಿಷ್ಠ ಬೆಂಬಲ ಬೆಲೆಗೊಂದು ಕಾನೂನಿನ ಬೇಡಿಕೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದಲ್ಲದೇ ಸಂಸತ್ತಿನಲ್ಲಿ ದಾರಿ ತಪ್ಪಿಸುವ ರೀತಿಯ ಅಂಕಿ ಸಂಕಿಗಳನ್ನು ಮುಂದಿಟ್ಟಿದ್ದಾರೆ. ಈ ಕ್ರಮಗಳು ಒಟ್ಟು ಗ್ರಾಮೀಣಾಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಜೊತೆಗೇ ಗ್ರಾಮೀಣ ಭಾಗದ ಮಹಿಳೆಯರನ್ನು ಇನ್ನೂ ಶೋಚನೀಯ ಸ್ಥಿತಿಗೆ ತಳ್ಳುತ್ತದೆ. ಭಾರತದ ಆಹಾರ ನಿಗಮಕ್ಕೆ ಕೊಡುವ ಅನುದಾನದಲ್ಲಿಯೂ ಕಡಿತ ಮಾಡಲಾಗಿದೆ. ಅಲ್ಲದೆಯೇ ಗೊಬ್ಬರದ ಸಬ್ಸಿಡಿಯನ್ನೂ ಕಡಿತ ಮಾಡಲಾಗಿದೆ. ಫಸಲ್ ಬಿಮಾ ಯೋಜನೆಯಲ್ಲಿಯೂ 500 ಕೋಟಿ ಕಡಿತ ಮಾಡಿದ್ದು ಪಿ.ಎಂ.ಕಿಸಾನ್ ಯೋಜನೆಯಲ್ಲಿಯೂ ಮೊದಲಿಗಿಂತ 9% ಕಡಿಮೆ ಮಾಡಲಾಗಿದೆ. ಆಹಾರ ದಾಸ್ತಾನು ಮತ್ತು ಗೋಡೌನುಗಳಿಗೆ 28% ಕಡಿತ ಮಾಡಿದ್ದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಡುತ್ತಿದೆ. ಆರ್ಥಿಕ ಸಮೀಕ್ಷೆ ಬಹಳ ಸ್ಪಷ್ಟವಾಗಿ ಕೃಷಿ ಕುಟುಂಬದ ಸರಾಸರಿ ಮಾಸಿಕ ಆದಾಯ 10218 ರೂಪಾಯಿಗಳು ಎಂದು ಹೇಳಿದೆ. ಆದರೆ ಇದಾವುದನ್ನೂ ಪರಿಗಣನೆಗೇ ತೆಗೆದುಕೊಳ್ಳದ ಸರಕಾರ ಈಗ ಸಾಯುತ್ತಿರುವವರಿಗೆ ನೀರೂ ಕೊಡಲು ತಯಾರಿಲ್ಲದೇ 25 ವರ್ಷಗಳ ನಂತರದ ಮುನ್ನೋಟದ ತುಪ್ಪ ಮೂಗಿಗೆ ಸವರಿ ಅಮೃತ ಕಾಲವೆಂದು ಕರೆದಿದೆ. ಅವರ ಈ ಸುಳ್ಳು ಇದು ಅನೃತಕಾಲವೆಂದು ಸಾಬೀತು ಪಡಿಸಿದೆ.



ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

ಅಚ್ಚೇ ದಿನ್ ಬರಲಿದೆ, ಆದರೆ ಅಮೃತ ಕಾಲದ ನಂತರವೇ, ಅದು ಬರುವುದು ಈಗಿನ ಕಲಿಕಾಲದ ನಂತರ. ಕ್ರೋನೋಲಾಜಿ ಸರಿಯಾಗಿ ತಿಳಿ

JANASHAKTHI KANNADA VARA PATRIKE FEBRUARY 7-13, 2022 Price: Rs. 10/- Date of Publication: 4 FEBRUARY 2022 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2



ವಿದ್ಯುತ್ ಶುಲ್ಕದೊಂದಿಗೆ ಕಸ ನಿರ್ವಹಣೆ ಶುಲ್ಕ ಸಂಗ್ರಹ: ಸಿಪಿಐ(ಎಂ) ಪ್ರತಿಭಟನೆ

ವಿದ್ಯುತ್ ಶುಲ್ಕದೊಂದಿಗೆ ಕಸ ನಿರ್ವಹಣೆ ಶುಲ್ಕವನ್ನು ಸಂಗ್ರಹ ಮಾಡಲು ಮುಂದಾಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಂದಾಗಿರುವ ಕ್ರಮವನ್ನು ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ಕಛೇರಿ ಮುಂಭಾಗ ನೆರೆದ ಸಿಪಿಐ(ಎಂ) ಪಕ್ಷದ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿ ಕಾರ್ಯಕರ್ತರು ಸರ್ಕಾರ ನೀತಿಯನ್ನು ಖಂಡಿಸಿ ಘೋಷಣೆಗಳನ್ನು ಕೂಗಿದರು.

ಸಿಪಿಐ(ಎಂ) ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಪ್ರತಾಪ್ ಸಿಂಹ ಮಾತನಾಡಿ, ಆಸ್ತಿ ತೆರಿಗೆದ ಜೊತೆಯಲ್ಲೇ ಮಾಲೀಕರಿಂದ ಘನತ್ಯಾಜ್ಯ ನಿರ್ವಹಣಾ ಸುಂಕ ಸಂಗ್ರಹಿಸುತ್ತಾರೆ. ಹೀಗಿರುವಾಗ ಮತ್ತೆ ಜನರ ಸಂಕಷ್ಟಗಳಿಗೆ ಮತ್ತಷ್ಟು ಹೊರೆ ನೀಡುವ ನಿಟ್ಟಿನಲ್ಲಿ ಮತ್ತೆ ನಿರ್ವಹಣಾ ಶುಲ್ಕವನ್ನು ವಿಧಿಸುವುದು ಅಕ್ಷಮ್ಯ ಅಪರಾಧವಾಗಿದೆ ಎಂದು ಹೇಳಿದರು.

ಬೆಂಗಳೂರು ನಗರದಲ್ಲಿ ಘನತ್ಯಾಜ್ಯ ನಿರ್ವಹಣೆಯಲ್ಲಿ ನಡೆಯುತ್ತಿರುವ ಭಾರೀ ಪ್ರಮಾಣದ ಭ್ರಷ್ಟಾಚಾರದಿಂದಾಗಿ ನಗರಕ್ಕೆ ಗಾರ್ಬೆಜ್ ಸಿಟಿ ಎಂಬ ಅಪಖ್ಯಾತಿ ಪಡೆದುಕೊಂಡಿದೆ. ನಿರ್ವಹಣೆಯಲ್ಲಿನ ಲೋಪಗಳನ್ನು ಸರಿಪಡಿಸದ ಆಳುವ ಸರ್ಕಾರ ಜನರ ಮೇಲೆ ಹೆಚ್ಚುವರಿ ಶುಲ್ಕವನ್ನು ವಿಧಿಸುತ್ತಿದೆ. ಭ್ರಷ್ಟಾಚಾರಿಗಳು ಹಾಗೂ ಮಾಫಿಯಾಗಳು ಶಾಮೀಲಾಗಿ ಜನರ ತೆರಿಯ ಹಣ ದೊಡ್ಡ ಪ್ರಮಾಣದಲ್ಲಿ ಪೋಲಾಗುತ್ತಿದೆ ವಿನಃ ಸಾಮಾನ್ಯ ಜನರಿಗೆ ಅನುಕೂಲವನ್ನು ಕಲ್ಪಿಸಿಲ್ಲ ಎಂದು ತಿಳಿಸಿದರು.

ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಬಿ.ಎನ್.ಮಂಜುನಾಥ್ ಮಾತನಾಡಿ, ಜನರ ಜೀವನಾದಯ ಕಡಿಮೆಯಿದೆ, ಸಾಕಷ್ಟು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಬಿಬಿಎಂಪಿ ಜನರ ಬದುಕನ್ನು ಉತ್ತಮ ಪಡಿಸುವ ಕ್ರಮಗಳನ್ನು ಕೈಗೊಳ್ಳುವ ಬದಲಾಗಿ ಪ್ರತಿ ಮನೆಯಿಂದ ವಿದ್ಯುತ್ ಶುಲ್ಕದೊಂದಿಗೆ ಘನತ್ಯಾಜ್ಯಕ್ಕೆ ಅನುಗುಣವಾಗಿ ಕಸ ನಿರ್ವಹಣಾ ಶುಲ್ಕ ಸಂಗ್ರಹ ಮಾಡುವುದಕ್ಕೆ ಮುಂದಾಗಿದೆ. ಅಲ್ಲದೆ, ಕಸ ನಿರ್ವಹಣೆ ಶುಲ್ಕ ಸಂಗ್ರಹಕ್ಕೆ ಬೆಸ್ಕಾಂ ನೆರವು ಕೋರಿರುವುದು ಜನ ವಿರೋಧಿ ಕ್ರಮವಾಗಿದೆ ಎಂದು ಹೇಳಿದರು.

ಬಿಬಿಎಂಪಿ ಪ್ರಸ್ತಾವನೆ ಸಲ್ಲಿಸಿರುವಂತೆ, ಗೃಹ ತ್ಯಾಜ್ಯ ಉತ್ಪಾದಕರಿಗೆ ವಿದ್ಯುತ್ ಶುಲ್ಕ ಆಧರಿಸಿ ಅದಕ್ಕೆ ಅನುಗುಣವಾಗಿ ಕಸ ನಿರ್ವಹಣೆ ಶುಲ್ಕವನ್ನು ರೂ. 30 ರಿಂದ ರೂ. 500ರ ವರೆಗೆ ಸಂಗ್ರಹಕ್ಕೆ ಮುಂದಾಗುವ ಮೂಲಕ ಪೌರ ಕಾರ್ಮಿಕರ ವೇತನ, ಕಸ ನಿರ್ವಹಣೆಗೆ ಬಿಬಿಎಂಪಿ ಮಾಡುತ್ತಿರುವ ವೆಚ್ಚವನ್ನು ಹಂತ ಹಂತವಾಗಿ ಜನರ ಮೇಲೆ ನೇರವಾಗಿ ವರ್ಗಾಹಿಸಲು ಮುಂದಾಗಿದೆ. ಕಸ ನಿರ್ವಹಣೆಗೆ ಪ್ರತ್ಯೇಕ ಕಂಪನಿಯ ಸ್ಥಾಪನೆಯೊಂದಿಗೆ ಮುಂಬರುವ ದಿನಗಳಲ್ಲಿ ಅದನ್ನು ಸಂಪೂರ್ಣವಾಗಿ ಖಾಸಗಿಯವರಿಗೆ ವಹಿಸಿ ಖಾಸಗಿಯವರು ಲಾಭ ಮಾಡಿಕೊಳ್ಳಲು ಅನುಕೂಲವಾಗುವಂತಹ ಪಾಲಿಕೆಯ ಇಂತಹ ಪ್ರಸ್ತಾವನೆಗಳು ಸಂಪೂರ್ಣವಾಗಿ ಜನ ವಿರೋಧಿಯಾಗಿವೆ ಎಂದು ವಿವರಿಸಿದರು.

ಸಿಪಿಐ(ಎಂ) ಮಡಿವಾಳ ವಲಯ ಕಾರ್ಯದರ್ಶಿ ಲಿಂಗರಾಜು ಮಾತನಾಡಿ, ನಗರದಲ್ಲಿ ರಸ್ತೆಗಳು ಗುಂಡಿಮಯವಾಗಿವೆ. ಇದರಿಂದ ಅಲ್ಲಲ್ಲಿ ಆಗುವ ಅಪಘಾತಗಳಿಂದ ಸಾವುಗಳು ಸಂಭವಿಸಿರುವುದು ಕಂಡುಬಂದಿದೆ. ನಗರದ ಹಲವು ಪ್ರದೇಶಗಳಲ್ಲಿ ಉತ್ತಮ ರಸ್ತೆಗಳು ಇಲ್ಲದೆ ಜನರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ರಾಜ್ಯದ ರಾಜಧಾನಿಯಾಗಿರುವ ಬೆಂಗಳೂರು ಬೃಹತ್ ನಗರವಾಗಿದೆ. ಇಲ್ಲಿನ ಸರ್ಕಾರಗಳಲ್ಲಿನ ಇಲಾಖೆಗಳ ನಡುವೆ ಸಮನ್ವಯತೆ ಕೊರತೆ ಎದ್ದು ಕಾಣುತ್ತಿದೆ. ಕಳೆದ ವರ್ಷ ಸುರಿದ ಭಾರೀ ಮಳೆಯಿಂದ ರಸ್ತೆಗಳು ಹದಗೆಟ್ಟಿವೆ. ವಿವಿಧ ಕಾಮಗಾರಿಗಳಿಗಾಗಿ ಅಗೆದಿರುವ ರಸ್ತೆಗಳನ್ನು ಸಮರ್ಪಕವಾಗಿ ಮುಚ್ಚದೆ ನಗರದ ರಸ್ತೆಗಳು ಹಾಳಾಗಿದೆ. ಇವುಗಳನ್ನು ಗಮನಿಸಿಯೂ ಕ್ಷಿಪ್ರಗತಿಯಲ್ಲಿ ಕಾರ್ಯಚರಣೆಗೆ ಮುಂದಾಗದ ಪಾಲಿಕೆಯು ಮೌನಕ್ಕೆ ಶರಣಾಗಿರುವುದು ಖಂಡನೀಯ ಎಂದು ತಿಳಿಸಿದರು.

ಸಿಪಿಐ(ಎಂ) ರಾಜಾಜಿನಗರ ವಲಯ ಕಾರ್ಯದರ್ಶಿ ಡಿ. ಚಂದ್ರಶೇಖರ್ ಮಾತನಾಡಿ, ಬಿಬಿಎಂಪಿಯಲ್ಲಿ ಆಡಳಿತಾಗಾರರ ದರ್ಬಾರು ಹೆಚ್ಚಾಗಿದೆ. ಒಂದೆಡೆ ಚುನಾಯಿತ ಪ್ರತಿನಿಧಿಗಳು ಇಲ್ಲದೆ, ಕೇವಲ ಆಡಳಿತಗಾರರು ಹಾಗೂ ದಲ್ಲಾಳಿಗಳ ಹಿಡಿತದಿಂದಾಗಿ ಬಿಬಿಎಂಪಿ ಭ್ರಷ್ಟಾಚಾರದ ಕೂಪವಾಗಿದೆ. ಪ್ರತಿ ಇಂಚಿಂಚೂ ಕೆಲಸಗಳು ಸಹ ಸುಗಮವಾಗಿ ನಡೆಯುತ್ತಿಲ್ಲ. ಭ್ರಷ್ಟಾಚಾರ ಎಲ್ಲೆಡೆ ವ್ಯಾಪಿಸಿದೆ. ಇತ್ತೀಚಿಗೆ ಗುತ್ತಿಗೆದಾರರೆ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪಿಸಿ, ಎಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರದಲ್ಲಿ ಸರ್ಕಾರ ಮುಳುಗಿದೆ ಎಂಬುದನ್ನು ಸಾಬೀತುಪಡಿಸಿದ್ದಾರೆ. ಇತ್ತೀಚಿಗೆ ನಡೆದ ಲೋಕಾಯುಕ್ತ ಅಥವಾ ಎಸಿಬಿ ದಾಳಿಯಲ್ಲಿ ಸಿಕ್ಕಿಬಿದ್ದ ಅಧಿಕಾರಿಗಳು ಕೋಟಿಗಟ್ಟಲೆ ಅಕ್ರಮ ಸಂಪತ್ತು ಸಂಪಾದಿಸಿರುವುದು ಜಾಹೀರಾಯಿತು. ಆದರೆ, ಅವರ ಮೇಲೆ ಸರ್ಕಾರ ಗಂಭೀರ ಕ್ರಮವನ್ನು ಕೈಗೊಳ್ಳಲಿಲ್ಲ. ಭ್ರಷ್ಟಾಚಾರ ಮಾಡುವವರನ್ನು ರಕ್ಷಣೆ ಮಾಡುವ ದೊಡ್ಡ ವರ್ಗವೇ ಸರ್ಕಾರದ ಆಡಳಿತದಲ್ಲಿದ್ದಾರೆ. ಜನರಿಂದ ವಸೂಲಾಗುವ ತೆರಿಗೆ ಹಣ ಭ್ರಷ್ಟರ ಪಾಲಾಗುತ್ತಿದೆ. ಇದರಿಂದ ಜನತೆ ಬದುಕು ಸಂಕಷ್ಟಕ್ಕೆ ಒಳಗಾಗಿದೆ ಎಂದು ಹೇಳಿದರು.

ಪ್ರತಿಭಟನಾ ಸ್ಥಳಕ್ಕೆ ಬಿಬಿಎಂಪಿ ಮೂಲಭೂತ ಸೌಕರ್ಯ ವಿಭಾಗದ ಮುಖ್ಯ ಇಂಜಿನಿಯರ್ ಪ್ರಹ್ಲಾದ್ ಆಗಮಿಸಿ ಮನವಿ ಸ್ವೀಕರಿಸಿದರು. ನಿಮ್ಮ ಮನವಿಯ ಬಗ್ಗೆ ಅಗತ್ಯ ಕ್ರಮಕೈಗೊಳ್ಳುತ್ತೇವೆ ಎಂದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ. ಪ್ರಕಾಶ್, ಕೆ.ಎನ್. ಉಮೇಶ್, ಜಿಲ್ಲಾ ಮುಖಂಡರಾದ ಟಿ. ಲೀಲಾವತಿ, ಶ್ರೀಪತಿ, ಭಾಗವಹಿಸಿದರು. ಸಿಪಿಐ(ಎಂ) ಬಸವನಗುಡಿ ವಲಯ ಕಾರ್ಯದರ್ಶಿ ಬಸಮ್ಮ ಅವರು ವಂದನಾರ್ಪಣೆ ಮಾಡಿದರು.

ಜನವಿರೋಧಿ ಬಜೆಟ್–ರಾಜ್ಯವ್ಯಾಪಿ ಪ್ರತಿಭಟನೆ



ಕೇಂದ್ರ ಸರಕಾರ ಮಂಡಿಸಿರುವ 2022–23ನೇ ಸಾಲಿನ ಬಜೆಟ್ ಜನವಿರೋಧಿ ಮತ್ತು ಕಾರ್ಪೊರೇಟ್ ಸಂಸ್ಥೆಗಳ ಪರವಾದ ಬಜೆಟ್ ಆಗಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ ಸಿಪಿಐಎಂ ವತಿಯಿಂದ ರಾಜ್ಯವ್ಯಾಪಿ ಪ್ರತಿಭಟನೆ ನಡೆದಿದೆ.

ಕೇಂದ್ರ ಸರ್ಕಾರ ಮಂಡಿಸಿರುವ ಬಜೆಟ್ ಜನವಿರೋಧಿ ಮತ್ತು ಕಾರ್ಪೊರೇಟ್ ಪರವಾದ ಬಜೆಟ್ ಆಗಿದ್ದು, ಕೋವಿಡ್ ಸೇರಿದಂತೆ ಮತ್ತಿತರ ಸಂಕಟಗಳಿಂದ ನಲಗುತ್ತಿರುವ ಭಾರತದ ಸಾಮಾನ್ಯ ಜನರ ಹೊಟ್ಟೆಯ ಮೇಲೆ ಹೊಡೆಯುವ ಬಜೆಟ್ ಇದಾಗಿದೆ ಎಂದು ಪ್ರತಿಭಟನೆಕಾರರು ಆರೋಪಿಸಿದರು.



ರೈತರ ಮೇಲೆ ಸೇಡು ತೀರಿಸಿಕೊಳ್ಳುವಂತಹ, ಮಹಿಳೆಯರ ಬಗ್ಗೆ ಕಠೋರವಾಗಿ ನಡದುಕೊಳ್ಳುವಂತ ಬಜೆಟ್ ಇದಾಗಿದೆ. ಉದ್ಯೋಗ, ಶಿಕ್ಷಣ, ಆರೋಗ್ಯ ಹೀಗೆ ಸಾಮಾನ್ಯ ಜನತೆಯನ್ನು ಎಲ್ಲಾ ಮೂಲಭೂತ ಅಗತ್ಯಗಳಿಂದ ವಂಚಿತರನ್ನಾಗಿಸುವ ಬಜೆಟ್ ಇದಾಗಿದೆ ಬೆಳೆ ವಿಮೆಯ ಅನುದಾನವನ್ನು ರೂ.15,989 ಕೋಟಿಯಿಂದ 15,500 ಕೋಟಿಗೆ ಯೂರಿಯಾ ಸಬ್ಸಿಡಿಯನ್ನು 75,930 ಕೋಟಿಯಿಂದ 63,222 ಕೋಟಿಗೆ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಎಫ್.ಸಿ.ಐ.ಗೆ ನೀಡುವ ಸಬ್ಸಿಡಿಯನ್ನು 2,10,929 ಕೋಟಿಯಿಂದ 1,45,920 ಕೋಟಿಗೆ ಮತ್ತುಅನ್ಯಾಯ ಯೋಜನೆಯ ಅನುದಾನವನ್ನು 98,000 ಕೋಟಿಯಿಂದ 73,000 ಕೋಟಿಗೆ ಇಳಿಸುವುದರ ಮೂಲಕ ರೈತ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಕೃಷಿ ಕ್ಷೇತ್ರಕ್ಕೆ ಕೇವಲ ರೂ.982 ಕೋಟಿಯನ್ನಷ್ಟೇ ಹೆಚ್ಚುವರಿ ಅನುದಾನ ನೀಡಿ ರೂ.1,31,531 ಕೋಟಿಯಿಂದ ರೂ.1,32,513 ಕೋಟಿಗೆ ಹೆಚ್ಚಿಸಿದೆ. ಇಡೀ ಬಜೆಟ್ ಉದ್ದಕ್ಕೂ ಹೀಗೆ ಭಾರತವನ್ನು ಬರ್ಬಾದು ಮಾಡಿ ಕಾರ್ಪೊರೇಟ್ ಗಳ ಖಜಾನೆ ತುಂಬುವ ಕ್ರಮವಿದೆ ಎಂದು ಆರೋಪಿಸಿದರು.

ಕೋಲಾರ, ತುಮಕೂರು, ಕಲಬುರ್ಗಿ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ ಸಿಪಿಐಎಂ ಕಾರ್ಯಕರ್ತರು ಕೇಂದ್ರ ಬಜೆಟ್ ವಿರೋಧಿಸಿ ಪ್ರತಿಭಟನೆ ನಡೆಸಿದರು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**